
ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 10 | ಫೆಬ್ರವರಿ 28–ಮಾರ್ಚ್ 6, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




## ‘ಚಿಂತನೆಗಳ ಸಮರಕೆ’ ಓಗೊಟ್ಟ ‘ಕೆಂಪು ಪುಸ್ತಕ ದಿನ’



### ಕೋಲಾರದಲ್ಲಿ ಜನಾಗ್ರಹ ಸಮಾವೇಶ

## ಭೂಹೀನರಿಗೆ ಕೃಷಿ ಭೂಮಿ ಬೇಕು ಚಿನ್ನದ ಗಣಿ ಪುನರಾರಂಭಿಸಬೇಕು





## ಉಕ್ರೇನ್ ಯುದ್ಧದ ಕುರಿತು ಪ್ರಶ್ನೆಗಳು



## ‘ಸೌಹಾರ್ದತೆಗೆ ಧಕ್ಕೆ ತಂದರೆ ನರಕ ಸೃಷ್ಟಿ’





## ದಲಿತ ಪರ ಬಜೆಟ್ ಮಂಡನೆಗೆ ಆಗ್ರಹ



## ಮಾರ್ಚ್ 28–29, 2022:
ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದತ್ತ
– ಆಟೋ–ಟ್ಯಾಕ್ಸಿ ಚಾಲಕರ ಜೀವನೋಪಾಯದ ರಕ್ಷಣೆಗೆ

# ಎಲ್ಐಸಿ ಐಪಿಒ ವಿರುದ್ಧ ಐಕ್ಯ ಪ್ರತಿಭಟನೆ ತೀವ್ರಗೊಳಿಸಲು ನೌಕರರ ನಿರ್ಧಾರ
## ಮಾರ್ಚ್ 5 ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ಸತ್ಯಾಗ್ರಹ

ಎಲ್ಐಸಿಯನ್ನು ಶೇರು ಮಾರುಕಟ್ಟೆಗೆ ಒಯ್ಯುವುದಕ್ಕೆ ವ್ಯಾಪಕ ವಿರೋಧದ ಹೊರತಾಗಿಯೂ ಸರಕಾರದ ಪ್ರಯತ್ನ ತೀವ್ರಗೊಳ್ಳುತ್ತಿದೆ. ಈ ಕುರಿತು ಫೆಬ್ರುವರಿ 13ರಂದು ಕರಡು ಪ್ರಾಸ್ಪೆಕ್ಟಸ್‌ನ್ನು ಸೆಬಿ(ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ)ಗೆ ಸರಕಾರ ಸಲ್ಲಿಸಿದ್ದು, ಮಾರ್ಚ್ 11 ರಂದು 10 ರೂ. ಮುಖಮೌಲ್ಯದ ಸುಮಾರು 32 ಕೋಟಿ ಶೇರುಗಳನ್ನು ಆರಂಭಿಕ ಮಾರಾಟಕ್ಕೆ ಇಡುವ(ಐಪಿಒ) ಯೋಚನೆ ಸರಕಾರಕ್ಕಿದೆ ಎಂದು ವರದಿಯಾಗಿದೆ.

ಈ ಶೇರು ಮಾರಾಟದಿಂದ ಬರುವ ಹಣ ಎಲ್ಲವೂ ಸರಕಾರಕ್ಕೆ ಹೋಗುತ್ತದೆ, ಎಲ್ಐಸಿಗೆ ಏನೂ ಸಿಗುವುದಿಲ್ಲ. ಅಂದರೆ ಈ ಹಣ ಎಲ್ಐಸಿಯ ಪಾಲಿಸಿದಾರರ ಪ್ರಯೋಜನಕ್ಕೆ ಅಲ್ಲ, ಬದಲಿಗೆ ಸರಕಾರದ ಬಜೆಟ್ ಕೊರತೆಯನ್ನು ಸರಕಾರ ತಾನೇ ಹಾಕಿಕೊಂಡ (ಜಿಡಿಪಿಯ) 6.4%ಕ್ಕೆ ಸೀಮಿತಗೊಳಿಸಲಿಕ್ಕಾಗಿ ಮಾತ್ರ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎನ್ನಲಾಗಿದೆ.

ಇದರ ವಿರುದ್ಧ ಸತತ ಹೋರಾಟ ನಡೆಸಿಕೊಂಡು ಬಂದಿರುವ ಎಲ್ಐಸಿಯ ನೌಕರರು ಮತ್ತು ಅಧಿಕಾರಿಗಳ ಜಂಟಿ ವೇದಿಕೆ ಫೆಬ್ರುವರಿ 20ರಂದು ಹೈದರಾಬಾದಿನಲ್ಲಿ ಸಭೆ ಸೇರಿ ತಮ್ಮ ಐಕ್ಯ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿವೆ. ಇದರ ಭಾಗವಾಗಿ ಮಾರ್ಚ್ 5ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ಪ್ರತಿಭಟನೆ ನಡೆಸಲು ಜಂಟಿ ವೇದಿಕೆ ನಿರ್ಧರಿಸಿದೆ. ಈ ಕಾರ್ಯಕ್ರಮದಲ್ಲಿ ಸರಕಾರದ ಈ ಕ್ರಮಕ್ಕೆ' ವಿರೋಧಕ್ಕೆ ಕಾರಣಗಳು, ಇದರ ದುಷ್ಪರಿಣಾಮಗಳ ಬಗ್ಗೆ ಗಮನ ಸೆಳೆಯಲಾಗುವುದು ಮತ್ತು ಸಾರ್ವಜನಿಕರ ಬೆಂಬಲವನ್ನು ಕೇಳಲಾಗುವುದು ಎಂದು ಜಂಟಿ ವೇದಿಕೆ ತಿಳಿಸಿದೆ.

ಮೂರನೇ ಮತ್ತು ನಾಲ್ಕನೇ ದರ್ಜೆಯ ನೌಕರರ ಸಂಘಟನೆಗಳಾದ ಎಐಐಇಎ, ಎಐಎಲ್ಐಸಿಇಎಫ್, ಅಭಿವೃದ್ಧಿ ಅಧಿಕಾರಿಗಳ ಸಂಘಟನೆಯಾದ ಎನ್‌ಎಫ್‌ಐಎಫ್‌ಡಬ್ಲ್ಯುಐ ಮತ್ತು ದರ್ಜೆ1 ಅಧಿಕಾರಿಗಳ ಸಂಘಗಳ ಒಕ್ಕೂಟ ಈ ಜಂಟಿ ವೇದಿಕೆಯನ್ನು ರಚಿಸಿಕೊಂಡಿವೆ.

**ದೇಶಪ್ರೇಮೀ ಕರ್ತವ್ಯ**

ಶೇರು ಮಾರಾಟವನ್ನು ಆರಂಭಿಸುವ ದಿನದಂದು ಸಿಬ್ಬಂದಿ ವರ್ಗಗಳ ಪ್ರತಿಭಟನಾ ಕಾರ್ಯಾಚರಣೆಯ ಬಗ್ಗೆಯೂ ಜಂಟಿ ವೇದಿಕೆಯ ಸಭೆಯಲ್ಲಿ ಚರ್ಚಿಸಲಾಗಿದ್ದು, ಅದನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದೂ ಜಂಟಿ ವೇದಿಕೆ ತಿಳಿಸಿದೆ. ಜಂಟಿ ವೇದಿಕೆಯ ಪ್ರಮುಖ ಭಾಗವಾಗಿರುವ ಅಖಿಲ ಭಾರತ ವಿಮಾನೌಕರರ ಸಮಘ ಈಗಾಗಲೇ ಎಲ್ಐಸಿ ಐಪಿಒ ಆರಮಭಿಸುವ ದಿನದಂದು ಒಂದು ದಿನದ ಮುಷ್ಕರಕ್ಕೆ ಸಿದ್ಧವಾಗಿರುವಂತೆ ತನ್ನ ಸದಸ್ಯರಿಗೆ ಕರೆ ನೀಡಿದೆ.

ಎಲ್ಐಸಿ ಲಕ್ಷಾಂತರ ಸಿಬ್ಬಂದಿಯ ದುಡಿಮೆಯ ಶ್ರಮದಿಂದ ಮತ್ತು ಕೋಟ್ಯಂತರ ಪಾಲಿಸಿದಾರರ ವಿಶ್ವಾಸದಿಂದ ಕಟ್ಟಿ ಬೆಳೆಸಿರುವ ಸಂಸ್ಥೆ. ಇದು ದೇಶದ ಕೈಗಾರಿಕೀಕರಣ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ಆದ್ದರಿಂದ ಈ ಮಹಾನ್ ಸಂಸ್ಥೆಯನ್ನು ರಕ್ಷಿಸಲು ಹೋರಾಟವನ್ನು ಮುಂದುವರೆಸುವುದು ಎಲ್ಐಸಿ ನೌಕರರ ದೇಶಪ್ರೇಮೀ ಕರ್ತವ್ಯ ಎಂದು ಜಂಟಿ ವೇದಿಕೆ ಹೇಳಿದೆ.

ಈ ಮೊದಲು ಸರಕಾರ 10% ಶೇರುಗಳನ್ನು ಮಾರಾಟ ಮಾಡುವುದಾಗಿ ಹೇಳಿತು. ಇದಕ್ಕೆ ನೌಕರರಿಂದ ಮಾತ್ರವೇ ಅಲ್ಲ,

ಪುಟ 12 ನೋಡಿ

# ಅಂಗನವಾಡಿ ನೌಕರರ ಬೇಡಿಕೆಗಳನ್ನು ಈಡೇರಿಸಿ–ಎಐಡಿಡಬ್ಲ್ಯುಎ ಆಗ್ರಹ

ಹರ್ಯಾಣ ಮತ್ತು ದಿಲ್ಲಿಯ ಅಂಗನವಾಡಿ ನೌಕರರು ಕಳೆದ ಎರಡು ತಿಂಗಳಿಂದ ಮುಷ್ಕರದಲ್ಲಿದ್ದಾರೆ. ಅವರ ಬೇಡಿಕೆಗಳನ್ನು ತಕ್ಷಣವೇ ಸ್ವೀಕರಿಸಬೇಕು ಎಂದು ಎರಡೂ ಸರಕಾರಗಳನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಆಗ್ರಹಿಸಿದೆ.

ಹರ್ಯಾಣದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಡಿಸೆಂಬರ್ 8ರಿಂದ ಮುಷ್ಕರದಲ್ಲಿದ್ದಾರೆ. ಅವರಲ್ಲಿ ಸಾವಿರಾರು ಮಂದಿ ಮುಖ್ಯಮಂತ್ರಿಗಳ ವಿಧಾನ ಸಭಾ ಕ್ಷೇತ್ರವಾದ ಕರ್ನಾಲ್‌ನಲ್ಲಿ ಹಗಲು–ರಾತ್ರಿ ಧರಣಿಯಲ್ಲಿ ಭಾಗವಹಿಸುತ್ತಿದ್ದಾರೆ.

ಅವರಿಗೆ ಮೂರು ತಿಂಗಳಿಂದ 'ಗೌರವ ಧನ'ವನ್ನೇ ಕೊಟ್ಟಿಲ್ಲ. 300ಕ್ಕೂ ಹೆಚ್ಚು ಕಾರ್ಯಕರ್ತೆಯರನ್ನು ವಜಾ ಮಾಡಲಾಗಿದೆ. ಪ್ರತಿದಿನ ಹತ್ತಾರು ಕಾರ್ಯಕರ್ತೆಯರಿಗೆ ವಜಾ ನೋಟೀಸು ಬರುತ್ತಿದೆ. ಆದರೂ ಹೋರಾಟ ಮುಂದುವರೆದಿದೆ.

ದಿಲ್ಲಿಯಲ್ಲೂ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮುಷ್ಕರದಲ್ಲಿದ್ದಾರೆ.

ಅವರು ಮೂರೂವರೆ ವರ್ಷಗಳ ಹಿಂದೆ, ಸಪ್ಟಂಬರ್ 2018ರಲ್ಲಿ ಪ್ರಧಾನಿಗಳು ಪ್ರಕಟಿಸಿದ ಅಂಗನವಾಡಿ ಕಾರ್ಯಕರ್ತೆಯರಿಗೆ 1500ರೂ. ಮತ್ತು ಸಹಾಯಕಿಯರಿಗೆ 750ರೂ. ಹೆಚ್ಚಳದ ಪ್ರಕಟಣೆಯನ್ನು ಜಾರಿಗೆ ತರುವಂತೆ ಆಗ್ರಹಿಸುತ್ತಿದ್ದಾರೆ.

ಹರ್ಯಾಣ ಮುಖ್ಯಮಂತ್ರಿಗಳೂ 2019ರಲ್ಲಿ ದೀರ್ಘ ಹೋರಾಟದ ನಂತರ ಇವರಿಗೆ ಅನುಕ್ರಮವಾಗಿ ನಿಪುಣ ಮತ್ತು ಅರೆನಿಪುಣ ಸ್ಥಾನಮಾನವನ್ನು ಕೊಡುವುದಾಗಿ ವಿಧಾನಸಭೆಯಲ್ಲಿ ಪ್ರಕಟಿಸಿದ್ದರು. ಅದನ್ನೂ ಇನ್ನೂ ಜಾರಿಗೆ ತಂದಿಲ್ಲ. ಸಾಲದ್ದಕ್ಕೆ ತಾನು ಅದನ್ನು ಗಂಭೀರವಾಗಿಯೇನೂ ಹೇಳಿರಲಿಲ್ಲ ಎಂದು ನಾಚಿಕೆಯಿಲ್ಲದೆ ಹೇಳುತ್ತಿದ್ದಾರೆ ಎಂದು ಎಐಡಿಡಬ್ಲ್ಯುಎ ಖಂಡಿಸಿದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವ ಸ್ಕೀಮುಗಳ ಜಾರಿಯಲ್ಲಿ ಬಹು ಮಹತ್ವದ ಕೊಂಡಿ. ಕೊರೊನ ಅಲೆಯಲ್ಲಿ ಅಂಗನವಾಡಿಗಳಲ್ಲಿ ಬಿಸಿಯೂಟದ ಪೂರೈಕೆ ನಿಂತು ಹೋಗಿತ್ತು. ಈಗ ಸರಕಾರದ ಹಟಮಾರಿತನದಿಂದಾಗಿ ಅದೇ ಸ್ಥಿತಿ ಮುಂದುವರೆಯುತ್ತಿದೆ, ಅಂಗನವಾಡಿಗಳು ಸಂಪೂರ್ಣವಾಗಿ ಮುಚ್ಚಿವೆ. ಇದು ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆ ಎಂದು ಎಚ್ಚರಿಸಿರುವ ಎಐಡಿಡಬ್ಲ್ಯುಎ ಸರಕಾರ ದುರಹಂಕಾರದಿಂದ ವರ್ತಿಸುತ್ತಿದೆ, ಹೋರಾಟವನ್ನು ಮುರಿಯಲು ಭಯೋತ್ಪಾದನೆ ಹರಡುತ್ತಿದೆ, ನೂರಾರು ಮಂದಿಯನ್ನು ವಜಾ ಮಾಡಲಾಗಿದೆ, ಗಂಭೀರ ಕೇಸುಗಳನ್ನು ಹಾಕಲಾಗುತ್ತಿದೆ ಎಂದು ಹೇಳಿದೆ.

ಸರಕಾರ ಈ ದಮನವನ್ನು ನಿಲ್ಲಿಸಬೇಕು, ಎಲ್ಲ ವಜಾ ನೋಟೀಸುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು, ಎಲ್ಲ ಅಂಗನವಾಡಿ ನೌಕರರಿಗೆ ರಾಜ್ಯ ಸರಕಾರೀ ನೌಕರರ ಸ್ಥಾನಮಾನ ಕೊಡಬೇಕು, ಮತ್ತು ಅದುವರೆಗೆ ಕಾರ್ಯಕರ್ತೆಯರಿಗೆ ಮಾಸಿಕ 24000ರೂ. ಮತ್ತು ಸಹಾಯಕಿಯರಿಗೆ 16000ರೂ. ಕೊಡಬೇಕು ಎಂದು ಆಗ್ರಹಿಸಿದೆ. ಪ್ರಧಾನ ಮಂತ್ರಿಗಳ ಪ್ರಕಟಣೆಯಂತೆ 1500ರೂ. ಮತ್ತು 750ರೂ. ಹೆಚ್ಚಳದ ಮೂರೂವರೆ ವರ್ಷಗಳ ಬಾಕಿಯನ್ನು ತಕ್ಷಣವೇ ಚುಕ್ತಾ ಮಾಡಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ದಿಲ್ಲಿಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ದಿಲ್ಲಿ ಸರಕಾರವನ್ನೂ ಅದು ಆಗ್ರಹಿಸಿದೆ.

# ಅಂಗನವಾಡಿ ನೌಕರರ ಧೀರ ಹೋರಾಟ: ಎಐಕೆಎಸ್ ಬೆಂಬಲ

ಅಖಿಲ ಭಾರತ ಕಿಸಾನ್ ಸಭಾ ಹರ್ಯಾಣದ 40 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಮ್ಮ ಹಕ್ಕುಗಳಿಗಾಗಿ ಧೀರ ಹೋರಾಟ ನಡೆಸಿದ್ದಾರೆ ಎಂದು ಅವರ ಸ್ಥೈರ್ಯಕ್ಕೆ ನಮನ ಸಲ್ಲಿಸಿದೆ.

ಸ್ಕೀಮ್ ನೌಕರರು ಕೊವಿಡ್ ಮಹಾಸಾಂಕ್ರಾಮಿಕದ ಸಮಯದಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ಮಹಾನ್ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಆಗ ಅವರಿಗೆ ಕೃತಜ್ಞತೆ, ಗೌರವ ಸಲ್ಲಿಸಬೇಕು ಎಂದು ದೇಶದ ಜನತೆಗೆ ಕರೆ ನೀಡಿದ್ದವು. ಆದರೆ ಈಗ ಅವರು ತಮ್ಮ ಹಕ್ಕುಗಳನ್ನು ಕೇಳುತ್ತಿರುವಾಗ ಅವೇ ಸರಕಾರಗಳು ಅವರ ಮೇಲೆಯೇ ದಮನಚಕ್ರ ಹರಿಯಬಿಟ್ಟಿವೆ. ಕೊವಿಡ್ ದುರಿತ ಕಾಲದಲ್ಲಿ ಅವರು ಪಟ್ಟ ಶ್ರಮಕ್ಕೆ ಪ್ರತಿಯಾಗಿ ಕನಿಷ್ಟ ಕೂಲಿಗಳನ್ನೂ ಅವರಿಗೆ ನಿರಾಕರಿಸುತ್ತಿವೆ. ಇವರಲ್ಲಿ ಬಹುಮಂದಿ ಗ್ರಾಮೀಣ ಪ್ರದೇಶಗಳವರು, ರೈತ ಕುಟುಂಬಗಳಿಂದ ಬಂದವರು. ಬೆಲೆಯೇರಿಕೆ, ಬಡತನ, ಅಪೌಷ್ಟಿಕತೆಯಲ್ಲದೆ ಇನ್ನೂ ಹಲವು ಸಂಕಷ್ಟಗಳನ್ನು ಎದುರಿಸುತ್ತಿರುವ ಅವರ ಸಂಕಟಗಳನ್ನು ಕಡಿಮೆ ಮಾಡುವ ಬದಲು ಬಿಜೆಪಿ ಸರಕಾರ ಅವರನ್ನು ಶೋಷಿಸುತ್ತಿದೆ. ಕೇಂದ್ರದಲ್ಲಿರುವ ಸರಕಾರ ಪ್ರತೀ ವರ್ಷ ಈ ಮಹತ್ವದ ಸ್ಕೀಮುಗಳಿಗೆ ಕೊಡುತ್ತಿರುವ ಹಣದಲ್ಲಿ ಕಡಿತ ಮಾಡುತ್ತಲೇ ಬರುತ್ತಿದೆ, ಖಾಸಗೀಕರಣಕ್ಕೆ ಇಳಿದಿದೆ. ಇದರ ವಿರುದ್ಧ ಈ ನೌಕರರು ಹೋರಾಟ ನಡೆಸಿದ್ದಾರೆ ಎಂದು ಎಐಕೆಎಸ್ ಹೇಳಿದೆ.

ರೈತರ ದೀರ್ಘ ಐತಿಹಾಸಿಕ ಹೋರಾಟದ ಸಮಯದಲ್ಲಿ ಈ ಅಂಗನವಾಡಿ ನೌಕರರು ಬೆಂಬಲದ ಬಹುದೊಡ್ಡ ಸ್ರೋತವಾಗಿದ್ದರು ಎಂದು ನೆನಪಿಸಿಕೊಂಡಿರುವ ಎಐಕೆಎಸ್ ಇವರ ಬೆಂಬಲಕ್ಕೆ ಎದ್ದು ನಿಲ್ಲಬೇಕು, ಅವರ ಹೋರಾಟಗಳಲ್ಲಿ ಭಾಗವಹಿಸಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ.

# ಕೇರಳದಲ್ಲಿ ಮತ್ತೊಂದು ಕಗ್ಗೊಲೆ –ಮೀನುಗಾರರ ಒಕ್ಕೂಟದ ಖಂಡನೆ

ಅಖಿಲ ಭಾರತ ಮೀನುಗಾರರು ಮತ್ತು ಮೀನುಗಾರಿಕೆ ಕಾರ್ಮಿಕರ ಒಕ್ಕೂಟ (ಎಐಎಫ್‌ಎಫ್‌ಡಬ್ಲ್ಯುಎಫ್) ಕೇರಳದಲ್ಲಿ ತಮ್ಮ ಸಂಘಟನೆಯ ಒಬ್ಬ ಕಾರ್ಯಕರ್ತ ಹರಿದಾಸನ್ ಅವರ ಮೇಲೆ ಬಿಜೆಪಿ–ಆರೆಸ್ಸೆಸ್ ಗೂಂಡಾಗಳು ಅಮಾನುಷ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾರೆಂದು ಬಲವಾಗಿ ಖಂಡಿಸಿದೆ.



54 ವರ್ಷದ ಹರಿದಾಸನ್ ಕೇರಳದ ಮತ್ಸ್ಯ ತೋಳಿಲಾಲಿ ಫೆಡರೇಷನ್‌ನ ಸಕ್ರಿಯ ಕಾರ್ಯಕರ್ತ ರಾಗಿದ್ದರು. ಫೆಬ್ರುವರಿ 22ರಂದು ಈ ಫೆಡರೇಷನ್ ಕೇರಳದ ಎಲ್ಲ ಮೀನುಗಾರಿಕಾ ಹಳ್ಳಿಗಳಲ್ಲಿ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸಿತ್ತು.

ತಲಶೇರಿಯ ನ್ಯೂ ಮಾಹೆಯ ಬಳಿ ಇರುವ ಪುನ್ನೋಲ್‌ನಲ್ಲಿರುವ ಹರಿದಾಸನ್ ಮುಂಜಾನೆ 2 ಗಂಟೆಯ ವೇಳೆಗೆ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದಾಗ ಅವರ ಮನೆಯ ಮುಂದೆಯೇ ಅಡ್ಡಗಟ್ಟಿ ಅವರ ಮೇಲೆ ಮಾರಕ ಹಲ್ಲೆ ನಡೆಸಲಾಯಿತು. ನೆರೆಕರೆಯವರು ಅವರನ್ನು ತಲಶೇರಿಯ ಆಸ್ಪತ್ರೆಗೆ ಒಯ್ಯುವಾಗ ದಾರಿಯಲ್ಲಿಯೇ ಅವರ ಸಾವಾಯಿತು.

ಎಐಎಫ್‌ಎಫ್‌ಡಬ್ಲ್ಯುಎಫ್ ಹರಿದಾಸನ್ ಕುಟುಂಬದವರಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತ ಕೊಲೆಗಡುಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದೆ.

ಈ ಕಗ್ಗೊಲೆಯ ಬಗ್ಗೆ ರಾಜ್ಯ ಆರೆಸ್ಸೆಸ್ ಮುಖಂಡತ್ವಕ್ಕೆ ತಿಳಿದಿತ್ತು ಎಂದು ಸಿಪಿಐ(ಎಂ) ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಎಂ.ವಿ. ಜಯರಾಜನ್ ಹೇಳಿದ್ದಾರೆ. ಈ ಪೂರ್ವಯೋಜಿತ ಹತ್ಯೆಯ ಅಪರಾಧಿಗಳೆಗೆಲ್ಲ ರೊಂದಿಗೆ ಕಠಿಣವಾಗಿ ವ್ಯವಹರಿಸಬೇಕು ಎಂದು ಅವರು ಹೇಳಿದ್ದಾರೆ.

# ಸಗಟು ಖರೀದಿದಾರರಿಗೆ ಡೀಸೆಲ್ ಬೆಲೆಗಳಲ್ಲಿ ಭಾರೀ ಏರಿಕೆ
## ಫೆ.21 ರಿಂದ 28–ಸಾರಿಗೆ ನೌಕರರ ಪ್ರತಿಭಟನೆಗೆ ಎಐಆರ್‌ಟಿಡಬ್ಲ್ಯುಎಫ್ ಕರೆ

ಕೆಲವು ದಿನಗಳ ಹಿಂದೆ ಯಾವುದೇ ಅಧಿಕೃತ ಪ್ರಕಟಣೆಯಿಲ್ಲದೆ ಡೀಸೆಲನ್ನು ಸಗಟಾಗಿ ಖರೀದಿಸುವವರಿಂದ ವಸೂಲಿ ಮಾಡುವ ದರದಲ್ಲಿ ತೀವ್ರ ಏರಿಕೆ ಮಾಡಲಾಗಿದೆ. ಇದು ರಾಜ್ಯ ಸಾರಿಗೆ ಸಂಸ್ಥೆಗಳ ಮೇಲೆ ಬಹುದೊಡ್ಡ ಹೊರೆಯನ್ನು ಹಾಕುತ್ತಿದೆ ಎಂದು ಇದನ್ನು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ (ಎಐಆರ್‌ಟಿಡಬ್ಲ್ಯುಎಫ್) ಬಲವಾಗಿ ಖಂಡಿಸಿದೆ ಮತ್ತು ಅದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಐದು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸದೇ ಇರುವ ಸರಕಾರದಿಂದ ತೈಲ ಕಂಪನಿಗಳು ಈ ಏರಿಕೆಗೆ ಗುಪ್ತ ಮಂಜೂರಾತಿ ಪಡೆದಿರುವಂತೆ ಕಾಣುತ್ತಿದೆ. ಇದು ಜಗತ್ತಿನಲ್ಲೆಲ್ಲ ಚಾಲ್ತಿಯಲ್ಲಿರುವ ವ್ಯವಹಾರ ನೀತಿಗಳಿಗೆ ವಿರುದ್ಧವಾದದ್ದು. ಯಾವುದೇ ಸರಕಿನ ಸಗಟು ಬೆಲೆ ಅದರ ಚಿಲ್ಲರೆ ಬೆಲೆಗಿಂತ ಕಡಿಮೆಯಿರಬೇಕು. ಆದ್ದರಿಂದ ಈಗ ಸಗಟಿ ಖರೀದಿದಾರರಿಗೆ ಮಾಡಿರುವ ಈ ಡೀಸೆಲ್ ಬೆಲೆ ಹೆಚ್ಚಳ ಅನೀತಿಯುತವಾದದ್ದು, ರಾಜ್ಯ ಸಾರಿಗೆ ಸಂಸ್ಥೆಗಳನ್ನು ಮುಳುಗಿಸುವುದಕ್ಕೇ ಹೀಗೆ ಮಾಡಲಾಗಿದೆ ಎಂದು ಸಾರಿಗೆ ನೌಕರರ ಒಕ್ಕೂಟ ಹೇಳಿದೆ.

ಈ ಭಾರೀ ಏರಿಕೆ ಪ್ರಯಾಣಿಕರ ಮೇಲೆ ಹೇರಿರುವ ಭಾರೀ ಹೊರೆ. ಸರಕಾರದ ಈ ಜನ–ವಿರೋಧಿ ನೀತಿಯನ್ನು ಕಟುವಾಗಿ ವಇರೋಧಿಸಲೇಬೇಕಾಗಿದೆ ಎಂದಿರುವ ಎಐಆರ್‌ಟಿಡಬ್ಲ್ಯುಎಫ್ ಫೆಬ್ರುವರಿ 21ರಿಂದ 28ರ ವರೆಗೆ ಸರಕಾರದ ಈ ಕ್ರಮದ ವಿರುದ್ಧ ಪ್ರತಿಭಟನಾ ವಾರಾಚರಣೆ ನಡೆಸುವಂತೆ ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿರುವ ಎಲ್ಲ ನೌಕರರ ಸಂಘಗಳಿಗೆ ಕರೆ ನೀಡಿದೆ.

ಸಂಪಾದಕೀಯ

# ನಟ ಚೇತನ್ ಗೆ ಜಾಮೀನು ಸ್ವಾಗತಾರ್ಹ

ಎರಡು ವರ್ಷಗಳ ಹಿಂದೆ ಹೈಕೋರ್ಟ್ ನ್ಯಾಯಮೂರ್ತಿಗಳೊಬ್ಬರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಟ್ವಿಟ್ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದ್ದ ಚಿತ್ರ ನಟ, ಸಾಮಾಜಿಕ ಹೋರಾಟಗಾರ ಚೇತನ್‌ಗೆ ನಗರದ 8ನೇ ಎಸಿಎಂಎಂ ಕೋರ್ಟ್ ಷರತ್ತು ಬದ್ಧ ಜಾಮೀನು ನೀಡಿ ಬಿಡುಗಡೆ ಮಾಡಿದ್ದು ಸ್ವಾಗತಾರ್ಹವಾಗಿದೆ. ಐಪಿಸಿ ಸೆಕ್ಷನ್ 505(2), 504 ಅಡಿಯಲ್ಲಿ ಚೇತನ್ ವಿರುದ್ಧ ಪ್ರಕರಣ ದಾಖಲಾಗಿದ್ದು ನ್ಯಾಯಾಂಗ ಬಂಧನ ವಿಧಿಸಲಾಗಿತ್ತು.

ಇದೊಂದು ಸುಮೋಟೊ ಪ್ರಕರಣವಾಗಿದ್ದು ಪೊಲೀಸರು ಅನುಸರಿಸಿದ ರೀತಿ ವ್ಯಾಪಕ ಟೀಕೆಗೆ ಒಳಗಾಗಿದೆ. ಚೇತನ್ ಅವರನ್ನು ಅಪಹರಣದ ಮಾದರಿಯಲ್ಲಿ ಬಂಧಿಸಲಾಗಿದೆ ಎಂದು ಅವರ ಪತ್ನಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಫೆಬ್ರುವರಿ 22 ಮಂಗಳವಾರ ಪೊಲೀಸರು ಅವರನ್ನು ಬಂಧಿಸಿದ್ದಾರೆ. ಮಂಗಳವಾರ ಮಧ್ಯಾಹ್ನ ಕುಮಾರಕೃಪದಲ್ಲಿರುವ ಅವರ ನಿವಾಸಕ್ಕೆ ಆಗಮಿಸಿದ ಪೊಲೀಸರ ತಂಡ ಏಕಏಕಿ ಅವರನ್ನು ವಾಹನದಲ್ಲಿ ಕರೆದೊಯ್ದಿದೆ. ಮನೆಯಲ್ಲಿದ್ದ ಅವರ ಪತ್ನಿ ಹಾಗೂ ಕುಟುಂಬದ ಸದಸ್ಯರಿಗೆ ಪೊಲೀಸರು ಯಾವುದೇ ಮಾಹಿತಿ ನೀಡಲಿಲ್ಲ.

ಬಂಧನದ ಇಡೀ ಪ್ರಕ್ರಿಯೆಯಲ್ಲಿ ಪೊಲೀಸರು ಅತಿಯಾದ ಅನಗತ್ಯ ಆಸಕ್ತಿ ತೋರಿದ್ದು ಕಂಡು ಬಂದಿದೆ. ಅವರ ಮೊಬೈಲ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಅವರ ಭದ್ರತಾ ಸಿಬ್ಬಂದಿಯೂ ಅಲ್ಲಿ ಇರಲಿಲ್ಲ.

ಚೇತನ್ ಆರೋಪಿ ಆಗಿರಬಹುದು. ಆದರೆ ಅವರು ಅಪರಾಧಿ ಎಂದು ಕೋರ್ಟಿನ ತೀರ್ಪು ಮಾತ್ರ ಸಾಬಿತು ಪಡಿಸಬಹುದು. ಪೊಲೀಸರು ಕಾನೂನು ಪಾಲಕರಷ್ಟೇ. ಅವರು ಕಾನೂನುಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ. ಸುಮೋಟೊ ಪ್ರಕರಣವನ್ನು ದಾಖಲು ಮಾಡಿಕೊಳ್ಳಲು ಪೊಲೀಸರು ಅಗತ್ಯಕ್ಕಿಂತ ಹೆಚ್ಚು ಆಸಕ್ತಿ ವಹಿಸಿದಂತೆ ಕಾಣುತ್ತದೆ. ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿರುವಾಗ, ನಮ್ಮ ಅಕ್ಕತಂಗಿಯರ ಮೇಲೆ ಅಮಾನುಷ ಅತ್ಯಾಚಾರಗಳು ನಡೆಯುತ್ತಿರುವಾಗ, ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳು ನಡೆಯುತ್ತಿರುವಾಗ ಪೊಲೀಸರು ಸುಮೋಟೊ ಪ್ರಕರಣಗಳನ್ನು ದಾಖಲು ಮಾಡಲು ಮುಂದಾಗುವುದಿಲ್ಲ. ನೊಂದವರು ದೂರು ಕೊಡಲು ಮುಂದೆ ಬಂದರೂ ಪ್ರಕರಣಗಳು ದಾಖಲಾಗುವುದಿಲ್ಲ. ದೂರು ಸ್ವೀಕರಿಸಿದರೂ ಅದು ನ್ಯಾಯಾಲಯದಲ್ಲಿ ಬಿದ್ದು ಹೋಗುವಂತೆ ದುರ್ಬಲವಾದ ಎಫ್‌ಐಆರ್ ಮಾತ್ರ ದಾಖಲು ಮಾಡುತ್ತಾರೆ. ಹೀಗಾಗಿ ಪೊಲೀಸ್ ವ್ಯವಸ್ಥೆಯ ಮೇಲೆ ಜನತೆ ವಿಶ್ವಾಸ ಕಳೆದುಕೊಳ್ಳುವಂತಾಗಿದೆ.

ಪ್ರಸಕ್ತ ಪ್ರಕರಣದಲ್ಲಿ ಯಾರೂ ದೂರು ದಾಖಲು ಮಾಡಿಲ್ಲ. ಇದು ಪೊಲೀಸರ ಸ್ವಯಂ ಪ್ರೇರಿತ ದೂರು. ಹೀಗೆ ಸ್ವಯಂ ಪ್ರೇರಿತ ದೂರು ದಾಖಲಿಸಲು ಪೊಲೀಸರಿಗೆ ಅಧಿಕಾರ ಇದೆ. ಆದರೆ, ದೂರು ದಾಖಲಿಸುವ ವ್ಯಕ್ತಿಯ ಹಿನ್ನೆಲೆಯನ್ನು ಜವಾಬ್ದಾರಿಕೆಯಿಂದ ಪರಿಶೀಲಿಸಬೇಕು. ಇಂತಹ ಪ್ರವೃತ್ತಿ ಕಾಯಂ ಸ್ವರೂಪದ್ದೇ ಎಂಬುದನ್ನು ಪೊಲೀಸರು, ತನಿಖಾಧಿಕಾರಿಗಳು ಗಮನಿಸಬೇಕು. ಅವಸರದ ಹೇಳಿಕೆ ಎಷ್ಟು ಅಪಾಯಕಾರಿಯೋ, ಒಬ್ಬ ಅಮಾಯಕ ವ್ಯಕ್ತಿಯನ್ನು ಬಂಧಿಸಿ ಅವರ ತೇಜೋವಧೆ ಮಾಡುವುದು ಅಷ್ಟೇ ಅಪಾಯಕಾರಿಯಾಗಿದೆ. ಚೇತನ್ ಒಬ್ಬ ರೂಢಿಗತ ಅಪರಾಧಿಯಲ್ಲ. ಆತನೊಬ್ಬ ಸಾಮಾಜಿಕ ಚಿಂತಕ. ಅನ್ಯಾಯದ ವಿರುದ್ಧ ಧ್ವನಿ ಎತ್ತುವವನು. ಸ್ವಂತಕ್ಕೆ ಯಾವುದೇ ಫಲಾಪೇಕ್ಷೆ ಬಯಸಿದವನಲ್ಲ. ದಲಿತರಿಗೆ, ಆದಿವಾಸಿಗಳಿಗೆ, ಮಹಿಳೆಯರಿಗೆ ನ್ಯಾಯ ಕೊಡಿಸಲು ಶ್ರಮಿಸುವವನು. ಇತ್ತೀಚೆಗೆ ನಮ್ಮೆಲ್ಲರನ್ನು ಅಗಲಿದ ಪುನಿತ್ ರಾಜ್‌ಕುಮಾರ್ ಅಸಂಖ್ಯಾತ ಅನಾಥರಿಗೆ ಆಗಿದ್ದಂತೆ, ಚೇತನ್ ಸಹ ಆಸರೆ ಯಾಗುತ್ತಾರೆ. ಈ ರೀತಿ ಮಾನವೀಯತೆಯನ್ನು ಮೈಗೂಡಿಸಿಕೊಂಡ ಎಷ್ಟು ಜನ ಪೊಲೀಸ್ ಅಧಿಕಾರಿಗಳು ಇದ್ದಾರೆ? ತಮಗೆ ಅದು ಸಾಧ್ಯವಾಗದಿದ್ದರೆ, ಇನ್ನೊಬ್ಬರಿಗೆ ಪ್ರೋತ್ಸಾಹವನ್ನಾದರೂ ನೀಡಬೇಕು. ಅಲ್ಲವೆ?

ಕೊನೆಗೂ ನ್ಯಾಯಾಲಯ ಚೇತನ್ ಅವರನ್ನು ಷರತ್ತು ಬದ್ಧ ಜಾಮೀನು ನೀಡಿ ಬಿಡುಗಡೆ ಮಾಡಿದೆ. ಜನಪರ ಹೋರಾಟಗಳಲ್ಲಿ ಯಾವುದೇ ಕರೆ ಇಲ್ಲದೆ ಪಾಲ್ಗೊಳ್ಳುತ್ತಿರುವ ನಟ ಚೇತನ್ ರವರಿಗೆ ವಂದನೆಗಳು.

# ರಾಜ್ಯದ ಶಾಂತಿ-ಸುವ್ಯವಸ್ಥೆಯನ್ನು ಕದಡುವ ದುಷ್ಕೃತ್ಯದ ಮುಂದುವರಿಕೆ-ಶಿವಮೊಗ್ಗ ಘಟನೆ ಸಿಪಿಐ(ಎಂ) ಖಂಡನೆ

ನೆನ್ನೆ ದಿನ ಭಜರಂಗದಳದ ಕಾರ್ಯಕರ್ತ ಹರ್ಷ ಎಂಬಾತನ ಕಗ್ಗೊಲೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ. ಯಾವುದೇ ಭಿನ್ನಾಭಿಪ್ರಾಯ, ವಿರೋಧಗಳೇನೆ ಇದ್ದರೂ, ಅದನ್ನು ಕೊಲೆಯಂತಹ ಗಂಭೀರ ಅಪರಾಧದ ಮೂಲಕ ಪರಿಹರಿಸಿಕೊಳ್ಳಲು ಯತ್ನಿಸುವುದನ್ನು ಸಿಪಿಐ(ಎಂ) ಒಪ್ಪುವುದಿಲ್ಲ. ತಕ್ಷಣವೇ ಈ ಕೊಲೆಯ ಹಿಂದಿನ ಸಂಚನ್ನು ಭೇದಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮವಹಿಸಲು ಸಿಪಿಐ(ಎಂ) ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸಿದೆ.

ಅದರ ಬೆನ್ನಲ್ಲೆ, ಶಿವಮೊಗ್ಗ ನಗರದಲ್ಲಿ ಉದ್ವಿಗ್ನ ವಾತಾವರಣವನ್ನು ಉಂಟು ಮಾಡಲಾಗಿದೆ. ಹಲವು ಅಂಗಡಿ ಮುಗ್ಗಟ್ಟುಗಳಿಗೆ, ವಾಹನಗಳಿಗೆ ಬೆಂಕಿ ಹಚ್ಚಿ ಆಸ್ತಿ ಪಾಸ್ತಿಗಳಿಗೆ ಹಾನಿ ಮಾಡಲಾಗಿದೆ. ಕತ್ತಿ, ತಲವಾರ ಮತ್ತು ಮಚ್ಚುಗಳನ್ನಿಡಿದು ಬೆದರಿಸುವುದು ನಡೆದಿದೆ. ಶಾಸಕರು, ಅಧಿಕಾರಿಗಳು ಹಾಗೂ ಪೋಲೀಸರ ಸಮ್ಮುಖದಲ್ಲಿಯೇ ಈ ಧಾಳಿ ದಬ್ಬಾಳಿಕೆಗಳು ನಡೆದಿವೆ ಎನ್ನಲಾಗಿದೆ. ಈ ಆಸ್ತಿ– ಪಾಸ್ತಿಗಳಿಗೆ ಹಾನಿ ಮಾಡುವ, ಆಯುಧಗಳನ್ನಿಡಿದು ಬೆದರಿಸುವ ಕುಕೃತ್ಯವನ್ನು ಮತ್ತು ಜಿಲ್ಲಾಡಳಿತ ಹಾಗೂ ಕರ್ನಾಟಕ ಸರಕಾರಗಳು ಈ ಘಟನೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಮತ್ತೊಮ್ಮೆ ಘೋರವಾಗಿ ವಿಫಲವಾಗಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ ಮತ್ತು ಒಟ್ಟು ಪ್ರಕರಣವನ್ನು ಸಮಗ್ರ ತನಿಖೆಗೊಳಪಡಿಸಬೇಕೆಂದು. ಗೃಹ ಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ಕೊಲೆಗಡುಕರಿಂದ ಮತ್ತು ಆಸ್ತಿ ಪಾಸ್ತಿಗಳ ಮೇಲೆ ದಾಳಿ ಮಾಡುವ ಪುಂಡರಿಂದ ರಕ್ಷಣೆ ಇಲ್ಲವಾಗಿದೆ.

ಈ ಘಟನೆಯು ಹಿಜಾಬ್– ಶಾಲು ವಿವಾದ ಹಾಗೂ ಕೆಂಪು ಕೋಟೆಯ ಮೇಲೆ ಕೇಸರಿ ಧ್ವಜಾರೋಹಣದಂತಹ ಭಾವನಾತ್ಮಕ ವಿಷಯಗಳನ್ನು ಕೆದಕಿ ರಾಜ್ಯದಾದ್ಯಂತ ಸೌಹಾರ್ಧತೆಯನ್ನು ಕದಡುವ ವಿಷಯದ ಮುಂದುವರಿಕೆಯಾಗಿದೆ. ಸರಕಾರವೇ ಅಲ್ಪ ಸಂಖ್ಯಾತರ ಹಾಗೂ ದಲಿತರ ವಿರುದ್ಧದ ಕಾಯ್ದೆಗಳಿಗೆ ಕ್ರಮವಹಿಸುವ ಮೂಲಕ, ಸೌಹಾರ್ದತೆ ಕದಡುವ ಮತ್ತು ದ್ವೇಷಕ್ಕೆ ಕುಮ್ಮಕ್ಕು ನೀಡುತ್ತದೆ. ಅದೇ ರೀತಿ, ಬಿಜೆಪಿಯ ಸಚಿವರು, ಶಾಸಕರುಗಳು ಆರ್.ಎಸ್.ಎಸ್. ಗೆ ಹತ್ತಿರವಾಗುವ ದುರುದ್ದೇಶದಿಂದ ಪ್ರಚೋದನಾತ್ಮಕ ಹೇಳಿಕೆ ನೀಡುತ್ತಿದ್ದಾರೆ.

ಕೊಲೆಯಾದ ಯುವಕನ ಕುಟುಂಬಕ್ಕೆ ಹಾಗೂ ಆಸ್ತಿ ಮತ್ತು ವಾಹನಗಳ ಹಾನಿಗೆ ತಕ್ಷಣವೇ ಸರಕಾರ ಪರಿಹಾರವನ್ನು ಘೋಷಿಸಬೇಕು. ಆಸ್ತಿ ಹಾಗೂ ವಾಹನಗಳಿಗೆ ಹಾನಿ ಮಾಡಿದ ಮತ್ತು ಅಯುಧಗಳನ್ನಿಡಿದು ಪ್ರಚೋದನೆ ಮಾಡಿದ ಪುಂಡರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸ ಬೇಕು ಹಾಗೂ ಸೌಹಾರ್ದತೆಯನ್ನು ಪುನಸ್ಥಾಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಹರ್ಷನ ಕೊಲೆಯ ಸಂಧರ್ಭದಲ್ಲಿ ಆತನ ಕುಟುಂಬದ ಸದಸ್ಯರಿಗೆ ಸಾಂತ್ವಾನ ಹೇಳಲು ಮಂತ್ರಿಗಳು ಮತ್ತು ಶಾಸಕರು ದೌಡಾಯಿಸಿರುವುದು ಸ್ವಾಗತಾರ್ಹವಾಗಿದೆ. ಆದರೇ,

ಗದಗ ಜಿಲ್ಲೆಯ ನರಗುಂದದಲ್ಲಿ ಇತ್ತೀಚೆಗೆ ಭಜರಂಗದಳದ ಕಾರ್ಯಕರ್ತರು ಮುಸ್ಲಿಂ ಯುವಕರ ಮೇಲೆ ದಾಳಿ ನಡೆಸಿದಾಗ ಸಮೀರ ಎಂಬ ಯುವಕ ಮರಣ ಹೊಂದಿದ್ದರೆ ಮತ್ತೊಬ್ಬ ಯುವಕ ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ದಾಖಲಾಗಿದ್ದಾನೆ. ಅದೇ ರೀತಿ, ವಿಜಯಪುರ ಜಿಲ್ಲೆಯ ಮುಸ್ಲಿಂ ಯುವಕನೋರ್ವ ಬೇರೊಂದು ಜಾತಿಯ ಯುವತಿಯನ್ನು ಪ್ರೀತಿಸಿ ಮದುವೆಯಾದನೆಂಬ ಕಾರಣಕ್ಕೆ ಯುವತಿಯ ಕುಟುಂಬದವರು ಯುವಕನ ತಾಯಿಯ ಸಮ್ಮುಖದಲ್ಲಿಯೇ ಬರ್ಬರವಾಗಿ ಕೊಲೆ ಮಾಡಿದ್ದಾರೆ. ಸದರಿ ಯುವಜನರ ಕುಟುಂಬಗಳಿಗೆ ಸಾಂತ್ವಾನ ಹೇಳಲು ಇದುವರೆಗೂ ಯಾವುದೇ ಮಂತ್ರಿಗಳು ಹಾಗೂ ಶಾಸಕರು ಭೇಟಿ ನೀಡಿಲ್ಲ. ಇದು ಬಹಳ ಸ್ಪಷ್ಟವಾಗಿ ತಾರತಮ್ಯ ನೀತಿಯಾಗಿದೆ. ಈ ತಾರತಮ್ಯವನ್ನು ಸಿಪಿಐ(ಎಂ) ಬಲವಾಗಿ ಪ್ರತಿರೋಧಿಸುತ್ತದೆ. ಇಂತಹ ತಾರತಮ್ಯ ನೀತಿಯನ್ನು ಕೈ ಬಿಡಬೇಕು ಮತ್ತು ತಕ್ಷಣವೇ ಈ ಯುವಜನರ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ಒದಗಿಸಲು ಸಿಪಿಐ(ಎಂ) ಒತ್ತಾಯಿಸಿದೆ.

ಇದಕ್ಕೆಲ್ಲಾ, ರಾಜ್ಯ ಸರಕಾರ ಮತ್ತು ಮತಾಂಧ ಶಕ್ತಿಗಳೇ ಹೊಣೆಗಾರರಾಗಿವೆ. ಜನಾದೇಶವಿಲ್ಲದ ಆಪರೇಷನ್ ಕಮಲವೆಂಬ ಅನೈತಿಕ ಮಾರ್ಗ ಹಾಗೂ ಒಕ್ಕೂಟ ಸರಕಾರದ ಅಧಿಕಾರ ದುರ್ಬಳಕೆ ಮೂಲಕ ಬಲವಂತವಾಗಿ ಅಧಿಕಾರ ಮುನ್ನಡೆಸುವ ಈ ಸರಕಾರಕ್ಕೆ ಮುಂದುವರೆಯಲು ಯಾವುದೇ ನೈತಿಕತೆ ಇಲ್ಲ. ಆದಾಗಲೂ ಭಂಡತನದಿಂದ ಮುಂದುವರೆಯುತ್ತದೆ. ಇವುಗಳೆಲ್ಲಾ, ರಾಜ್ಯದ ಜನತೆಯ ದುಃಖದಾಯಕ ಪರಿಸ್ಥಿತಿಯಿಂದ ಮತ್ತು ಕಾರ್ಪೊರೇಟ್ ಕಂಪನಿಗಳ ಲೂಟಿಗೆ ರಾಜ್ಯ ಹಾಗೂ ದೇಶವನ್ನು ತೆರೆದುದರಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿರುದ್ಧ ಬೆಳೆಯುತ್ತಿರುವ ಜನತೆಯ ತೀವ್ರ ಅಸಮಾಧಾನವನ್ನು, ಬೇರೆಡೆ ಸೆಳೆದು ಕಂಪನಿಗಳ ರಕ್ಷಣೆಗೆ ಕ್ರಮವಹಿಸಲು ಮತ್ತು ದೇಶದ ಐದು ರಾಜ್ಯಗಳ ಚುನಾವಣೆಯಲ್ಲಿ ಇಂತಹ ಭಾವನಾತ್ಮಕ ವಿಷಯಗಳ ಮೂಲಕ ರಾಜಕೀಯ ಲಾಭ ಪಡೆಯುವ ಸಂಚನ್ನು ಆರ್.ಎಸ್.ಎಸ್. ಮತ್ತು ಬಿಜೆಪಿ ಹಾಗೂ ಮುಸ್ಲಿಂ ಮತಾಂಧ ಶಕ್ತಿಗಳು ಹೊಂದಿವೆ ಎಂಬುದನ್ನು ರಾಜ್ಯದ ಜನತೆ ಗಮನಿಸಬೇಕು. ಈ ಸಂಚನ್ನು ಸೋಲಿಸಲು ರಾಜ್ಯದ ಜನತೆ ಸೌಹಾರ್ಧತೆಯನ್ನು ಬಲ ಪಡಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

# ಫ್ಲೈ ಓವರ್ ಕಳಪೆ ಕಾಮಗಾರಿ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ

ಬೆಂಗಳೂರಿನ ಗೊರಗುಂಟೆಪಾಳ್ಯ ಹಾಗೂ ಪಾರ್ಲೆ ಟೋಲ್ ವರೆಗಿನ ಫ್ಲೈ ಓವರ್ ಕಳಪೆ ಕಾಮಗಾರಿಗೆ ಕಾರಣವಾಗಿರುವವರ ವಿರುದ್ಧ ತನಿಖೆ ನಡೆಸಿ ಕ್ರಿಮಿನಲ್ ದೂರು ದಾಖಲಿಸಿ, ದುರಸ್ಥಿ ಕಾರ್ಯಕ್ಕೆ ಗುತ್ತಿಗೆದಾರರಿಂದ ಹಣ ವಸೂಲಿ ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.
ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿ ಮುಂಭಾಗದಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ನೂರಾರು ಜನ ಭಾಗಿಯಾಗಿದ್ದರು. 8ನೇ ಮೈಲಿಯಿಂದ ಮೆರವಣಿಗೆ ನಡೆಸಿತು.

ಪ್ರತಿಭಟನೆ ಉದ್ದೇಶಿಸಿ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ಮಾತನಾಡಿ, ಸುಮಾರು 12 ವರ್ಷಗಳ ಮುಂಚೆ ತುಮಕೂರು ರಸ್ತೆಯ ಗೊರಗುಂಟೆಪಾಳ್ಯದಿಂದ ಪಾರ್ಲೆ ಟೋಲ್ ವರೆಗಿನ ಫ್ಲೈ ಓವರ್ 750 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಈ ಫ್ಲೈ ಓವರ್ ನಲ್ಲಿ ಸಂಚರಿಸುವ ವಾಹನಗಳಿಂದ ಟೋಲ್ ಸಂಗ್ರಹವನ್ನು ಮಾಡಲಾಗುತ್ತಿದೆ. ಅಲ್ಲದೇ, ಈ ಟೋಲ್ ಸಂಗ್ರಹವನ್ನು ಖಾಸಗೀ ಗುತ್ತಿಗೆದಾರರಿಗೆ ನೀಡಲಾಗಿದೆ. ಅಷ್ಟೇ ಅಲ್ಲದೆ, ಫ್ಲೈ ಓವರ್ ನಿರ್ವಹಣೆಯನ್ನೂ ಕೂಡ ಖಾಸಗೀ ಗುತ್ತಿಗೆದಾರರಿಗೆ ನೀಡಲಾಗಿದೆ ಎಂದು ಆರೋಪಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ. ಕೆ. ಪ್ರಕಾಶ್ ಮಾತನಾಡಿ, ಕಳೆದ ಎರಡು ತಿಂಗಳಿಂದ ದಿಢೀರ್ ಎಂದು ಗೊರಗುಂಟೆಪಾಳ್ಯದಿಂದ ಪಾರ್ಲೆ ಟೋಲ್ ವರೆಗಿನ ಫ್ಲೈಓವರ್ ನಲ್ಲಿನ ಸಂಚಾರವನ್ನು ಸಂಪೂರ್ಣವಾಗಿ

ಪುಟ 4 ನೋಡಿ



# ಕಟ್ಟಡ ಕಾರ್ಮಿಕರಿಂದ ಉಡುಪಿಯಲ್ಲಿ ಧರಣಿ

ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ದ ನೇತೃತ್ವದಲ್ಲಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಫೆಬ್ರವರಿ 19 ರಂದು ಧರಣಿ ನಡೆಸಲಾಯಿತು. ಧರಣಿಯಲ್ಲಿ ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಉಡುಪಿ ಜಿಲ್ಲಾ ಕಟ್ಟಡ ಸಂಘದ ಅಧ್ಯಕ್ಷ ಶೇಖರ್ ಬಂಗೇರ, ಗೌರವ ಅಧ್ಯಕ್ಷ ದಯಾನಂದ ಕೋಟ್ಯಾನ್, ಖಜಾಂಚಿ ಗಣೇಶ್ ನಾಯಕ್, ಉಪಾಧ್ಯಕ್ಷ ಶಶಿಧರ ಗೊಲ್ಲ, ಸುಭಾಶ್ ನಾಯಕ್, ವಾಮನ ಪೂಜಾರಿ ಸಿಐಟಿಯು ಉಡುಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಕವಿರಾಜ್ ಎಸ್ ಉಪಸ್ಥಿತರಿದ್ದರು.

# ಮಂಗಳೂರು, ಬೆಳ್ತಂಗಡಿಯಲ್ಲಿ ಕೆಂಪು ಪುಸ್ತಕ ದಿನಾಚರಣೆ

ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ ಪ್ರಕಟವಾದ ಫೆಬ್ರವರಿ 21 ರಂದು ದೇಶಾದ್ಯಂತ ಸಿಪಿಐ(ಎಂ) ಪಕ್ಷದ ಘಟಕಗಳು ಕೆಂಪು ಪುಸ್ತಕ ದಿನವನ್ನು ಆಚರಿಸಬೇಕೆಂದು ಪಕ್ಷದ ಕೇಂದ್ರ ಸಮಿತಿ ಕರೆ ನೀಡಿದ ಮೇರೆಗೆ ಕರಾವಳಿ ಜಿಲ್ಲೆಗಳಲ್ಲೂ ಕಾರ್ಯಕ್ರಮಗಳು ನಡೆದುವು.

ಮಂಗಳೂರು ಸಿಪಿಐ(ಎಂ) ದಕ್ಷಿಣ ಮತ್ತು ಉತ್ತರ ಸಮಿತಿಗಳು ಜಂಟಿಯಾಗಿ ವಿಕಾಸ ಕಚೇರಿಯಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ.ಕೃಷ್ಣಪ್ಪ ಕೊಂಚಾಡಿ, ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಕಾರ್ಯದರ್ಶಿ ಮಂಡಳಿ ಇನ್ನೊಬ್ಬ ಸದಸ್ಯರಾದ ಸದಾಶಿವ ದಾಸ್ ಸಭೆಯ ಅಧ್ಯಕ್ಷತೆ ವಹಿಸಿದರು. ಪಕ್ಷದ ಮಂಗಳೂರು ದಕ್ಷಿಣ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಸ್ವಾಗತಿಸಿದರು. ಮಂಗಳೂರು ಉತ್ತರ ಸಮಿತಿ ಕಾರ್ಯದರ್ಶಿ ಅಬ್ದುಲ್ ಬಶೀರ್ ವಂದಿಸಿದರು.

ಬೆಳ್ತಂಗಡಿಯಲ್ಲಿ ಮನೆಯೊಂದರ ಅಂಗಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ತಾಲೂಕು ಮುಖಂಡರಾದ ಹರಿದಾಸ್ ಎಸ್.ಎಂ. ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ ಕುರಿತು ಮಾತನಾಡಿದರು. ಮ್ಯಾನಿಫೆಸ್ಟೋ ಪುಸ್ತಕದ ಆಯ್ದ ಭಾಗಗಳನ್ನು ಸುಜಿತ್ ಉಜಿರೆ, ನ್ಯಾಯವಾದಿ ಸುಕನ್ಯಾ ಮತ್ತು ಸುಹಾಸ್ ವಾಚಿಸಿದರು. ಪಕ್ಷದ ತಾಲೂಕು ಕಾರ್ಯದರ್ಶಿ ಶಿವಕುಮಾರ್ ಎಸ್. ಎಂ. ಸಭೆಯ ಅಧ್ಯಕ್ಷತೆ ವಹಿಸಿದ್ದರು.



# ಎರಡೂ ಕಡೆಯ ಮತೀಯ ಶಕ್ತಿಗಳ ರಾಜಕೀಯ ದುರುಪಯೋಗದ ಅಸ್ತ್ರವಾಗುತ್ತಿದೆ

ವಿದ್ಯಾರ್ಥಿನಿಯರು ಶಿರವಸ್ತ್ರ– ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗುವ ವಿಷಯವು ಅತ್ಯಂತ ತೀವ್ರ ವಿವಾದವಾಗಿ ಬೆಳೆದು ಶಾಂತಿ, ಸೌಹಾರ್ದತೆ, ಒಗ್ಗಟ್ಟು ಮತ್ತು ಶೈಕ್ಷಣಿಕ ಶಾಂತಿಯನ್ನು ಕದಡುವ ಮಟ್ಟಕ್ಕೆ ಹೋಗಿರುವ ಪ್ರಕರಣದ ಬಗ್ಗೆ ನಾವೆಲ್ಲರೂ ಅತ್ಯಂತ ಆತಂಕಿತರಾಗಿದ್ದೇವೆ.

ಈ ವಿವಾದ ಹೇಗೆ ಆರಂಭಗೊಂಡಿದ್ದರೂ ಅದೀಗ ಹೆಣ್ಣುಮಕ್ಕಳ ಅದರಲ್ಲೂ ಮುಖ್ಯವಾಗಿ, ಮುಸ್ಲಿಮ್ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕುತ್ತಾಗಿ ಪರಿಣಮಿಸುತ್ತಿದೆ. ಶಿರವಸ್ತ್ರದ ಕಾರಣಕ್ಕೆ ಶಿಕ್ಷಣದಿಂದ ವಂಚಿತರಾಗಬೇಕಾಗುತ್ತಿದೆ.

ಮುಸ್ಲಿಮೇತರ ಮಕ್ಕಳು ಕೂಡ ಈ ವಿವಾದದಿಂದಾಗಿ ಶಿಕ್ಷಣದಿಂದ ದೂರವಾಗುವ ಸ್ಥಿತಿ ನಿರ್ಮಾಣವಾಗಿದೆ.

ಈ ವಿವಾದವು ಎರಡೂ ಕಡೆಯ ಮತೀಯ ಶಕ್ತಿಗಳ ರಾಜಕೀಯ ದುರುಪಯೋಗದ ಅಸ್ತ್ರವಾಗುತ್ತಿದೆ. ಮಕ್ಕಳು ಮತೀಯತೆಯ ರಾಜಕಾರಣಕ್ಕೆ ದಾಳಗಳಾಗುತ್ತಿರುವುದು ವಿಷಾದನೀಯ, ಖಂಡನೀಯ. ಇಂತಹ ಶಕ್ತಿಗಳ ಆಟಕ್ಕೆ ಪೋಷಕರು, ಮಕ್ಕಳು, ಪ್ರಜ್ಞಾವಂತ ನಾಗರೀಕರು ಅವಕಾಶ ನೀಡಬಾರದು ಎಂದು ವಿನಂತಿಸಿದೆ.

ವಸ್ತ್ರ ಸಂಹಿತೆಯ ಹೆಸರಿನಲ್ಲಿ ಶಿಕ್ಷಣದ ಹಕ್ಕಿಗೆ ಎಂದೂ ವಂಚನೆ ಮಾಡಬಾರದು. ಸಮವಸ್ತ್ರವನ್ನು ಉಳಿಸಿಕೊಂಡು ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ ಕೊಂಡು ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವಂತಾಗಬೇಕು. ಇದು ಸಂವಿಧಾನಾತ್ಮಕ ಹಕ್ಕಾಗಿದೆ, ಅದನ್ನು ಉಳಿಸಬೇಕು.

ಈ ಒಟ್ಟು ಸನ್ನಿವೇಶವನ್ನು ರಾಜಕೀಯ ಶಕ್ತಿಗಳು ದುರುಪಯೋಗಪಡಿಸಿಕೊಳ್ಳದಂತೆ ತಡೆಯಲು ಎಚ್ಚರವಹಿಸಬೇಕು. ಶೈಕ್ಷಣಿಕ ಶಾಂತಿ ನಮಗೆ ಬೇಕು. ಶಿಕ್ಷಣದ ಹಕ್ಕು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯತೆಯಾಗಬೇಕು.

ಈ ಪ್ರಶ್ನೆಯು ಹುಟ್ಟು ಹಾಕಿರುವ ಮತ್ತು ಅದರ ದೀರ್ಘಾವಧಿ ಪರಿಣಾಮಗಳನ್ನು ಗಂಭೀರವಾಗಿ ಅರಿತು ಸೌಹಾರ್ದಯುತವಾಗಿ ಬಗೆಹರಿಯಲು ಸಂಬಂಧಿಸಿದ ಎಲ್ಲಾ ಭಾಗೀದಾರ ಪಕ್ಷಗಳು ಮತ್ತು ಸಮಾಜದ ಜನತೆ ಮುಂದಾಗಬೇಕು ಎಂದು ಕಳಕಳಿಯಿಂದ ವಿನಂತಿಸಿದೆ.

ಡಾ.ಕೆ.ಮರುಳಸಿದ್ದಪ್ಪ, ಪ್ರೊ.ಬರಗೂರು ರಾಮಚಂದ್ರಪ್ಪ, ಡಾ.ಜಿ.ರಾಮಕೃಷ್ಣ, ಪ್ರಸನ್ನ, ಪ್ರೊ. ಅರವಿಂದ ಮಾಲಗತ್ತಿ, ಡಾ.ಎಸ್.ಜಿ.ಸಿದ್ದರಾಮಯ್ಯ, ಡಾ.ಬಂಜಗೆರೆ ಜಯಪ್ರಕಾಶ್, ಡಾ. ವಿಜಯಾ, ಸೂಫಿ ವಲಿಬಾ, ಪ್ರೊ.ಸುಕನ್ಯಾ ಮಾರುತಿ, ಡಾ.ಕೆ.ಶರೀಫಾ, ಡಾ. ವಸುಂದರ ಭೂಪತಿ, ಅಮೀರ್ ಜಾನ್ ಖಾದ್ರಿ, ಮಾವಳ್ಳಿ ಶಂಕರ್, ಲಕ್ಷ್ಮೀ ನಾರಾಯಣ, ನಾಗವಾರ, ಫಾ. ಡಾ.ಮನೋಹರಚಂದ್ರ ಪ್ರಸಾದ್, ಪೆರಿಕೋ ಪ್ರಭು, ಡಾ.ಎಸ್.ವೈ.ಗುರುಶಾಂತ್, ಕೆ.ಎಸ್.ವಿಮಲಾ, ಗೋಪಾಲಕೃಷ್ಣ ಅರಳಹಳ್ಳಿ.

# ಶಿವಮೊಗ್ಗದ ಯುವಕನ ಹತ್ಯೆಗೆ ಖಂಡನೆ: ಹತ್ಯೆ ನಂತರದ ದುರ್ಘಟನೆಗಳು ಮತ್ತು ಸರಕಾರದ ವೈಫಲ್ಯ ಕುರಿತು ಹೈಕೋರ್ಟ್ ಉಸ್ತುವಾರಿಯಲ್ಲಿ ತನಿಖೆಗೆ ಆಗ್ರಹ

ಶಿವಮೊಗ್ಗದ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಕೊಲೆ ಮತ್ತು ಹತ್ಯೆಯ ನಂತರದಲ್ಲಿ ಅಂತ್ಯಸಂಸ್ಕಾರದ ಮೆರವಣಿಗೆ ಸಂದರ್ಭದಲ್ಲಿ ನಡೆದ ದಾಂಧಲೆ, ಹಿಂಸಾಚಾರಗಳು ನಿಜಕ್ಕೂ ಅತ್ಯಂತ ಆತಂಕಕಾರಿ ಘಟನೆಗಳಾಗಿವೆ. ಯಾವುದೇ ವಿಷಯ ಅಥವಾ ಯಾರ ಬಗ್ಗೆಯೂ ಅಭಿಪ್ರಾಯ ಭೇದಗಳು, ಭಿನ್ನಾಭಿಪ್ರಾಯಗಳು ಇರಬಹುದಾದರೂ ಕೊಲೆ, ಹಿಂಸಾಚಾರದ ಮಾರ್ಗವನ್ನು ಅನುಸರಿಸುವುದು ಅತ್ಯಂತ ಅಪಾಯಕಾರಿ, ಖಂಡನಾರ್ಹ ಕೃತ್ಯಗಳಾಗಿವೆ. ಈ ಘಟನೆಗಳನ್ನು 'ಸೌಹಾರ್ದತೆಗಾಗಿ ಕರ್ನಾಟಕ' ವು ಆತಂಕ ಮತ್ತು ತೀವ್ರ ಖಂಡನೆಯನ್ನು ವ್ಯಕ್ತಪಡಿಸಿದೆ.

ಅಪಾರ ಹಾನಿಯನ್ನು ತಂದಿರುವ ಈ ಎರಡು ಘಟನೆಗಳ ಬಗ್ಗೆ ಆಳವಾದ ನಿಸ್ಪಕ್ಷಪಾತ ತನಿಖೆ ನಡೆಯಬೇಕು ಮತ್ತು ಅತ್ಯಂತ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಸೋಮವಾರದಂದು ನಡೆದ ಅಂತ್ಯಕ್ರಿಯೆಯ ಮೆರವಣಿಗೆಯಲ್ಲಿ ಸಂಭವಿಸಿದ ದಾಂಧಲೆ ಮತ್ತು ಹಿಂಸಾಚಾರದ ಘಟನೆಗಳ ವಿವರಗಳನ್ನು ಪರಿಶೀಲಿಸಿದಾಗ ಸರಕಾರದ ಜಿಲ್ಲಾಡಳಿತ ಸಂಪೂರ್ಣವಾಗಿ ವೈಫಲ್ಯವಾಗಿರುವುದು ಎದ್ದು ಕಾಣುತ್ತದೆ. ಮಾತ್ರವಲ್ಲ, ಅಂತಹ ದಾಳಿ, ಆಸ್ತಿ ನಾಶ, ಸಾರ್ವಜನಿಕರ ವಸ್ತುಗಳ ಲೂಟಿಗಳು ಹಿರಿಯ ಜಿಲ್ಲಾ ಪೊಲೀಸ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಸಚಿವ ಕೆ.ಎಸ್. ಈಶ್ವರಪ್ಪ, ಸಂಸದ ಬಿ.ವೈ. ರಾಘವೇಂದ್ರ ಅವರ ಸಮ್ಮುಖದಲ್ಲಿಯೇ ಸಂಭವಿಸಿವೆ. ಬಜರಂಗದಳ ಮತ್ತು ಸಂಘಪರಿವಾರದ ಅನೇಕರು ಪ್ರಚೋದನಾತ್ಮಕವಾಗಿ ವರ್ತಿಸಿದರೂ ಅದನ್ನು ನಿಯಂತ್ರಿಸುವ ಯಾವ ಪ್ರಯತ್ನಗಳು ನಡೆದಿಲ್ಲ. ಒಂದೆಡೆ ಹಿಜಾಬ್ ಮತ್ತು ಕೇಸರಿ ಶಾಲು ವಿವಾದ ಹಿನ್ನಲೆಯಲ್ಲಿ ಉದ್ರಿಕ್ತ ಪರಿಸ್ಥಿತಿಯ ವಾತಾವರಣ ಇರುವಾಗ ಅಂತ್ಯಕ್ರಿಯೆ ಮೆರವಣಿಗೆಗೆ ಅನುಮತಿ ಕೊಟ್ಟಿದ್ದಾದರೂ ಯಾಕೆ? ನಿಷೇಧಾಜ್ಞೆ ಸೆಕ್ಷನ್ 144 ಇದ್ದಾಗಲೂ ಅದನ್ನು ಉಲ್ಲಂಘಿಸಿ ಬಿಜೆಪಿ ನಾಯಕರುಗಳ ನೇತೃತ್ವದಲ್ಲಿ ಮೆರವಣಿಗೆ ನಡೆದಿರುವುದರ ಅರ್ಥವೇನು? ಮುಖ್ಯ ಜಿಲ್ಲಾ ಅಧಿಕಾರಿಗಳ ಕಣ್ಣೆದುರಿನಲ್ಲಿಯೇ ಇಂತಹ ಘಟನೆಗಳು ನಡೆದಾಗಲೂ ಪೊಲೀಸರು ಕೇವಲ ಮೂಕಪ್ರೇಕ್ಷಕರಾಗಿ ನಿಷ್ಕ್ರಿಯರಾಗಿ ನಿಂತಿದ್ದಾದರೂ ಯಾಕೆ? ಎನ್ನುವ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಸಂಭವನೀಯ ಹಿಂಸಾಚಾರದ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿರಲಿಲ್ಲವೇ? ಗೃಹ ಸಚಿವರ ಜಿಲ್ಲೆಯಲ್ಲೇ ಕಾನೂನು ಕುಸಿದಿರುವ ಪ್ರಕರಣಗಳು ಹೆಚ್ಚುತ್ತಿರುವುದು ಗಂಭೀರವಾದ ವಿಚಾರವಾಗಿದೆ. ಇವೆಲ್ಲವನ್ನು ಪರಿಶೀಲಿಸಿದರೆ ಬಿಜೆಪಿ ಮತ್ತು ಸಂಘಪರಿವಾರ ಸರಕಾರದ ಆಡಳಿತವನ್ನು ದುರುಪಯೋಗ ಪಡಿಕೊಳ್ಳುತ್ತಿರುವುದು ಕಾಣುತ್ತದೆ.

ಮತೀಯ ಶಕ್ತಿಗಳು ಶಸ್ತ್ರಾಸ್ತ್ರಗಳನ್ನು ಹಿಡಿದು ಹೂಂಕರಿಸಿ ಬೆದರಿಕೆಯೊಡ್ಡುತ್ತಿವೆ. ಆದರೆ ಕ್ರಮವಿಲ್ಲ. ಶಿವಮೊಗ್ಗದಲ್ಲಿನ ದಾಂಧಲೆ ಘಟನೆಯಲ್ಲಿ ಸರಕಾರದ ವಿಫಲ ಪಾತ್ರದ ಬಗ್ಗೆ ಅನುಮಾನ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಸರ್ವೋಚ್ಚ ನ್ಯಾಯಾಲಯವು ಸ್ವಯಂಪ್ರೇರಿತವಾಗಿ (ಸ್ಯೂ ಮೋಟೋ) ಮುತುವರ್ಜಿ ವಹಿಸಿ ಹೈಕೋರ್ಟಿನ ಹಾಲಿ ನ್ಯಾಯಾಧೀಶರ ಉಸ್ತುವಾರಿಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಸೌಹಾರ್ದ ಕರ್ನಾಟಕ ಕೋರಿದೆ.

ಯಾರೇ ಆಗಲಿ ಎಷ್ಟೇ ದೊಡ್ಡವರಾದರೂ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ದಿಟ್ಟ ಕ್ರಮಗಳಿಂದ ಹೊರಡಿಸಬೇಕಾಗಿದೆ.

ರಾಜಕೀಯ ದುರ್ಲಾಭ ಗಳಿಗಾಗಿ ಸಮಾಜದಲ್ಲಿ ಶಾಂತಿ ಸೌಹಾರ್ದತೆಯನ್ನು ಕದಡುವ, ಶಾಸನಬದ್ಧ ಆಡಳಿತವನ್ನು ಧಿಕ್ಕರಿಸುವ ಕೃತ್ಯಗಳಿಗೆ ಕೆಲವು ಶಕ್ತಿಗಳು ತೊಡಗಿರುವುದನ್ನು ಶಾಂತಿಪ್ರಿಯ ಜನತೆ ಖಡಾಖಂಡಿತವಾಗಿ ವಿರೋಧಿಸಬೇಕು. ಕನ್ನಡ ನಾಡಿನ ಶಾಂತಿ, ಸೌಹಾರ್ದತೆ–ಸಾಮರಸ್ಯವನ್ನು ಕಾಪಾಡಬೇಕೆಂದು ಯಾವುದೇ ಶಕ್ತಿಗಳ ಪ್ರಚೋದನೆಗೆ ಒಳಗಾಗಬಾರದೆಂದು ಜನತೆಯಲ್ಲಿ ಸೌಹಾರ್ದ ಕರ್ನಾಟಕವು ಮನವಿ ಮಾಡಿದೆ.

## ಫ್ಲೈ ಓವರ್ ಕಳಪೆ ಕಾಮಗಾರಿ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ......... ಪುಟ 3 ರಿಂದ

ಬಂದ್ ಮಾಡಲಾಗಿತ್ತು. ಇದಕ್ಕೆ ಫ್ಲೈ ಓವರ್ ನ ಕಳಪೆ ಕಾಮಾಗಾರಿಯಿಂದ ಮತ್ತು ಪಿಲ್ಲರ್ ಗಳ ಅಸಮರ್ಪಕ ನಿರ್ವಹಣೆಯಿಂದಾಗಿ ವಾಹನ ಸಂಚಾರವು ಅಪಾಯಕಾರಿಯಾಗಿದೆ ಎಂದು ಸರಕಾರವೇ ಹೇಳುತ್ತಿದೆ. ಇಂದು ದುರಸ್ಥಿ ಮಾಡಲಾಗದಷ್ಟರ ಮಟ್ಟಿಗೆ ಫ್ಲೈ ಓವರ್ ಹದಗೆಟ್ಟಿದೆ. ಒಂದೆರಡು ತಿಂಗಳಲ್ಲಿ ಆಗಿರಬಹುದಾದ ಸಮಸ್ಯೆಯಲ್ಲ. ಬದಲಾಗಿ ಫ್ಲೈ ಓವರ್ ನಿರ್ಮಾಣದ ಹಂತದಲ್ಲಿ ಸಿಮೆಂಟ್ ಹಾಗು ಇನ್ನಿತರ ಕಳಪೆ ಗುಣಮಟ್ಟದ ವಸ್ತುಗಳ ಬಳಕೆ ಹಾಗು ಅತೀವ ಭ್ರಷ್ಟಾಚಾರದಿಂದ ಆಗಿರುವ ಸಮಸ್ಯೆ ಇದಾಗಿದೆ. ಆದ್ದರಿಂದ ಈ ಕಳಪೆ ಕಾಮಾಗಾರಿಯ ಕುರಿತು ತಪ್ಪಿತಸ್ಥರ ವಿರುದ್ಧ ಸಮಗ್ರ ತನಿಖೆಗೆ ಅವರು ಒತ್ತಾಯಿಸಿದೆ.

750 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಫ್ಲೈ ಓವರ್ ನ್ನು ಈಗ ಕೆಡವಿ ಹೊಸದಾಗಿ ನಿರ್ಮಾಣ ಮಾಡುವುದಾಗಿ ಹೇಳಲಾಗುತ್ತಿದೆ. ಆದರೆ ಇಂದು ಮತ್ತೆ ಫ್ಲೈ ಓವರ್ ಕೆಡವಿ ಮರುನಿರ್ಮಾಣ ಮಾಡಿದಲ್ಲಿ ರಾಜ್ಯ ಸರ್ಕಾರ ಸುಮಾರು 22 ಜಿಲ್ಲೆಗಳಿಗೆ ಹಾಗು ಹೊರ ರಾಜ್ಯಗಳಿಗೆ ಪ್ರವೇಶ ದ್ವಾರವಾಗಿರುವ ಈ ಪ್ರಮುಖ ರಸ್ತೆಯು ಸಂಪೂರ್ಣ ಬಂದ್ ಆಗಲಿದ್ದು, ಇದರಿಂದ ಪ್ರತಿನಿತ್ಯ ಲಕ್ಷಾಂತರ ಜನರಿಗೆ ಅತೀವ ಅನಾನುಕೂಲವಾಗಲಿದೆ, ಅಲ್ಲದೇ ಈಗ ಹೊಸ ಫ್ಲೈ ಓವರ್ ನಿರ್ಮಾಣಕ್ಕೆ ಕನಿಷ್ಠ 3000 ಕೋಟಿ ರೂ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ತುಮಕೂರು ರಸ್ತೆಯ ಗೊರಗುಂಟೆಪಾಳ್ಯದಿಂದ ಪಾರ್ಲೆ ಟೋಲ್ ವರೆಗಿನ ಫ್ಲೈ ಫ್ಲೈಓವರ್ ಹದಗೆಟ್ಟಿರುವ ಮತ್ತು ಕಳಪೆ ಕಾಮಾಗಾರಿಗೆ ಕಾರಣವಾಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಹಾಗು ಅಂಥವರ ವಿರುದ್ಧ ಕ್ರಿಮಿನಲ್ ದೂರು ದಾಖಲಿಸಿ ಫ್ಲೈ ಓವರ್ ನ ದುರಸ್ಥಿ ಕಾರ್ಯಕ್ಕೆ ಗುತ್ತಿಗೆದಾರರಿಂದ ಹಣ ವಸೂಲಿ ಮಾಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಬೇಕು ಎಂದು ಪ್ರತಿಭಟನೆಕಾರರು ಆಗ್ರಹಿಸಿದೆ.

ಪ್ರತಿಭಟನೆಯಲ್ಲಿ ರಾಜ್ಯ ಸಮಿತಿ ಸದಸ್ಯರಾದ ಗೌರಮ್ಮ, ಸಿಪಿಐ(ಎಂ) ಹಿರಿಯ ಮುಖಂಡರಾದ ಹೆಚ್.ಎನ್. ಗೋಪಾಲಗೌಡ, ಬೆಂಗಳೂರು ಜಿಲ್ಲಾ ಮುಖಂಡರಾದ ಲೀಲಾವತಿ ಟಿ., ಹುಳ್ಳಿ ಉಮೇಶ್, ಹನುಮಂತರಾವ್ ಹವಲ್ದಾರ್, ಚಂದ್ರಶೇಖರ್, ಮಂಗಳ ಕುಮಾರಿ, ನಂಜೇಗೌಡ, ವಿಜಯಲಕ್ಷ್ಮೀ, ರೇಣುಕ, ತಿಮ್ಮರಾಜು, ಸುಶೀಲಮ್ಮ, ಮಂಜುಳಾ, ರವಿ, ಚಾರ್ಲಿ ಸೇರಿದಂತೆ ನೂರಾರು ಜನಕಾರ್ಮಿಕರು ಮಹಿಳೆಯರು ಭಾಗವಹಿಸಿದ್ದರು.

# ಅಭಿವೃದ್ಧಿ ನೆಪದಲ್ಲಿ ಅಸ್ಮಿತೆಯ ಅಳಿಸಲು ಹುನ್ನಾರ




**ಬಾನುಗೊಂದಿ ಲಿಂಗರಾಜು**

ಚನ್ನಪಟ್ಟಣ ಕೆರೆ ಒಡೆದು ಬಸ್ ನಿಲ್ದಾಣ ಕಟ್ಟಲಾಯಿತು. ಬ್ರಿಟಿಷರ ಕಾಲದಲ್ಲಿ ಹಾಸನ ಸುತ್ತಮುತ್ತ ಶ್ರೀಗಂಧ ಕಿತ್ತು ಸಂಗ್ರಹಿಸುತ್ತಿದ್ದ ಗಂಧದ ಕೋಠಿಯನ್ನು ತೆಗೆದು ಕಾಲೇಜುಗಳು ಮತ್ತು ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಈ ಎರಡೂ ಕಾಮಗಾರಿಗೆ ಜನರ ವಿರೋಧವನ್ನು ಅಂದಿನ ಸಚಿವರಾಗಿದ್ದ ಎಚ್.ಡಿ.ರೇವಣ್ಣ ಪರಿಗಣಿಸಲಿಲ್ಲ. ಈಗ ಇಂದಿನ ಶಾಸಕ ಬಿಜೆಪಿಯ ಪ್ರೀತಂ ಜೆ.ಗೌಡ ಕೂಡ ಹಾಸನ ನಗರದ ಶ್ವಾಸಕೋಶ ಎಂದೇ ಹೆಸರಾದ ಮಹಾರಾಜ ಪಾರ್ಕನ್ನು ಅಭಿವೃದ್ಧಿ ಪಡಿಸುತ್ತೇನೆ ಎಂದು ಅಲ್ಲಿ ಕಾಂಕ್ರೀಟ್ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ.

**ಪಾರ್ಕಿಗಿದೆ ಐತಿಹಾಸಿಕ ಮಹತ್ವ**

ಮಹಾರಾಜ ಪಾರ್ಕ್ ಎಂದರೆ ಮೈಸೂರು ರಾಜ್ಯದಲ್ಲಿ ಅಭಿವೃದ್ಧಿಪರ್ವಕ್ಕೆ ಕಾರಣವಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಾಸನ ನಗರಕ್ಕೆ ನೀಡಿದ ಕೊಡುಗೆ. 1920ರ ಸುಮಾರಿಗೆ ಹಾಸನಕ್ಕೆ ಆಗಮಿಸಿದ್ದ ಮಹಾರಾಜರು ಅಂದಿನ ಹಾಸನದ ಹೊರವಲಯದಲ್ಲಿ 15 ಎಕರೆಯಷ್ಟು ಜಾಗವನ್ನು ಉದ್ಯಾನವನಕ್ಕೆ ಮೀಸಲಿಟ್ಟು ಅಭಿವೃದ್ಧಿಗಾಗಿ 1000 ರೂ. ನೀಡಿದ್ದರು. ನಾಲ್ವಡಿ ಅವರ ರಾಜ್ಯಭಾರದ ಕೊನೆಯಲ್ಲಿ ಅಂದರೆ 1938ರಲ್ಲಿ ಈ ಪಾರ್ಕನ್ನು ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರು ಇನ್ನಷ್ಟು ಅಭಿವೃದ್ಧಿಗೊಳಿಸಿ ಹಾಸನ ನಗರಕ್ಕೆ ಸಮರ್ಪಿಸಿದ್ದರು. ಅಂದು ಎರಡು ಸಾವಿರಕ್ಕೂ ಕಡಿಮೆಯಿದ್ದ ಹಾಸನ ಜನತೆಗೆ 15 ಎಕರೆ ಉದ್ಯಾನವನ್ನು ನೀಡಿದ್ದ ಮಹಾರಾಜರ ನೆನಪಿಗಾಗಿ ಅವರ ಹೆಸರನ್ನೇ ಇಡಬೇಕು ಎಂಬುದು ಜನತೆಯ ಅಪೇಕ್ಷೆಯಾಗಿತ್ತು. ಆದರೆ ತೀವ್ರವಾಗಿದ್ದ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ವಹಿಸಿದ್ದ

**ಶಿಲ್ಪಕಲೆಗೆ ಹೆಸರಾದಂತೆ ಹಾಸನ ತಂಪಾದ ವಾತಾವರಣಕ್ಕೂ ಪ್ರಸಿದ್ಧ. ಬಡವರ ಊಟಿ ಎಂದೇ ಕರೆಸಿಕೊಳ್ಳುವ ಹಾಸನ ಜಿಲ್ಲೆಯಲ್ಲಿ ಅವೈಜ್ಞಾನಿಕವಾಗಿ, ಮನಬಂದಂತೆ ಕಾಮಗಾರಿಗಳನ್ನು ನಡೆಸುತ್ತಿರುವುದು ಹೊಸದೇನಲ್ಲ. ಜನರ ವಿರೋಧವಿದ್ದರೂ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಕಾಂಕ್ರೀಟೀಕರಣ ಮಾಡುವುದನ್ನು ಆಳುವವರು ಪರಿಗಣಿಸುತ್ತಿಲ್ಲ.**

ಗಾಂಧಿವಾದಿಗಳ ಒತ್ತಾಯಕ್ಕೆ ಮಹಾರಾಜ ಪಾರ್ಕ್ ಎಂದು ಹೆಸರಿಡಲಾಯಿತು.

ಸ್ವಾತಂತ್ರ್ಯದ ನಂತರ ಹಾಸನ ಪುರಸಭೆಯು ನಿರ್ವಹಣೆ ಹೊಣೆ ಹೊತ್ತಿತು. ನಂತರ ನಗರಸಭೆಯ ಸ್ವಾಧೀನಕ್ಕೆ ಬಂದಿತು. ನಿರ್ವಹಣೆಯ ಹೊಣೆ ಹೊತ್ತ ಆರಂಭದಲ್ಲಿ ನೀರಿನ ಕಾರಂಜಿ, ಆಸನಗಳು, ಕಲ್ಲಿನ ಬ್ಯಾಂಡ್‌ಸ್ಟಾಂಡ್‌ಗಳು, ವಾಕಿಂಗ್ ಪಾತ್ ಅನ್ನು ನಿರ್ಮಿಸಲಾಗಿತ್ತು. ನಂತರ ಅಲ್ಲಿಗೆ ಮಕ್ಕಳು ಆಟವಾಡುವ ಸಾಮಗ್ರಿಗಳನ್ನು ಅಳವಡಿಸಲಾಯಿತು. ಜಿಂಕೆ ಮತ್ತಿತರ ಪ್ರಾಣಿಗಳನ್ನು ಪಾರ್ಕಿಗೆ ಕರೆತರಲಾಯಿತಾದರೂ ಕಾನೂನಿನ ಕಾರಣಕ್ಕಾಗಿ ಹಾಸನದ ಹೊರವಲಯದ ಗೆಂಡೇಕಟ್ಟೆ ಅರಣ್ಯಕ್ಕೆ ಬಿಡಲಾಯಿತು.

ನಗರಸಭೆಯು ಕಾಲಕಾಲಕ್ಕೆ ಜನರ ಬೇಡಿಕೆಯಂತೆ ಕೆಲ ಕಾಮಗಾರಿಗಳನ್ನು ಮಾಡಿದೆ. ವಾಕಿಂಗ್ ಪಾತ್, ಹೂ ಗಿಡಗಳನ್ನು ಬೆಳೆಸಿ ಕಾರಂಜಿಯನ್ನು ದುರಸ್ತಿ ಮಾಡುತ್ತಿತ್ತು.

**ಖಾಸಗೀಕರಣದ ಹುನ್ನಾರ**

ಸದ್ಯ ಪಾರ್ಕಿನಲ್ಲಿ ಯೋಗ ಕೇಂದ್ರ, ಪುರಾತತ್ವ ಇಲಾಖೆಯ ಮ್ಯೂಸಿಯಂ, ಈಜುಕೊಳ, ಮತ್ಸ್ಯಾಲಯ ಮತ್ತು ಎರಡು ಕ್ರೀಡಾಂಕಣಗಳಿವೆ. ಈಗ ಅವುಗಳ ಜೊತೆಗೆ ಮಹಿಳೆಯರ ಈಜುಕೊಳ ಮತ್ತು ಬಟ್ಟೆ ಬದಲಿಸುವ ಕೊಠಡಿ, ವಾಲಿಬಾಲ್ ಮತ್ತು ಷಟಲ್ ಬಾಲ್‌ಬ್ಯಾಡ್ಮಿಂಟನ್ ತಲಾ ಎರಡು ಕ್ರೀಡಾಂಕಣಗಳು, ಜಿಮ್‌ಗಳು, 6 ಗಜೀಬೋ (ಮೊಗಸಾಲೆಗಳು)ಗಳನ್ನು ಸುಮಾರು 14 ಕೋಟಿ



40 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಇದಕ್ಕೆ ಜನವಿರೋಧ ವ್ಯಕ್ತವಾಗಿದೆ.

ಪಾರ್ಕ್ ಅನ್ನು ಪಾರ್ಕ್ ಆಗಿಯೇ ಉಳಿಯಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ. ಜನವಿರೋಧವನ್ನು ಶಾಸಕರು ನಿರ್ಲಕ್ಷಿಸಿದ್ದರಿಂದ ನಾಗರಿಕರು ಎಲ್ಲಾ ವಿಭಾಗದ ಜನರನ್ನೊಳಗೊಂಡ ವಿಶಾಲವಾದ ವೇದಿಕೆಯನ್ನು 'ಮಹಾರಾಜ ಪಾರ್ಕ್ ಉಳಿಸಿ ಹೋರಾಟ ಸಮಿತಿ' ಹೆಸರಿನಲ್ಲಿ ಸಂಘಟಿತರಾಗಿ ಹೋರಾಟವನ್ನು ಆಂದೋಲನ ಮಾದರಿಯಲ್ಲಿ ರೂಪಿಸುತ್ತಿದ್ದಾರೆ. ಪಾರ್ಕ್‌ನಲ್ಲಿ ಯಾವುದೇ ರೀತಿಯ ಕಟ್ಟಡದ ಕಾಮಗಾರಿಗಳನ್ನು ನಡೆಸಕೂಡದು ಎಂದು ಒತ್ತಾಯಿಸಿರುವ ಸಮಿತಿಯು, ಕಾಮಗಾರಿಗಳನ್ನು ತಕ್ಷಣವೇ ನಿಲ್ಲಿಸದಿದ್ದರೆ ಕಾನೂನಾತ್ಮವಾಗಿ ಮತ್ತು ಪ್ರಜಾಸತ್ತಾತ್ಮಕವಾದ ಹೋರಾಟಗಳ ಮುಖಾಂತರ ತಡೆಯಲು ಸಮಿತಿಯು ಮುಂದಾಗಿದೆ.

ಹಾಸನದ ಮಹಾರಾಜ ಪಾರ್ಕ್ ಮೈಸೂರು ಮಹಾರಾಜರ ಕಾಲದಿಂದ ಇರುವ ಏಕೈಕ ದೊಡ್ಡ ಉದ್ಯಾನವನವಾಗಿದೆ. ನಗರದ ಮಧ್ಯಭಾಗದಲ್ಲಿ ಇರುವ ಇದು ನಿತ್ಯ ಹಸುರಿನ ಸಸ್ಯ ವೈವಿಧ್ಯತೆ ಹೊಂದಿರುವ ಅತ್ಯಂತ ಹಳೆಯ ಉದ್ಯಾನವನ. ಜನರು ದಣಿವಾರಿಸಿಕೊಳ್ಳುವ, ವಿಶ್ರಾಂತಿ ಪಡೆಯುವ, ಮಕ್ಕಳ ಆಟಗಳಿಗೆ ಮತ್ತು ದೊಡ್ಡವರ ವಾಯು ವಿಹಾರ, ನಡಿಗೆ ವ್ಯಾಯಾಮಗಳಿಗೆ ನೆಚ್ಚಿನ ಅತ್ಯಂತ ಸ್ಥಳವಾಗಿದೆ. ಮಹಾರಾಜ ಉದ್ಯಾನವನ ಜಿಲ್ಲೆಯಲ್ಲಿ ಐತಿಹಾಸಿಕ ಮಹತ್ವ ಪಡೆದಿದೆ. ಇಂತಹ ಹಲವು ಮಹತ್ವಗಳನ್ನು ಹೊಂದಿರುವ ಉದ್ಯಾನವನವನ್ನು ಹಸಿರೀಕರಣ ಮಾಡಿ ಹಾಸನ ನಗರಸಭೆಯು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಎಂಬುದು ಸಮಿತಿಯ ಬೇಡಿಕೆ.

'ಅಭಿವೃದ್ಧಿ' ಹೆಸರಿನಲ್ಲಿ ಮಹಾರಾಜ ಪಾರ್ಕ್‌ನಲ್ಲಿ ಆಳವಾದ ಗುಂಡಿಗಳನ್ನು ತೆಗೆದು ದೊಡ್ಡ ದೊಡ್ಡ ತಳಪಾಯಗಳನ್ನು ಹಾಕಿ ಕಾಂಕ್ರೀಟ್ ಪಿಲ್ಲರ್‌ಗಳನ್ನು ನಿಲ್ಲಿಸಲಾಗಿದೆ. ಸಾರ್ವಜನಿಕ ಉದ್ಯಾನವನಗಳಲ್ಲಿ ಈ ರೀತಿಯ ಯಾವುದೇ ಕಾಮಗಾರಿಗಳನ್ನು ಮಾಡುವುದು 1975ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಮಹಾರಾಜ ಪಾರ್ಕ್‌ನಲ್ಲಿ ಈಗ ನಡೆಸುತ್ತಿರುವ 'ಅಭಿವೃದ್ಧಿ' ಹೆಸರಿನ ಕಾಮಗಾರಿಗಳಿಗೆ ಸರ್ಕಾರದ ಮತ್ತು ಇಲಾಖೆಗಳ ಯಾವುದೇ ರೀತಿಯ ಸ್ಪಷ್ಟವಾದ ಆದೇಶ, ಕ್ರಿಯಾ ಯೋಜನೆ ಮತ್ತು ಕಾರ್ಯಾದೇಶಗಳನ್ನು ಇದುವರೆಗೂ ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ. ಈ ಕಾಮಗಾರಿಗಳ ಸಂಬಂಧ ಸರ್ಕಾರದ ಯಾವುದೇ ಅಧಿಕಾರಿಗಳು ಸರಿಯಾದ ಸ್ಪಷ್ಟನೆ ನೀಡುತ್ತಿಲ್ಲ. ಈ ಕಾಮಗಾರಿಗಳು ಸಂಪೂರ್ಣವಾಗಿ ಹಾಸನದ ವಿಧಾನಸಭಾ ಕ್ಷೇತ್ರದ ಶಾಸಕರ ಆದೇಶದಂತೆ ನಡೆಯುತ್ತಿದೆ ಎಂಬುದು ಸಮಿತಿಯ ಗೌರವಾಧ್ಯಕ್ಷ, ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಚಿತ್ರ ಕಲಾವಿದ ಕೆ.ಟಿ. ಶಿವಪ್ರಸಾದ್ ಅವರ ಆರೋಪ.

ಅಭಿವೃದ್ಧಿ' ಎಂಬ ಕಟ್ಟುಕತೆಗಳಿಗೆ ಮರುಳಾಗಿ ಹಾಸನದ ನಾಗರಿಕರು ಈಗಾಗಲೇ ಚನ್ನಪಟ್ಟಣ ಕೆರೆ, ಹೈಸ್ಕೂಲ್ ದೊಡ್ಡ ಮೈದಾನ ಮತ್ತು ಐತಿಹಾಸಿಕ ಗಂಧದ ಕೋಠಿಯನ್ನು ಕಳೆದುಕೊಂಡಾಗಿದೆ. ಆ ಸಂದರ್ಭದಲ್ಲಿ ಉಂಟಾದ ಸಾರ್ವಜನಿಕ ಪ್ರತಿರೋಧ ಮತ್ತು ಸಂಘಟನೆಗಳ ಹೋರಾಟಗಳನ್ನೂ ಲೆಕ್ಕಿಸದೆ ಅಂದಿನ ಸರ್ಕಾರ ಮತ್ತು ಜನ ಪ್ರತಿನಿಧಿಗಳು ಅಭಿವೃದ್ಧಿ'ಯ ಹೆಸರಿನಲ್ಲಿ ನಗರದಲ್ಲಿನ ಕೆರೆ, ಮೈದಾನ ಮತ್ತು ಉದ್ಯಾನವನಗಳಲ್ಲಿ ನಡೆಸಿದ ಕಾಮಗಾರಿಗಳ ಪರಿಣಾಮ ನಗರದ ಜನರು ಈಗಲೂ ಅನುಭವಿಸುತ್ತಿದ್ದಾರೆ. ಈಗ ನಗರದ ದೊಡ್ಡ ಉದ್ಯಾನವನವನ್ನೇ ಈಗಿನ ಶಾಸಕರು ನಾಶಪಡಿಸಲು ಹೊರಟಿದ್ದಾರೆ ಎಂಬುದು ಸಮಿತಿಯ ಕಾರ್ಯಾಧ್ಯಕ್ಷ ಧರ್ಮೇಶ್ ಅವರ ಆರೋಪ.

ಶಾಸಕರು ಸಮಿತಿಯ ಅಭಿಪ್ರಾಯಗಳನ್ನು ಪರಿಗಣಿಸುತ್ತಿಲ್ಲ. ಹಾಸನ ನಗರದ ಅಭಿವೃದ್ಧಿ'ಯ ಹೆಸರಿನಲ್ಲಿ ಹಿಂದಿನವರು ನಡೆದುಕೊಂಡದ್ದಕ್ಕಿಂತಲೂ ತೀವ್ರವಾಗಿ ನಡೆದುಕೊಳ್ಳುತ್ತಿದ್ದಾರೆ. ಮಹಾರಾಜ ಪಾರ್ಕ್‌ನಲ್ಲಿ ಯಾವುದೇ ಕಟ್ಟಡ ಕಾಮಗಾರಿಗಳನ್ನು ನಡೆಸುತ್ತಿಲ್ಲ. ಅಲ್ಲಿ ಜನರು ಕೂರಲು ಗಜೀಬೊ' (ಮೊಗಸಾಲೆ) ಮತ್ತು ಆಟದ ಅಂಕಣಗಳನ್ನು ಮಾತ್ರ ಮಾಡಲಾಗುತ್ತಿದೆ ಎಂದು ಸಾರ್ವಜನಿಕರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಮಹಾರಾಜ ಪಾರ್ಕ್ ಉಳಿಸಿ' ಎನ್ನುತ್ತಿರುವವರನ್ನು ಅಭಿವೃದ್ಧಿ ವಿರೋಧಿಗಳು ಎಂದು ಹಣೆಪಟ್ಟಿ ಕಟ್ಟುತ್ತಿದ್ದಾರೆ. ಹೋರಾಟದ ವಿರುದ್ಧವಾಗಿ ಪ್ರತಿ ಹೋರಾಟ ನಡೆಸುವಂತೆ ನೋಡಿಕೊಳ್ಳುತ್ತಿದ್ದಾರೆ.

ಆದರೆ ಸಮಿತಿಯು ಈಗ ಮಾಡುತ್ತಿರುವ ಅಭಿವೃದ್ಧಿ' ಹೆಸರಿನ ಕಾಂಕ್ರೀಟೀಕರಣಕ್ಕೆ ಖಂಡಿತವಾಗಿಯೂ ನಮ್ಮ ವಿರೋಧವಿದೆ. ಸಾರ್ವಜನಿಕ ಉದ್ಯಾನವನಗಳಲ್ಲಿ ಹಸಿರೀಕರಣ ಹೆಚ್ಚಿಸಿ ಸಸ್ಯ ವೈವಿಧ್ಯತೆಗೆ ಹೆಚ್ಚಿನ ಅವಕಾಶ ನೀಡಿ ಉದ್ಯಾನವನಗಳ ಸೌಂದರ್ಯವನ್ನು ಹೆಚ್ಚಿಸಿ ಜನರು ವಿರಮಿಸಲು ಮತ್ತು ವಿಹಾರ ನಡೆಸಲು ಬೇಕಾದ ಅನುಕೂಲಗಳನ್ನು ಒದಗಿಸುವುದನ್ನು ಮಾತ್ರ ಅಭಿವೃದ್ಧಿ ಎನ್ನಲಾಗುತ್ತದೆ. ಮಹಾರಾಜ ಪಾರ್ಕ್ನಲ್ಲಿ ಇರುವ ಮರಗಳನ್ನು ಕಡಿದು ಮಾಡುತ್ತಿರುವ ಹತ್ತಾರು ಗಜೀಬೊ'ಗಳು ವಾಲಿಬಾಲ್, ಶೆಟಲ್, ಟೆನಿಸ್ ಕೋರ್ಟ್‌ಗಳು ಮತ್ತು ಜಿಮ್‌ಗಳು ಹೆಸರಿನಲ್ಲಿ ನಡೆಸುತ್ತಿರುವ ಕಟ್ಟಡ ಕಾಮಗಾರಿಗಳನ್ನು ಅಭಿವೃದ್ಧಿ ಎನ್ನಲಾಗುವುದಿಲ್ಲ ಮತ್ತು ಖಂಡಿತವಾಗಿಯೂ ಈ ಮಾದರಿಯ ಅಭಿವೃದ್ಧಿ'ಗೆ ನಮ್ಮ ವಿರೋಧವಿದೆ ಎಂಬುದು ಸಮಿತಿ ಅಧ್ಯಕ್ಷ ಬಿ.ಕೆ.ಮಂಜುನಾಥ್ ಅವರ ಸ್ಪಷ್ಟ ನುಡಿ.

**ಶಾಸಕರ ಹಠವೇಕೆ**

ಮಹಾರಾಜ ಪಾರ್ಕಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಇಡೀ ಹಾಸನದ ಜನತೆಯ ಶೇ.95ಕ್ಕೂ ಜನರ ವಿರೋಧದ ನಡುವೆಯೂ ಪಾರ್ಕ್‌ನಲ್ಲಿ 'ಅಭಿವೃದ್ಧಿ' ಮಾಡಲು ಹಠ ಹಿಡಿದಿರುವುದೇಕೆ.. ..

ಚನ್ನಪಟ್ಟಣ ಕೆರೆ ಅಭಿವೃದ್ಧಿಗೆಂದು ಬಂದ 144 ಕೋಟಿ ರೂಪಾಯಿ ಹಣವನ್ನು ಹಾಸನ ನಗರದ ಪಾರ್ಕ್ ಗಳ ಅಭಿವೃದ್ಧಿಗೆಂದು ವಿಭಾಗಿಸಿದ್ದು, ಅದರಲ್ಲಿ ಮಹಾರಾಜ ಪಾರ್ಕಿಗ 14.40 ಕೋಟಿ ರೂ. ಗಳನ್ನು ಕಾವೇರಿ ನೀರಾವರಿ ನಿಗಮ ನಿಯಮಿತದ ಮೂಲಕ ಬಿಡುಗಡೆ ಮಾಡಲಾಗಿದೆ. ಬೆಂಗಳೂರಿನ ಗುತ್ತಿಗೆ ಕಂಪನಿಯೊಂದು ಈ ಕಾಮಗಾರಿಯ ಗುತ್ತಿಗೆ ಪಡೆದಿದ್ದು, ಶಾಸಕರು ತಮ್ಮ ಪರಮಾಪ್ತರೊಬ್ಬರಿಗೆ ಉಪಗುತ್ತಿಗೆ ಕೊಡಿಸಿದ್ದಾರೆ. ಹೀಗಾಗಿ ಪರಮಾಪ್ತರಿಗೋಸ್ಕರ ಹಠ ಸಾಧಿಸುತ್ತಿದ್ದಾರೆ ಎಂಬುದು ಹಾಸನದ ತುಂಬಾ ಹರಿದಾಡುತ್ತಿರುವ ಮಾಹಿತಿ.

ಶಾಸಕ ಪ್ರೀತಮ್ ಗೌಡರು ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಪಾರ್ಕನ್ನು ಕಾಂಕ್ರೀಟಕರಣ ಮಾಡಲು ಹೊರಟಿರುವುದು ಮತ್ತು ಅದನ್ನು ಹಠಕ್ಕೆ ಬಿದ್ದು ಸಮರ್ಥಿಸಿ ಯಾರೂ ಬಂದಲೂ ನಿಲ್ಲಿಸುವುದಿಲ್ಲ ಎಂದು ಉಡಾಫೆಯಿಂದ ಮಾತನಾಡುವುದು ಒಬ್ಬ ಜನಪ್ರತಿನಿಧಿಯ ಲಕ್ಷಣವಲ್ಲ. ಜನರ ಭಾವನೆಗಳಿಗೆ ಬೆಲೆ ಕೊಡಿ.. ಜನ ವಿರೋಧಿ ಆಗಬೇಡಿ... ಎಂದು ಜನ ಸಲಹೆ ನೀಡುತ್ತಿದ್ದಾರೆ. ಆದರೆ ಜನರ ಸಲಹೆಗೆ ಕುರುಡಾಗಿರುವ ಶಾಸಕರ ಧಿಮಾಕಿನ ವರ್ತನೆಗೆ ಜನರು ಕಾನೂನಿನ ಮೂಲಕ ಉತ್ತರ ನೀಡಲು ಸಿದ್ಧತೆ ನಡೆಸಿದ್ದಾರೆ. ಇದು ಎಲ್ಲಿಗೆ ಹೋಗಿ ನಿಲ್ಲುತ್ತದೋ ಕಾಯ್ದುನೋಡಬೇಕಿದೆ.





## ಪಿ. ಹರಿಶ್ಚಂದ್ರ ರಾವ್ ಸಂಸ್ಮರಣೆ

ಪಿ. ರಾಮಚಂದ್ರ ರಾವ್ ಅವರ ಕುಟುಂಬದವರೇ ಆದ ಪಿ.ಹರಿಶ್ಚಂದ್ರ ರಾವ್ ನಿಧನರಾಗಿ 4 ವರ್ಷಗಳಾದುವು. ಟೆಲಿಕಾಂ ಇಲಾಖೆಯಲ್ಲಿ ಇಂಜಿನಿಯರ್ ಆಗಿ ನಿವೃತ್ತರಾಗಿದ್ದ ಪಿ.ಹರಿಶ್ಚಂದ್ರ ರಾವ್ ಟೆಲಿಕಾಮ್ ನೌಕರ ಸಂಘಟನೆಯನ್ನು ಮಂಗಳೂರಿನಲ್ಲಿ ಆರಂಭಿಸಿದ ಪ್ರಮುಖರಲ್ಲಿ ಒಬ್ಬರು. ಸಿಪಿಐ(ಎಂ) ಪಕ್ಷದ ಹಿತೈಷಿ ಹಾಗೂ ಸಮಾಜಪರ ಚಿಂತಕರಾಗಿದ್ದ ಅವರು ಪಕ್ಷದ ತರಗತಿಗಳನ್ನು ಹಿಂದೆ ನಡೆಸಿದ್ದವರು.

ಮಂಗಳೂರಿನ ಸಮಾನ ಮನಸ್ಕರು ಸಂಘಟನೆಯಿಂದ ಫೆಬ್ರವರಿ 18 ರಂದು ಪಿ.ಹರಿಶ್ಚಂದ್ರ ರಾವ್ ಸಂಸ್ಮರಣ ದಿನವನ್ನು ವಿಕಾಸದಲ್ಲಿ ಏರ್ಪಡಿಸಲಾಯಿತು. ಡಾ.ಕೃಷ್ಣಪ್ಪ ಕೊಂಚಾಡಿ, ಸುನಿಲ್ ಕುಮಾರ್ ಬಜಾಲ್ ಭಾಗವಹಿಸಿದವರನ್ನುದ್ದೇಶಿಸಿ ಮಾತನಾಡಿದರು.

## ಮಂಜನಾಡಿಯಲ್ಲಿ ನಿವೇಶನ ರಹಿತರಿಂದ ಪಂಚಾಯತ್ ಚಲೋ

ಉಳ್ಳಾಲ ವಲಯದ ಮಂಜನಾಡಿ ಗ್ರಾಮ ಪಂಚಾಯತ್ ಸಿದ್ಧಪಡಿಸಿರುವ ನಿವೇಶನ ರಹಿತರ ಪಟ್ಟಿಯಲ್ಲಿ ಬಹಳ ಕಾಲದಿಂದ ಮನೆ ನಿವೇಶನ ಇಲ್ಲದೇ ಇರುವ ಗ್ರಾಮಸ್ಥರ ಹೆಸರನ್ನು ಸೇರಿಸಿಲ್ಲವೆಂದು ಆಕ್ಷೇಪಿಸಿ ಈಗಿರುವ ನಿವೇಶನ ರಹಿತರ ಪಟ್ಟಿಯನ್ನು ಕೈಬಿಡಬೇಕೆಂದು ಆಗ್ರಹಿಸಿ ಫೆಬ್ರವರಿ 23 ರಂದು ಮಂಜನಾಡಿ ನಿವೇಶನ ರಹಿತರ ಸಮಿತಿಯಿಂದ ಪಂಚಾಯತ್ ಚಲೋ ನಡೆಸಿ ಪ್ರತಿಭಟನೆಯನ್ನು ನಡೆಸಲಾಯಿತು.

ಪ್ರತಿಭಟನೆಗೆ ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಜಯಂತ ನಾಯ್ಕ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಪದ್ಮಾವತಿ ಶೆಟ್ಟಿ, ಡಿವೈಎಫ್ಐ ಜಿಲ್ಲಾ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ನೇತೃತ್ವ ನೀಡಿದ್ದರು. ಡಿವೈಎಫ್ಐ ಕಾರ್ಯಕರ್ತರು ನಿವೇಶನ ರಹಿತರ ಜೊತೆಗೂಡಿ ಭಾಗವಹಿಸಿದ್ದರು.

# ತೀರ್ಪೊಂದು ಬರಬಹುದು–ದಾರಿ ಸರಳವಾಗುವುದೇ?

**ವಿಮಲ ಕೆ.ಎಸ್.**

**ಇಷ್ಟು ಹಿಂದುಳಿದ ಸ್ಥಿತಿಯಲ್ಲಿ ತಾನಿರುವುದೇ ತನ್ನ ಸಮುದಾಯದ ಮೇಲಿನ ದಬ್ಬಾಳಿಕೆಗೆ ಕಾರಣವೆಂಬುದನ್ನು ಅರಿತು ಮುಂದುವರೆಯಲು ಅಗತ್ಯ ಸಾಧನ ಶಿಕ್ಷಣವೆಂಬ ಸರಳ ಸತ್ಯಕ್ಕೆ ಮುಸ್ಲಿಂ ಸಮುದಾಯವೂ ತೆರೆದುಕೊಂಡಲ್ಲಿ ಪರಿಸ್ಥಿತಿ ಬದಲಾಗಬಹುದು. ಪುರುಷ ಪ್ರಧಾನ ಪಾಳೆಯಗಾರಿ ಮೌಲ್ಯಗಳು ಮೇಳೈಸಿರುವ ಧಾರ್ಮಿಕ ಮೂಲಭೂತವಾದ ನಮ್ಮ ಹಕ್ಕು, ಅಸ್ತಿತ್ವ, ಅಸ್ಮಿತೆಗಳನ್ನು ಹೊಸಕಿ ಹಾಕಲು ಒಂದಿಲ್ಲೊಂದು ಪ್ರಯತ್ನ ಮಾಡುವಾಗ ಅದಕ್ಕೆ ಸವಾಲೆಸೆಯಲು ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ ಅತ್ಯಗತ್ಯವೆಂದು ಅರ್ಥ ಮಾಡಿಕೊಳ್ಳಲಾಗಬೇಕು.**

ಕರ್ನಾಟಕದ ಉಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠ ಸಮವಸ್ತ್ರ–ಶಿರವಸ್ತ್ರಗಳಿಗೆ ಸಂಬಂಧಿಸಿದಂತೆ ಕಳೆದ ಕೆಲವು ದಿನಗಳಿಂದ ಪ್ರತಿನಿತ್ಯ ಕಲಾಪ ನಡೆಸಿ ತನ್ನ ಆದೇಶವನ್ನು ಕಾಯ್ದಿರಿಸಿದೆ. ಆದೇಶ ಏನೇ ಬರಲಿ ನ್ಯಾಯದ ದಾರಿಯ ನಡೆ ದೀರ್ಘವಾಗಿರುತ್ತದೆ. ಯಾಕೆಂದರೆ ಪ್ರಕರಣವೊಂದರ ಕುರಿತು ಎರಡು ಪಕ್ಷಗಳಿವೆ ಎಂದರೆ ಒಬ್ಬರಿಗೆ ಸಿಕ್ಕಿದ್ದು ನ್ಯಾಯವಾದರೆ ಮತ್ತೊಬ್ಬರಿಗೆ ಅದು ಹಾಗಾಗಲು ಸಾಧ್ಯವೇ ಇಲ್ಲ. ಕಾನೂನು, ನಿಯಮ ಪಾಲನೆಗಳ ಕಾರಣಕ್ಕೆ ತಲೆಬಾಗಬೇಕಾದರೂ ಅವರಿಗೆ ಅದು ನ್ಯಾಯ ಎನಿಸಲಾರದು.

ಹಿಜಾಬ್ ಎಂಬ ತಲೆವಸ್ತ್ರದ ಕಾರಣಕ್ಕೆ ಎದ್ದ ಅಥವಾ ಎಳಿಸಿದ ವಿವಾದ ಈಗ ಟರ್ಬನ್–ಸಿಖ್ ಸಮುದಾಯದ ಶಿರವಸ್ತ್ರದ ಮೇಲೂ ತನ್ನ ವಕ್ರದೃಷ್ಟಿಯನ್ನು ಬೀಳಿಸಿದೆ. ಸರ್ವಧರ್ಮ ಸಮಭಾವದ ಭಾರತವೆಂದರೆ ಇದೇನಾ?

ಬೆಂಗಳೂರು ನಗರದ 'ಪ್ರತಿಷ್ಠಿತ' ಖಾಸಗೀ ಕಾಲೇಜುಗಳಲ್ಲಿ ಕೂಡಾ ವಿವಾದ ಎಬ್ಬಿಸಲು ಪ್ರಯತ್ನಿಸಿದ ಘಟನೆಗಳೂ ನಡೆದವು. ಎಂದರೆ ಗಾಯ, ನ್ಯಾಯ ಪ್ರಕ್ರಿಯೆಯಲ್ಲಿ ಮಾಯವುದಿಲ್ಲ. ಮತ್ತು ಗಾಯಕ್ಕೆ ಮುಲಾಮು ಬಳಿಯುವ ಬದಲು ಕೆರೆಯುವವರ ಶಕ್ತಿ ಹೆಚ್ಚಾಗುತ್ತಿದೆ. ಇದರಿಂದ ಗಾಯ ವೃಣವಾಗಿ ಹರಿಯುವ ಕೀವು ದುರ್ವಾಸನೆ ಬೀರುತ್ತದೆ. ಅದರ ಪ್ರಭಾವದಿಂದ ಈಗಾಗಲೇ ಸುದ್ದಿಯಾಗದೇ ಬಿದ್ದು ಹೋದ ಹೆಣಗಳು ಮೂರಾದರೆ, ದೊಡ್ಡ ಸದ್ದು ಮಾಡುತ್ತಿರುವುದು ಶಿವಮೊಗ್ಗದ ಹರ್ಷ ಎಂಬ ಹಿಂದೂತ್ವ ವಾದದ ಹಿಂಸ್ರಕ ಸಿದ್ಧಾಂತದ ಅಮಲೇರಿಸಿಕೊಂಡ ಬಡ ಕುಟುಂಬದ ಹುಡುಗ. ನರಗುಂದದಲ್ಲಿ ಇರಿತಕ್ಕೆ ಒಳಗಾದ ನಿಷ್ಪಾಪ ಜೀವಿ, ಶಿವಮೊಗ್ಗದಲ್ಲಿಯೇ ಕೆಲವೇ ದಿನಗಳ ಹಿಂದೆ ಹತ್ಯೆಯಾದ ಇನ್ನಿಬ್ಬರು ಯುವಕರು ಅಲ್ಪಸಂಖ್ಯಾತ ಸಮುದಾಯದವರಾಗಿರುವುದರಿಂದ ಮತ್ತು ಆಡಳಿತಾರೂಢರಿಗೆ ಅದು ಮತ ಗಳಿಸಿಕೊಡಲಾರದ ಕಾರಣ ಅವರು ವಸ್ತುಶಃ ಬೀದಿಯ ಹೆಣಗಳಾಗಿ ಮಣ್ಣಾದರು. ಜನರ ನೆನಪು ಬಹಳ ಕ್ಷಣಿಕ, ಕೆರೆದರಷ್ಟೇ ನೆನಪು ಮೇಲೆ ಬರಬಹುದು. ಹಾಗಾಗಿಯೇ ಹರ್ಷನ ನೆನಪು ಕನಿಷ್ಠ ಪ್ರಜಾಪ್ರಭುತ್ವದ ಮಹಾಸಂಗ್ರಾಮದವರೆಗಾದರೂ ಇರಲೆಂಬಂತೆ ಈಗ ಆತ ಟೀ ಶರ್ಟಗಳ ಚಿತ್ರವಾಗಿ ರಾರಾಜಿಸುತ್ತಿದ್ದಾನೆ. ಇದು ಮಾರುಕಟ್ಟೆ ರಾಜಕಾರಣ. ಸಾಂಸ್ಕೃತಿಕ ರಾಜಕಾರಣದ ಜೊತೆ ಸೇರಿಕೊಳ್ಳುವ ಎಳಲು ಬಿಳಿಲುಗಳಿವು.

ಈ ತೆರನ ಅನಗತ್ಯ ವಿವಾದಗಳನ್ನೆಬ್ಬಿಸುವುದು ನಮ್ಮ ನೆಲಕ್ಕೆ ಹೊಸತಲ್ಲ, ಮತ್ತು ವಸ್ತ್ರದ ಹೆಸರಿನ ಈ ವಿವಾದವೂ ಹೊಸತಲ್ಲ. ಆದರೆ ಕೇಸರಿಶಾಲಿನ ರೀತಿ ಹಿಜಾಬ್ ಬೀದಿಗೆ ಇಳಿದಿರಲಿಲ್ಲ. ಈ ಬಾರಿಯ ರಾಜಕಾರಣ ಅದನ್ನೂ ಬೀದಿಗೆ ಇಳಿಸಿದೆ. ಇದನ್ನು ಸವಾಲೆಂದು ಉಲ್ಲೇಖಿಸಬಹುದಾದರೂ ಅದರ ಪರಿಣಾಮ ಮಹಿಳೆಯರ ನಿಜವಾದ ಸಮಾನತೆಯನ್ನು ಹಿಡಿತಕ್ಕೆ ತೆಗೆದುಕೊಳ್ಳುವುದು ಶತಃಸ್ಸಿದ್ಧ. ಜೊತೆ ಜೊತೆಗೇ ಪರೀಕ್ಷಾ ಸಮಯದಲ್ಲಿ ಈ ವಿವಾದವನ್ನೆತ್ತಿ ಒಂದೇ ಏಟಿಗೆ ಹತ್ತಾರು ಹಕ್ಕಿಗಳನ್ನು ಹೊಡೆದುರುಳಿಸಿದಂತಾಗಿದೆ. ನೂರಾರು ಜನ ವಿದ್ಯಾರ್ಥಿನಿಯರು ಶಾಲಾ/ಕಾಲೇಜುಗಳ ಪ್ರಾಂಗಣದಿಂದ ಹೊರದೂಡಲ್ಪಟ್ಟರು. ಪ್ರಾಯೋಗಿಕ ಪರೀಕ್ಷೆಗಳಿಂದ ವಂಚಿತರಾದರು. ಪ್ರಕರಣ ನ್ಯಾಯಾಲಯದಲ್ಲಿದೆ, ಅದರ ನಂತರ ಮರು ಪರೀಕ್ಷೆಯ ಅವಕಾಶವನ್ನಾದರೂ ಕಲ್ಪಿಸುವ ಜವಾಬ್ದಾರಿ ಸರಕಾರದ್ದಾಗಬೇಕಲ್ಲವೇ? ಅದಿಲ್ಲದಿದ್ದರೆ ಇಡೀ ವಿವಾದ ಸರಕಾರ ನಡೆಸುತ್ತಿರುವ ಪಕ್ಷ ಪ್ರಾಯೋಜಿತ ಎಂಬುದರಲ್ಲಿ ಎಳ್ಳಷ್ಟೂ ಸಂಶಯಗಳು ಉಳಿಯಲಾರದು.

**ಮುಸ್ಲಿಂ ಸಮುದಾಯದ ಮಹಿಳೆಯರ ಸ್ಥಿತಿ–ಗತಿ:**

2005 ರಲ್ಲಿ ಅಂದಿನ ಮನಮೋಹನ ಸಿಂಗ್ ನೇತೃತ್ವದ ಸರಕಾರ ಜಸ್ಟೀಸ್ ರಾಜೇಂದ್ರ ಸಾಚಾರ್ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ದೇಶದ ಮುಸ್ಲಿಂ ಸಮುದಾಯದ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿ–ಗತಿಗಳನ್ನು ಆಧ್ಯಯನ ಮಾಡಲು ರಚನೆ ಮಾಡಿತ್ತು. ಅದು 2001 ರ ಗಣತಿಯ ಆಧಾರದಲ್ಲಿ ಮುಂದಿಟ್ಟ ಅಧ್ಯಯನದ ವರದಿಗಿಂತ 2011 ರ ಗಣತಿಯಲ್ಲಿ ಕೂಡಾ ಹೆಚ್ಚೇನೂ ಬದಲಾವಣೆ ಆಗಿಲ್ಲದ ಕಾಲದಲ್ಲಿ ಅದರ ಜಾರಿಗೆ ಒತ್ತು ಕೊಡುವ ಅಗತ್ಯವಿದೆ.

ಸಾಚಾರ್ ವರದಿಯ ಅಂದಿನ ದಿನದ ಮಾಹಿತಿಯ ಪ್ರಕಾರ 20ರ ವಯೋಮಾನದ 7% ಮಕ್ಕಳು ಪದವಿ/ಡಿಪ್ಲೊಮಾ ಪಡೆದವರಿದ್ದರೆ ಮುಸ್ಲಿಂ ಸಮುದಾಯದಲ್ಲಿ 4% ಇದ್ದರು. ಅದೇ ಸಂದರ್ಭದಲ್ಲಿ ಇತರ ಅಲ್ಪ ಸಂಖ್ಯಾತ ಸಮುದಾಯಗಳು ಮುಸ್ಲಿಂ ಸಮುದಾಯಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಉತ್ತಮ ಸ್ಥಿತಿಯಲ್ಲಿದ್ದರು. ಹಾಗೆಯೇ ಸಾಚಾರ್ ವರದಿ ತಿಳಿಸಿದಂತೆ ಸರಕಾರಿ ಮತ್ತು ಸಾರ್ವಜನಿಕ ಹಾಗೂ ದೊಡ್ಡ ಖಾಸಗೀ ವಲಯದಲ್ಲಿ ಮುಸ್ಲಿಂರ ಪ್ರಮಾಣ ಕೂಡಾ ಕಡಿಮೆಯೇ ಇತ್ತು. ಹಿಂದೂಗಳ ಪ್ರಮಾಣ ಸರಕಾರೀ ವಲಯದಲ್ಲಿ 35.3% ಸಾರ್ವಜನಿಕ/ಖಾಸಗೀ ವಲಯದಲ್ಲಿ 13.9% ಇದ್ದರೆ ಮುಸ್ಲಿಂ ಸಮುದಾಯ 23.7% ಮತ್ತು 12.8% ಇತ್ತೆನ್ನುತ್ತದೆ ವರದಿ. ಮತ್ತು ಪದವೀಧರರಲ್ಲಿಯೂ ಇತರ ಸಾಮಾಜಿಕ ಧಾರ್ಮಿಕ ವಿಭಾಗಕ್ಕೆ ಹೋಲಿಸಿದರೆ ನಿರುದ್ಯೋಗ ಪ್ರಮಾಣದಲ್ಲಿ ಮುಸ್ಲಿಂ ಪದವೀಧರರ ಪ್ರಮಾಣ ಬಡವರು ಅಥವಾ ಬಡವರಲ್ಲದವರೂ ಸೇರಿ ಅಧಿಕವಾಗಿದೆ. ದುಡಿಮೆಯ ಕ್ಷೇತ್ರದಲ್ಲಿ ಕಡಿಮೆ ಪ್ರಮಾಣ ಕಾಣಿಸಲು ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಪ್ರಮಾಣ ಕಡಿಮೆ ಇರುವುದು ಎಂದು ವರದಿ ಗುರುತಿಸಿದೆ. ಬಹುತೇಕ ಮುಸ್ಲಿಂ ಮಹಿಳೆಯರು ಅಸಾಂಪ್ರದಾಯಿಕ, ಗೃಹಾಧಾರಿತ ಚಟುವಟಿಕೆಗಳಲ್ಲಿ ತೊಡಗುವುದು ಮತ್ತು ಅದಕ್ಕೆ ಸಿಗುವ ಕೂಲಿ/ಮಜೂರಿ ಅಥವಾ ಬೆಲೆ ತೀರಾ ಕಡಿಮೆ ಇರುವುದೂ ಕೂಡ ಅವರ ಆರ್ಥಿಕ ಸಾಮಾಜಿಕ ಮತ್ತಿತರ ಸ್ಥಿತಿಗತಿಗಳು ತೀರಾ ಕೆಳಮಟ್ಟದಲ್ಲಿ ಇರಲು ಕಾರಣ ಎನ್ನುವುದಕ್ಕೆ ಸಾಚಾರ್ ವರದಿಯಾಚೆಯೂ ದೃಷ್ಟಾಂತಗಳಿವೆ. ಇದರ ಜೊತೆಯೇ 30–11–2018 ರಲ್ಲಿ ಸಾಚಾರ್ ಸಮಿತಿಯ ಶಿಫಾರಸುಗಳ ಜಾರಿಯ ಸ್ಟೇಟಸ್ ರಿಪೋರ್ಟ್ (ಸ್ಥಿತಿ ಗತಿಗಳ ವರದಿ) ಕೂಡಾ ಬಹಳ ಸುಧಾರಣೆಗಳನ್ನು ಗುರುತಿಸಿಲ್ಲ. ಒಂದು ಉದಾಹರಣೆ, ಮುಸ್ಲಿಂ ಬಾಲಕಿಯರ ಶಿಕ್ಷಣದ ಅವಕಾಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಹೆಸರಿನ ವಸತಿ ಶಾಲೆಗಳನ್ನು ಎಸ್.ಸಿ.ಎಸ್.ಟಿ ಇತರ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವಿಭಾಗಗಳ ಬಾಲಕಿಯರಿಗಾಗಿ ತೆರೆಯುವ ಪ್ರಸ್ತಾಪ ಮಾಡಿತ್ತು. 2018 ರ ಸೆಪ್ಟೆಂಬರ್ 30 ರ ವೇಳೆಗೆ ಮುಸ್ಲಿಂ ಜನ ವಸತಿ ಹೆಚ್ಚಿರುವ 18 ರಾಜ್ಯಗಳ 88 ಜಿಲ್ಲೆಗಳಲ್ಲಿ ಅಂಥಹ 835 ಶಾಲೆಗಳನ್ನು ಮಂಜೂರು ಮಾಡಲಾಗಿತ್ತು. ಅದರಲ್ಲಿ 576 ಕೆಲಸ ಪ್ರಾರಂಭಿಸಿತ್ತಾದರೂ ಅಲ್ಲಿ ದಾಖಲಾದ ಮುಸ್ಲಿಂ ವಿದ್ಯಾರ್ಥಿನಿಯರು 21.21% ಮಾತ್ರ.



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಸಾಚಾರ್ ಸಮಿತಿಯು ಯು.ಜಿ.ಸಿ ಯು ಮುಸ್ಲಿಂ ಜನವಸತಿ ಹೆಚ್ಚಿರುವ ಕಡೆ ಮಹಿಳಾ ಕಾಲೇಜುಗಳು, ಹಾಸ್ಟೆಲ್ ಗಳು ಮತ್ತು ವಿಶ್ವವಿದ್ಯಾಲಯಗಳನ್ನು ತೆರೆಯಬೇಕೆಂದೂ ಶಿಫಾರಸು ಮಾಡಿತ್ತು. 2007–12 ರ ಅವಧಿಯಲ್ಲಿ 90 ಜಿಲ್ಲೆಗಳಲ್ಲಿ 285 ಹಾಸ್ಟೆಲ್ ಗಳನ್ನು ಮಂಜೂರು ಮಾಡಲಾಗಿತ್ತು. ಅಂತೆಯೇ 2016–17 ರಲ್ಲಿ ಮಂಜೂರಾದ 1172 ಹಾಸ್ಟೆಲ್ ಗಳಲ್ಲಿ 238 ಹಾಸ್ಟೆಲ್ ಗಳನ್ನು ಮುಸ್ಲಿಂ ಸಮುದಾಯದ ಜನವಸತಿ ಇರುವ ಪ್ರದೇಶಗಳಿಗೆ ಮಂಜೂರು ಮಾಡಲಾಗಿತ್ತು. 2017–18,18–19 ರಲ್ಲಿ ಒಂದೂ ಮಂಜೂರಾಗಲಿಲ್ಲ.

2007 ರಲ್ಲಿ ಸಮಾನ ಅವಕಾಶದ ಆಯೋಗ (ಈ.ಓ.ಸಿ)ವೊಂದನ್ನು ರಚಿಸಿ ಸುಧಾರಣೆಗೆ ಅಗತ್ಯವಾದ ಕ್ರಮಗಳನ್ನು ಸೂಚಿಸಲು ಪರಿಣಿತರ ಸಮಿತಿಯೊಂದನ್ನು ರಚಿಸಲಾಗಿತ್ತು. ಅದರ ಸಲಹೆಗಳನ್ನು ಜಾರಿ ಮಾಡಲು 2014 ರಲ್ಲಿ ಸಚಿವ ಸಂಪುಟ ಒಪ್ಪಿ ಇದನ್ನು ಸಂಸತ್ತಿನಲ್ಲಿ ಕಾನೂನೊಂದನ್ನು ತರಲು ಮಂಡಿಸುವ ಪ್ರಸ್ತಾಪವೂ ಇತ್ತಾದರೂ ಮೋದಿ ಸರಕಾರದ ಸಚಿವ ಸಂಪುಟದಿಂದ ಅದನ್ನು ಕೈ ಬಿಡಲಾಯಿತು.

ಇದೊಂದು ಮಾದರಿಯಾದರೆ ಇನ್ನೊಂದು. . 2007–08 ಮತ್ತು 2017–18 ರ ನ್ಯಾಷನಲ್ ಸ್ಯಾಂಪಲ್ ಸರ್ವೇ ಮತ್ತು 64 ಹಾಗೂ 75 ನೇ ಸುತ್ತಿನ ವರದಿಗಳು ಕೊಡುವ ಮಾಹಿತಿಗಳು ಹೀಗಿವೆ. ಅದರ ಪ್ರಕಾರ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 15 ಮತ್ತು ಮೇಲ್ಪಟ್ಟ ವಯೋಮಾನದ ಹಿಂದೂ, ಮುಸ್ಲಿಂ ಮತ್ತು ಇತರ ಮಹಿಳೆಯರ ಕುರಿತ ಅಂಕಿ ಅಂಶಗಳು ಸಿಗುತ್ತವೆ. ಕೆಲವು ಸಕಾರಾತ್ಮಕ ಅಂಶಗಳನ್ನು ಗುರುತಿಸುವಾಗ ಸಂತೋಷವೆನಿಸುತ್ತದೆ. ಆದರೆ ಒಂದು ವಸ್ತ್ರವಿವಾದವನ್ನು ಅಲ್ಪ ಮತ್ತು ಬಹು ಸಂಖ್ಯಾತ ಮಹಿಳಾ ವಿರೋಧೀ ಶಕ್ತಿಗಳು ತಮ್ಮ ಹತಕ್ಕೆ ಬಳಸಿಕೊಂಡಂತೆ ಮೇಲ್ನೋಟಕ್ಕೆ ಕಾಣುವ ವಿಷಯ ಆಳದಲ್ಲಿ ನಿಧಾನಕ್ಕೆ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿರುವ ಮುಸ್ಲಿಂ ಯುವತಿಯರನ್ನು ಹೊರ ದಬ್ಬುವ ಒಂದು ಸಂಚಾಗಿಯೂ ಗೋಚರಿಸುತ್ತಿದೆ. ಇಲ್ಲಿ ಮತ ರಾಜಕಾರಣ ಮತ್ತು ಲಿಂಗ ರಾಜಕಾರಣ ಎರಡೂ ಒಟ್ಟಿಗಿವೆ.

ಗುರುತಿಸಬಹುದಾದ ಕೆಲವು ಸಕಾರಾತ್ಮಕ ಅಂಶಗಳು–2007–08 ಮತ್ತು 2017–18ರ ಅವಧಿಯಲ್ಲಿ 15 ಮತ್ತು ಮೇಲಿನ ವಯೋಮಾನದ ಮಹಿಳೆಯರ ಸಾಕ್ಷರತೆಯ ಪ್ರಮಾಣದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಮೊದಲಿನ 40 ರಿಂದ 29ಕ್ಕೆ ಇಳಿದಿದೆ. ಮತ್ತು ನಗರ ಪ್ರದೇಶದ ಸಾಕ್ಷರತಾ ಪ್ರಮಾಣ 70 ರಿಂದ 77 ಕ್ಕೇ ಏರಿದೆ. ಇಷ್ಟಾಗಿಯೂ ಒಟ್ಟು ಅನಕ್ಷರ ಮಹಿಳಾ ಸಮೂಹದ ದೊಡ್ಡ ಭಾಗ ಮುಸ್ಲಿಂ ಮಹಿಳೆಯರಿದ್ದಾರೆ. ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ ಎಂಬುದೊಂದೇ ಸಮಾಧಾನ.

ಅದೇ ರೀತಿ ಮುಸ್ಲಿಂ ಹುಡುಗಿಯರು ಪ್ರೌಢಶಾಲೆ ಮತ್ತು ಪದವಿವರೆಗಿನ ವಿದ್ಯಾಭ್ಯಾಸದ ಪ್ರಮಾಣದಲ್ಲಿಯೂ ಈ ಮೊದಲಿನ 5 ರಿಂದ 8%ಗೆ ಏರಿದೆ. ಈ 3% ಏರಿಕೆಗೆ ನಗರ ಪ್ರದೇಶಗಳಲ್ಲಿ ದಾಖಲಾತಿಯ ಪ್ರಮಾಣ ಮೊದಲಿನ 7 ರಿಂದ 11 ಕ್ಕೆ ಏರಿದ್ದು ಕಾರಣವಾಗಿದೆ. ಕಾಲೇಜು ಶಿಕ್ಷಣ ಪದವಿ ಅಥವಾ ಉನ್ನತ ಪದವಿ ಮಟ್ಟದಲ್ಲಿ ಮಾತ್ರ ಈಗಲೂ ಮುಸ್ಲಿಂ ಮಹಿಳೆಯರಲ್ಲಿ ಕೇವಲ 5% ಮಾತ್ರ ಇರುವುದು ಎನ್ನುವುದು ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ. ಈ 5% ಕೂಡ ಕಳೆದ ಒಂದು ದಶಕದಲ್ಲಿ ದುಪ್ಪಟ್ಟಾದ ಪ್ರಮಾಣವೆಂಬುದು ಗಮನಿಸಬೇಕಾದ ಸಂಗತಿ. ಇಲ್ಲಿ ಕೂಡಾ ನಗರ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ. 8% ನಗರಗಳ ಮುಸ್ಲಿಂ ಮಹಿಳೆಯರು ಪದವಿ/ಉನ್ನತ ಪದವಿಗಳಿಗೆ ಹೋಗುತ್ತಿದ್ದಾರೆ. ಬಹುತೇಕ ಗ್ರಾಮೀಣ ಮುಸ್ಲಿಂ ಮಹಿಳೆಯರಿಗೆ ಉನ್ನತ ಶಿಕ್ಷಣ ಎಂಬುದು ಇಂದಿಗೂ ಮರೀಚಿಕೆಯೇ. ಎನ್.ಎಸ್.ಎಸ್.ಓ ದ ಒಂದು ವರದಿಯ ಪ್ರಕಾರ 3 ರಿಂದ 35 ರ ವಯೋಮಾನದ ಮುಸ್ಲಿಂ ಪುರುಷರಲ್ಲಿ 17% ಜನ ಯಾವತ್ತೂ ಶಾಲೆಗೆ ದಾಖಲಾತಿ ಪಡೆದವರೇ ಅಲ್ಲ. ಮತ್ತು ಮುಸ್ಲಿಂ ಮಹಿಳೆಯರಲ್ಲಿ ಈ ವಯೋಮಾನದ 21.9% ಶಾಲೆಯ ಮುಖ ನೋಡಿದವರಲ್ಲ. ಇದು ಎಸ್.ಸಿ,ಎಸ್.ಟಿ ಸಮುದಾಯಕ್ಕಿಂತ ಕಡಿಮೆ ಎಂಬುದು ದಾಖಲೆಯಲ್ಲಿ ಇರುವ ಸಂಗತಿ.

**ಭಯೋತ್ಪಾದನೆಗೆ ದಂಡನೆ ಸಿಗಬೇಕು**

ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ತನ್ನ ದೇಶದಲ್ಲಿ ಸಮಾನ ಅಭಿವೃದ್ಧಿ, ಮತ್ತು ಸಮತೋಲಿತ ಜೀವನ ವಿಧಾನ ಬರಬೇಕೆಂದರೆ ಎಲ್ಲಿ ಕೊರತೆ ಇದೆಯೋ ಅದನ್ನು ತುಂಬಲು ಪ್ರಯತ್ನ ಪಡಬೇಕು. ಆದರೆ ಇಲ್ಲಿ ನಮ್ಮ ದೇಶದಲ್ಲಿ ಒಡೆದಾಳುವುದೇ ಧರ್ಮ ಎಂಬ ಭಾವನೆ ಕಾಣುತ್ತಿದೆ.

ಇಂತಿಪ್ಪ ಸಂದರ್ಭದಲ್ಲಿ ತೀರಾ ಕ್ಷುಲ್ಲಕ ತಲೆವಸ್ತ್ರದ ವಿಷಯವನ್ನಿಟ್ಟುಕೊಂಡು ಪರೀಕ್ಷೆಗಳು ಸಮೀಪಿಸುತ್ತಿರುವಾಗ ಎತ್ತಿದ ಕ್ಯಾತೆಗೆ ರಾಜಕೀಯ ಉದ್ದೇಶಗಳಿಲ್ಲವೆಂದು ಭಾವಿಸಲಾಗುತ್ತದೆಯೇ?

ಇನ್ನೊಂದು ಪ್ರಶ್ನೆ ತಮ್ಮ ಶಿರವಸ್ತ್ರದ ಹಕ್ಕನ್ನು ಉಳಿಸಿಕೊಳ್ಳಲು ವಿದ್ಯಾರ್ಥಿನಿಯರು ಕೋರ್ಟಿನ ಮೆಟ್ಟಿಲೇರಿದರು. ಚರ್ಚೆ ನಡೆಯಿತು. ಕೆಲವರು ಅದು ಅಗತ್ಯ ಧಾರ್ಮಿಕ ಹಕ್ಕೆಂದು, ಇನ್ನು ಕೆಲವರು ಸಮವಸ್ತ್ರದ ಭಾಗವಾಗಿಯೇ ಹಿಜಾಬ್ ಎಂದೂ, ಕೆಲವರು ಸಮವಸ್ತ್ರ ಕಡ್ಡಾಯ ಎಂಬುದು ಕರ್ನಾಟಕ ಶಿಕ್ಷಣ ಕಾಯ್ದೆಯಲ್ಲೇ ಇಲ್ಲ ಎಂದೂ ಇದೆಲ್ಲದರ ಆಚೆ ಮಹಿಳೆಯರ ಸಮಾನ ಹಕ್ಕು ಸಮಾನ ಅಧಿಕಾರವನ್ನು ಪ್ರತಿಪಾದಿಸುವ ಮಹಿಳಾ ಧ್ವನಿಯಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮಹಿಳೆಯರ ಶಿಕ್ಷಣದ ಹಕ್ಕು ಮತ್ತು ಆಯ್ಕೆಯ ಸ್ವಾತಂತ್ರ್ಯವನ್ನು, ಹಾಗೂ ಘನತೆಯ ಬದುಕಿನ ಅಧಿಕಾರವನ್ನು ಎತ್ತಿ ಹಿಡಿಯಬೇಕೆನ್ನುವ ವಾದವಿಟ್ಟು ಹೈ ಕೋರ್ಟಿಗೆ ಅಹವಾಲು ಸಲ್ಲಿಸಿಲಾಗಿತ್ತು. ಕೋರ್ಟು ಸಾರ್ವಜನಿಕ ಹಿತಾಸಕ್ತಿಗಳ ಅರ್ಜಿಗೆ ಹೆಚ್ಚು ಉತ್ತೇಜನ ಕೊಡದೇ ವ್ಯಕ್ತಿಗಳಾಗಿ ತಮ್ಮ ದೂರು ಸಲ್ಲಿಸಿದವರ ವಾದವನ್ನು ಆಲಿಸಿತು. ಹಾಗೆ ಆಲಿಸುವಾಗ ಬಂದ ಕೋರಿಕೆಯ ಮೇರೆಗೆ ಮಧ್ಯಂತರ ಆದೇಶವೊಂದನ್ನು ನೀಡಿತು. ಅದರಲ್ಲಿ ಜಾತ್ಯಾತೀತ ತತ್ವವನ್ನು ಪಾಲಿಸುವ ದೇಶದಲ್ಲಿ ಧಾರ್ಮಿಕ ಹಕ್ಕುಗಳಿಗೂ ಅವಕಾಶವಿದೆಯಾದರೂ ತನ್ನ ಹಕ್ಕು ಸಾಧಿಸುವ ನೆಲೆಯಲ್ಲಿ ಯಾವುದೇ ವ್ಯಕ್ತಿಯು ಸಾರ್ವಜನಿಕ ಸುವ್ಯವಸ್ಥೆ ಮತ್ತು ಶಾಂತಿಗೆ ಭಂಗ ತರಲಾಗದು. ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ವಿದ್ಯಾರ್ಥಿಗಳು ಧಾರ್ಮಿಕ ಸಂಕೇತಗಳಾದ ಶಾಲು(ಭಗವಾ) ಸ್ಕಾರ್ಫ, ಹಿಜಾಬ್ ಧಾರ್ಮಿಕ ಬಾವುಟಗಳು ಮುಂತಾಗಿ ಏನನ್ನೂ ತರಗತಿಯೊಳಗೆ ಮುಂದಿನ ಆದೇಶ ಬರುವವರೆಗೆ ತರುವಂತಿಲ್ಲ. ಇದೇ ವೇಳೆಗೆ ಈ ಆದೇಶವು ಕಾಲೇಜು ಅಭಿವೃದ್ಧಿ ಮಂಡಳಿಯು ಸಮವಸ್ತ್ರ ಅಥವಾ ವಸ್ತ್ರ ಸಂಹಿತೆಯನ್ನು ನಿಗದಿ ಪಡಿಸಿದ ಸಂಸ್ಥೆಗಳಿಗೆ ಇದು ಅನ್ವಯಿಸುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ ಎಂದು ಮಧ್ಯಂತರ ಆದೇಶದಲ್ಲಿ ಹೇಳಲಾಯಿತು. ಆದರೆ ಇದನ್ನು ತಮಗೆ ಬೇಕಾದ ಹಾಗೆ ಅರ್ಥೈಸಿಕೊಂಡು

ಪುಟ 10 ನೋಡಿ



# ರಾಜ್ಯಪಾಲರ ನೇಮಕ ಮತ್ತು ಪಾತ್ರದಲ್ಲಿ ಸುಧಾರಣೆ

* ಪ್ರಕಾಶ್ ಕಾರಟ್





ರಾಜ್ಯಪಾಲರ ನೇಮಕ ಅಥವಾ ಅವರನ್ನು ವಾಪಸ್ ಕರೆಸಿಕೊಳ್ಳುವ ವಿಚಾರದಲ್ಲಿ ರಾಜ್ಯಗಳಿಗೆ ಅಧಿಕಾರ ನೀಡುವ ದಿಸೆಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂದು ಸಲಹೆ ಮಾಡಿ ಕೇರಳ ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದೆ. ಕೇಂದ್ರ–ರಾಜ್ಯ ಸಂಬಂಧಗಳ ಸುಧಾರಣೆ ಕುರಿತು ಜಸ್ಟಿಸ್ ಪುಂಛಿ ಆಯೋಗ ಸಲ್ಲಿಸಿದ್ದ ಶಿಫಾರಸುಗಳಿಗೆ ಪ್ರತಿಕ್ರಿಯೆಯಾಗಿ ಕೇರಳದ ಎಲ್‌ಡಿಎಫ್ ಸರಕಾರ ಈ ಪತ್ರ ಬರೆದಿದೆ.  ಕೇರಳ ತಳೆದಿರುವ ನಿಲುವು ಈಗ ಕೇಂದ್ರ ಸರಕಾರದಿಂದ ನೇಮಕವಾಗಿ ಅದರ ಏಜೆಂಟರಂತೆ ವರ್ತಿಸುವ ರಾಜ್ಯಪಾಲರ ಪಾತ್ರದಲ್ಲಿ ಬದಲಾವಣೆ ಆಗಬೇಕೆಂಬ ದೀರ್ಘ ಕಾಲದ ಅಗತ್ಯವನ್ನು ಪ್ರತಿಬಿಂಬಿಸುತ್ತದೆ.

ರಾಜ್ಯಪಾಲರನ್ನು ವಾಪಸ್ ಕರೆಸಲು ಶಿಫಾರಸು ಮಾಡುವ ಅಧಿಕಾರವನ್ನು ರಾಜ್ಯ ಶಾಸನಸಭೆಗಳಿಗೆ ನೀಡುವ ನಿಟ್ಟಿನಲ್ಲಿ ಸಂವಿಧಾನದ 156ನೇ ಕಲಮಿಗೆ ತಿದ್ದುಪಡಿ ಮಾಡುವಂತೆಯೂ ಕೇರಳ ಸರ್ಕಾರ ಆಗ್ರಹಿಸಿದೆ. ರಾಜ್ಯಪಾಲರು ಸಾಂವಿಧಾನಿಕ ಹಾಗೂ ಶಾಸನಾತ್ಮಕ ಕಾರ್ಯಗಳನ್ನು ಉಲ್ಲಂಘಿಸುವುದು ಕಂಡು ಬಂದಲ್ಲಿ  ಅವರನ್ನು ವಾಪಸ್ ಕರೆಸಲು ರಾಜ್ಯಗಳಿಗೆ ಅಧಿಕಾರವಿರಬೇಕೆಂಬುದು ಕೇರಳದ ನಿಲುವಾಗಿದೆ.

ಇತ್ತೀಚಿನ ವರ್ಷಗಳಲ್ಲಿ, 2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಅಗತ್ಯಗಳಿಗೆ ಅಡಿಯಾಳಾಗಿ ಕಾರ್ಯನಿರ್ವಹಿಸುವಂಥ ರಾಜ್ಯಪಾಲರನ್ನೇ ನಾಚಿಕೆಯಿಲ್ಲದೆ 'ನೇಮಕ ಮಾಡಲಾಗುತ್ತಿದೆ. ಕೆಲವು ರಾಜ್ಯಪಾಲರಂತೂ ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದವರಾಗಿದ್ದರೆ,ಇನ್ನು ಹಲವರು ಆಳುವ ಪಕ್ಷದೊಂದಿಗೆ ಒಳ್ಳೆಯವರಾಗಿರಲು ಇನ್ನೂ ಹೆಚ್ಚಾಗಿಯೇ ಕೇಂದ್ರದ ಆಜ್ಞಾಪಾಲಕರಾಗಿರುವಂಥವರು.

ಕೇರಳದ ರಾಜ್ಯಪಾಲ ಅರಿಫ್ ಮಹಮದ್ ಖಾನ್ ಸಂವಿಧಾನದ ನಿಯಮಗಳಿಗೆ ಅನುಗುಣವಾಗಿರದ ಅತಿರೇಕದ ನಿಲುವುಗಳನ್ನು ತಳೆಯುತ್ತಿದ್ದಾರೆ. ರಾಜ್ಯದ ಪ್ರಸಕ್ತ ಬಜೆಟ್ ಅಧಿವೇಶನದ ಆರಂಭದ ಸಂದರ್ಭದಲ್ಲಿ, ವಿಧಾನಸಭೆಯಲ್ಲಿ ಮಾಡುವ ಭಾಷಣಕ್ಕೆ ಸಹಿ ಹಾಕಲು ನಿರಾಕರಿಸಿದ್ದರು. ಕೊನೆ ಕ್ಷಣದಲ್ಲಿ ಅವರು ಅದಕ್ಕೆ ಒಪ್ಪಿ ರಾಜ್ಯಪಾಲರ ಕರ್ತವ್ಯದಂತೆ ಪೂರ್ಣ ಭಾಷಣವನ್ನು ಓದಿದರು. ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕ ವಿಚಾರದಲ್ಲಿ ಕೂಡ ರಾಜ್ಯಪಾಲ ಖಾನ್ ಪಾತ್ರ ವಿವಾದಾತ್ಮಕವಾಗಿದೆ. ಕಣ್ಣೂರು ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸಹಿ ಹಾಕಿದ ನಂತರ ಕೆಲವು ತಪ್ಪು ಅಭಿಪ್ರಾಯ ಬರುವಂಥ  ಹೇಳಿಕೆಗಳನ್ನು ಅವರು ನೀಡಿದ್ದರು. ಕೇರಳ ಹೈಕೋರ್ಟ್ ಈ ವಿಚಾರದಲ್ಲಿನ ಎಲ್ಲ ಸಂಶಯಗಳನ್ನು ನಿವಾರಿಸಿದೆ.

ಬಿಜೆಪಿಯೇತರ ಆಡಳಿತವಿರುವ ಇತರ ರಾಜ್ಯಗಳಲ್ಲಿ ಕೂಡ ರಾಜ್ಯಪಾಲರು ನಿರ್ಲಜ್ಜವಾಗಿ ನಡೆದುಕೊಳ್ಳುತ್ತಿದ್ದಾರೆ.  ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆ. ಬಂಗಾಳ ರಾಜ್ಯಪಾಲ ಜಗದೀಪ್ ಧನ್‌ಕರ್ ಅವರಂತೂ ಆಗಾಗ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ವಿರುದ್ಧ ಟ್ವೀಟ್ ಮಾಡುತ್ತಿರುತ್ತಾರೆ. ಚುನಾಯಿತ ರಾಜ್ಯ ಸರ್ಕಾರವನ್ನು ಧಿಕ್ಕರಿಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆನ್ನುವುದು ಅವರ ಬಯಕೆಯಾಗಿದೆ.

ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ರಾಜ್ಯ ವಿಧಾನ ಪರಿಷತ್‌ನ 12 ಸದಸ್ಯರ ನಾಮಕರಣ ಕುರಿತ ರಾಜ್ಯ ಸಕಾರದ ಶಿಫಾರಸನ್ನು ಇನ್ನೂ ಹಾಗೇ ಇಟ್ಟುಕೊಂಡಿದ್ದಾರೆ. ಕುಲಾಧಿಪತಿ ಎಂಬ ನೆಲೆಯಲ್ಲಿ ಕುಲಪತಿಗಳೊಂದಿಗೆ ನೇರವಾಗಿ ವ್ಯವಹರಿಸಲು ಅವರು ಮುಂದಾಗುತ್ತಾರೆ.

ರಾಜ್ಯಪಾಲರ ಈ ರೀತಿಯ ಹಸ್ತಕ್ಷೇಪದಿಂದ ರೋಸಿ ಹೋದ ಮಹಾರಾಷ್ಟ್ರ ಸರ್ಕಾರ 2021 ಡಿಸೆಂಬರ್‌ನಲ್ಲಿ ಮಹಾರಾಷ್ಟ್ರ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕಾನೂನಿಗೆ ತಿದ್ದುಪಡಿ ತಂದಿದೆ. ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಸಚಿವರನ್ನು ಪ್ರೊ–ಚಾನ್ಸಲರ್ ಆಗಿ ನೇಮಿಸಲು ಹಾಗೂ ಕುಲಪತಿಗಳ ನೇಮಕ ಪ್ರಕ್ರಿಯೆಯಲ್ಲಿ ಬದಲಾವಣೆಗಳನ್ನು ತರಲು ಈ ತಿದ್ದುಪಡಿ ಅವಕಾಶ ಕಲ್ಪಿಸುತ್ತದೆ. ರಾಜ್ಯ ಸರ್ಕಾರ ಸೂಚಿಸುವ ಎರಡು ಹೆಸರುಗಳಲ್ಲಿ ಒಂದನ್ನು 30 ದಿನದೊಳಗೆ ಆಯ್ಕೆ ಮಾಡುವುದಷ್ಟಕ್ಕೆ ರಾಜ್ಯಪಾಲರ ಪಾತ್ರವನ್ನು ಈ ತಿದ್ದುಪಡಿ ಸೀಮಿತಗೊಳಿಸುತ್ತದೆ.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಕೂಡ ವಿವಿಗಳ ಕುಲಪತಿಗಳೊಂದಿಗೆ ನೇರವಾಗಿ ವ್ಯವಹರಿಸ ಬಯಸುತ್ತಾರೆ. ವಿಧಾನಸಭೆ ಒಕ್ಕೊರಲಿನಿಂದ ಅಂಗೀಕರಿಸಿದ್ದ ನೀಟ್ ಕುರಿತ ಕಾನೂನನ್ನು ಅವರು ಸರ್ಕಾರಕ್ಕೆ ವಾಪಸ್ ಕಳಿಸಿದ್ದಾರೆ.

ನಿರ್ದಿಷ್ಟ ರಾಜ್ಯಪಾಲರು ಯಾವುದಾದರೊಂದು ವಿಚಾರದಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದಾರೆ ಎನ್ನುವುದು ಇಲ್ಲಿ ಅಡಕವಾಗಿರುವ ಪ್ರಶ್ನೆಯಲ್ಲ. ಇಲ್ಲಿ ತುಂಬಾ ಆಳವಾದ ಒಳಬೇನೆ ಇದೆ. ಪ್ರಸಕ್ತ ಸಂವಿಧಾನಿಕ ಅಂಶದ ಪ್ರಕಾರ ರಾಜ್ಯಪಾಲರು ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿರುತ್ತಾರೆ. ಇದು ರಾಜ್ಯಪಾಲರು ಕೇಂದ್ರದ ಪ್ರತಿನಿಧಿಯಷ್ಟೇ ಆಗಿರುವದನ್ನು ಅನಿವಾರ್ಯಗೊಳಿಸುತ್ತದೆ.

ರಾಜ್ಯಪಾಲರ ನೇಮಕದ ಅಧಿಕಾರ ಕೇಂದ್ರ ಸರ್ಕಾರದ ಕೈಯಲ್ಲಿ ಇರುವ ತನಕ ಸಾರ್ವಜನಿಕ ಸೇವೆಯಲ್ಲಿರುವ ಪ್ರಮುಖರು ಅಥವಾ ರಾಜಕೀಯೇತರ ವ್ಯಕ್ತಿಗಳು ರಾಜ್ಯಪಾಲರಾಗಿರಬೇಕೆಂಬ ಅನೇಕ ಪ್ರಸ್ತಾಪನೆಗಳಿಗೆ ಅರ್ಥವೇ ಇಲ್ಲದಂತಾಗುತ್ತದೆ. ನಿಜ ಹೇಳಬೇಕೆಂದರೆ, ರಾಜ್ಯಪಾಲರಾಗಿ ನೇಮಕಗೊಂಡ ನಿವೃತ್ತ ಅಧಿಕಾರಿಗಳಂಥ ರಾಜಕೀಯೇತರ ವ್ಯಕ್ತಿಗಳು ಇನ್ನೂ ಕೆಟ್ಟದಾಗಿ ವರ್ತಿಸಿರುವುದು ಅನುಭವದಿಂದ ಗೊತ್ತಾಗಿದೆ. ಏಕೆಂದರೆ ಅವರು ತನ್ನ ಹುದ್ದೆಗಾಗಿ ಕೇಂದ್ರ ಸರಕಾರಕ್ಕೆ ಋಣಿಯಾಗಿರುತ್ತಾರೆ.

ಆದ್ದರಿಂದಲೇ 1983ರಲ್ಲಿ ಶ್ರೀನಗರದಲ್ಲಿ ನಡೆದ ಕೇಂದ್ರ–ರಾಜ್ಯ ಸಂಬಂಧ ಕುರಿತ ಪ್ರತಿಪಕ್ಷಗಳ ಸಮಾವೇಶ, ಸಂಬಂಧಪಟ್ಟ ರಾಜ್ಯಗಳು ಶಿಫಾರಸು ಮಾಡಿದ ಪಟ್ಟಿಯ ಆಧಾರದಲ್ಲಿ ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಿಸಬೇಕೆಂದು ಸಲಹೆ ಮಾಡಿತ್ತು.

ಜಸ್ಟಿಸ್ ಸರ್ಕಾರಿಯಾ ಮತ್ತು ಪುಂಛಿ ಆಯೋಗಕ್ಕೆ ಸಿಪಿಐ (ಎಂ) ಇದೇ ರೀತಿಯ ಪ್ರಸ್ತಾವನೆಗಳನ್ನು ಸಲ್ಲಿಸಿದೆ. “ಕೇಂದ್ರ–ರಾಜ್ಯ ಸಂಬಂಧ ಪುನಾರಚನೆ ಕುರಿತ ನಿಲುವು ಪ್ರಬಂಧ' ಎಂಬ ಒಂದು ಸಮಗ್ರ ಪ್ರಬಂಧವನ್ನು 2008ರ ಅಕ್ಟೋಬರ್‌ನಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಅಂಗೀಕರಿಸಿತ್ತು. “ರಾಜ್ಯಗಳಿಗೆ ಕೇಂದ್ರದಿಂದ ನೇಮಕಗೊಳ್ಳುವ ರಾಜ್ಯಪಾಲರಿರುವುದು ಒಂದು ಆಭಾಸವಾಗಿದೆ. ಇದು ಒಕ್ಕೂಟ ಜನತಾಂತ್ರಿಕ ರಾಜಕೀಯ ವ್ಯವಸ್ಥೆಗೆ ಅನುಗುಣವಾಗಿಲ್ಲ. ರಾಜ್ಯಪಾಲರ ಹುದ್ದೆಯನ್ನು ಮುಂದುವರಿಸಲೇಬೇಕು ಎಂದಾದರೆ ಆಗ ಸರ್ಕಾರಿಯಾ ಆಯೋಗ ಸೂಚಿಸಿದ ಮಾನದಂಡಕ್ಕೆ ಅನುಗುಣವಾಗಿ ಆಯಾ ರಾಜ್ಯದ ಮುಖ್ಯಮಂತ್ರಿ ಶಿಫಾರಸು ಮಾಡುವ ಮೂರು ಪ್ರಮುಖ ವ್ಯಕ್ತಿಗಳ ಪಟ್ಟಿಯಿಂದ ಒಬ್ಬರನ್ನು ಆಯ್ಕೆ ಮಾಡಬೇಕು' ಎಂದು ಅದರಲ್ಲಿ ಸಿಪಿಐ (ಎಂ) ಹೇಳಿತ್ತು.

ಕೇಂದ್ರದಲ್ಲಿ ಈಗ ಆಡಳಿತ ನಡೆಸುತ್ತಿರುವವರು ರಾಜ್ಯಪಾಲರ ನೇಮಕ ಹಾಗೂ ಈ ಸಾಂವಿಧಾನಿಕ ಅಧಿಕಾರಿಯ ಕಾರ್ಯ ನಿರ್ವಹಣೆಯ ವಿಚಾರದಲ್ಲಿ ಯಾವುದೇ ಸುಧಾರಣೆ ತರುವ ಸಾಧ್ಯತೆಯೇ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಮಾಡಬಹುದಾದ್ದೆಂದರೆ, ಪ್ರತಿಪಕ್ಷ ಆಡಳಿತದ ರಾಜ್ಯಗಳು, ಚುನಾಯಿತ ರಾಜ್ಯ ಸರ್ಕಾರ ಮತ್ತು ಶಾಸನಸಭೆಗಳ ಅಧಿಕಾರಗಳ ಮೇಲೆ ಆಕ್ರಮಣ ನಡೆಯುವುದನ್ನು ತಡೆಯಲು ಎಚ್ಚರದಿಂದಿರುವುದು. ಅದರೊಂದಿಗೆ, ರಾಜ್ಯಪಾಲರು ತಮಗೆ ವಿಧಿಸಿರುವ ನಿಯಮಾವಳಿಗಳನ್ನು ಮೀರಿ ಹೋಗದಂತೆ ಖಾತ್ರಿಪಡಿಸಲು ರಾಜ್ಯ ಶಾಸನಸಭೆಗಳು ಅಗತ್ಯವಿದ್ದರೆ, ವಿವಿಗಳ ಕಾನೂನಿನಂಥ ಕಾನೂನುಗಳನ್ನು ತಿದ್ದುಪಡಿ ಮಾಡಬಹುದು.

**ಪ್ರಸಕ್ತ ಸಂವಿಧಾನಿಕ ಅಂಶದ ಪ್ರಕಾರ ರಾಜ್ಯಪಾಲರು ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿರುತ್ತಾರೆ. ಸಿಪಿಐ(ಎಂ) 2008ರಲ್ಲೇ ಹೇಳಿರುವಂತೆ ರಾಜ್ಯಗಳಿಗೆ ಕೇಂದ್ರದಿಂದ ನೇಮಕಗೊಳ್ಳುವ ರಾಜ್ಯಪಾಲರಿರುವುದು ಒಕ್ಕೂಟ ಜನತಾಂತ್ರಿಕ ರಾಜಕೀಯ ವ್ಯವಸ್ಥೆಗೆ ಅನುಗುಣವಾಗಿಲ್ಲ. ರಾಜ್ಯಪಾಲರ ಹುದ್ದೆಯನ್ನು ಮುಂದುವರಿಸಲೇಬೇಕು ಎಂದಾದರೆ ಆಗ ಸರ್ಕಾರಿಯಾ ಆಯೋಗ ಸೂಚಿಸಿದ ಮಾನದಂಡಕ್ಕೆ ಅನುಗುಣವಾಗಿ ಆಯಾ ರಾಜ್ಯದ ಮುಖ್ಯಮಂತ್ರಿ ಶಿಫಾರಸು ಮಾಡುವ ಮೂರು ಪ್ರಮುಖ ವ್ಯಕ್ತಿಗಳ ಪಟ್ಟಿಯಿಂದ ಒಬ್ಬರನ್ನು ಆಯ್ಕೆ ಮಾಡಬೇಕು. ಆದರೆ ಇಂತಹ ಸುಧಾರಣೆಗಳನ್ನು ಈಗ ಕೇಂದ್ರದಲ್ಲಿ ಅಧಿಕಾರ ನಡೆಸುವವರಿಂದಂತೂ ನಿರೀಕ್ಷಿಸಲು ಸಾಧ್ಯವಿಲ್ಲ. ಪ್ರತಿಪಕ್ಷ ಆಡಳಿತದ ರಾಜ್ಯಗಳು, ಚುನಾಯಿತ ರಾಜ್ಯ ಸರ್ಕಾರ ಮತ್ತು ಶಾಸನಸಭೆಗಳ ಅಧಿಕಾರಗಳ ಮೇಲೆ ಆಕ್ರಮಣ ನಡೆಯುವುದನ್ನು ತಡೆಯಲು ಎಚ್ಚರದಿಂದಿರುವುದು.**

**ಅನು: ವಿಶ್ವ**

# ಭೂಹೀನರಿಗೆ ಕೃಷಿ ಭೂಮಿ ಹಂಚಬೇಕು, ಚಿನ್ನದ ಗಣಿ ಪುನರಾರಂಭಿಸಬೇಕು: ಬಯ್ಯಾರೆಡ್ಡಿ




**ಫೆಬ್ರವರಿ 23, 2022 ರಂದು ಜನಪರ ವೇದಿಕೆ, ಕೋಲಾರ ಸಂಘಟಿಸಿದ್ದ "ಕೋಲಾರ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜನಾಗ್ರಹ ಸಮಾವೇಶ"ದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಅವರು ಮಾಡಿದ ಉದ್ಘಾಟನಾ ಭಾಷಣದ ಪ್ರಮುಖ ಭಾಗಗಳು ಇಲ್ಲಿವೆ.**

ದೇಶಕ್ಕೆ 'ಸ್ವಾತಂತ್ರ್ಯ' ಸಮೀಪಿಸುತ್ತಿದೆ ಎನ್ನುವ ಕಾಲಘಟ್ಟದಲ್ಲಿ ದೇಶದ ದೊಡ್ಡ ಕೈಗಾರಿಕೊದ್ದಿಮೆಗಳಾದ ಜೆ.ಆರ್.ಡಿ. ಟಾಟಾ, ಜಿ.ಡಿ. ಬಿರ್ಲಾ, ಮತ್ತಿತರರು ಸೇರಿ 1944 ರಲ್ಲಿ 'ದೇಶದ ಅಭಿವೃದ್ಧಿ'ಗಾಗಿ 'ಬಾಂಬೇ ಪ್ಲಾನ್'ನ್ನು ರೂಪಿಸಿದ್ದರು. ಈ 'ಬಾಂಬೇ ಪ್ಲಾನ್' ಅಭಿವೃದ್ಧಿಯ ಬಗ್ಗೆ ವ್ಯಾಪಕ, ವಿಶೇಷವಾದ ಚರ್ಚೆಯನ್ನು ರಾಷ್ಟ್ರವ್ಯಾಪಿ ನಡೆಸಲು ಅವಕಾಶವನ್ನು ಉಂಟು ಮಾಡಿತ್ತು. ಆ ನಂತರದ ವರ್ಷಗಳಲ್ಲಿ ಕಮ್ಯುನಿಷ್ಟ ಸೋವಿಯತ್ ರಷ್ಯದ ಪ್ರಭಾವದಿಂದ ಸ್ವಾತಂತ್ರ್ಯ ಭಾರತದಲ್ಲಿ "ಪಂಚ ವಾರ್ಷಿಕ ಯೋಜನೆ"ಗಳನ್ನು ರೂಪಿಸಲಾಯಿತು. ಕೇರಳದಂತಹ ರಾಜ್ಯದಲ್ಲಿ ಇ.ಎಂ.ಎಸ್. ನಂಬೂದರಿಪಾಡ್‌ರವರು ನಿರ್ದಿಷ್ಟವಾಗಿ "ಕೇರಳ ಅಭಿವೃದ್ಧಿ'ಯ ಬಗ್ಗೆ ಸಾಕಷ್ಟು ಕೆಲಸವನ್ನು ಮಾಡಿದರು. ಇಂತಹ ಅನೇಕ ಪ್ರಯತ್ನಗಳ ಫಲವಾಗಿ ಕೇರಳ ರಾಜ್ಯ "ಅಭಿವೃದ್ಧಿ" ಹಲವು ಅಂಶಗಳಲ್ಲಿ ದೇಶದಲ್ಲೀಯೇ ಅಗ್ರಮಾನ್ಯ ಸ್ಥಾನವನ್ನು ಪಡೆದಿದೆ.

ಇಂತಹ ಹುಡುಕಾಟ, ಚಿಂತನೆಗಳ ಫಲವಾಗಿಯೇ ಈ "ಸಮಾವೇಶ" ನಡೆಯುತ್ತಿದೆ ಎಂದು ಭಾವಿಸಿದೇನೆ. ಇದು ಆರಂಭ ಮಾತ್ರ, ಅಭಿವೃದ್ಧಿಯ ಅಂಶಗಳು, ಈ ಕಣ್ಣೋಟವನ್ನು ಜನರತ್ತ ಕೊಂಡುಯ್ಯುವುದು "ಜನಶಕ್ತಿ"ಯನ್ನು ಸಮೀಕರಿಸುವುದು ನಿರಂತರವಾಗಿ ಸಾಗಬೇಕಿದೆ. ಇಂತಹ ಪ್ರಮಾಣಿಕ ಪ್ರಯತ್ನಗಳಿಗೆ ಈ ಜಿಲ್ಲೆಯ ಪ್ರಜ್ಞಾವಂತ ಜನತೆ ದೃಢವಾದ ಬೆಂಬಲವನ್ನು ನೀಡುತ್ತಾರೆಂಬ ವಿಶ್ವಾಸವಿದೆ.

'ಜಗತ್ತೆ ಒಂದು ಪುಟ್ಟ ಗ್ರಾಮ' ವಾಗುತ್ತಿರುವ ಈ ಜಾಗತೀಕರಣದ ಸಂದರ್ಭದಲ್ಲಿ "ಒಂದು ಜಿಲ್ಲೆ" ಅಥವ "ರಾಜ್ಯ"ದ ಅಭಿವೃದ್ಧಿಯು ಸ್ವಾತಂತ್ರವಾಗಿ ಸಾಗುವುದು ತುಂಬಾ ಕಠಿಣವೆಂದು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಜಗತ್ತಿನ, ದೇಶದ ಒಟ್ಟಾರೆ "ಅಭಿವೃದ್ಧಿ"ಯ ಸಂರಚನೆಯ ವ್ಯಾಪ್ತಿಯೊಳಗೆ ಇಂತಹ ಕ್ರಿಯೆಗಳು ಬಹುತೇಕ ನಡೆಯುತ್ತವೆ. ಆದರೆ ಈ ಒಟ್ಟಾರೆ ಬೆಳವಣಿಗೆಗಳ ನಡುವೆಯೋ 'ನಿರ್ಧಿಷ್ಠ ಪರಿಸ್ಥಿತಿಯ, ನಿರ್ಧಿಷ್ಟ ಅಧ್ಯಯನ'ವನ್ನು ನಡೆಸಲು ಸಾಧ್ಯವಾದರೆ ಹಲವು ಅವಕಾಶಗಳು ತೆರೆದುಕೊಳ್ಳಬಹುದೆಂಬುದು ನಮ್ಮ ಅನುಭವ. ಇಂತಹ ದೃಷ್ಠಿಕೋನ ಮತ್ತು ವಿಶ್ವಾಸದಿಂದಲೇ 'ಕೋಲಾರ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜನಾಗ್ರಹ ಸಮಾವೇಶ"ವನ್ನು ಸಂಘಟಿಸಲಾಗುತ್ತಿದೆ ಎಂದು ನಾನು ಭಾವಿಸುತ್ತೇನೆ.

ಹೀಗಾಗಿ ರಾಜ್ಯದ ಒಟ್ಟು ವಾರ್ಷಿಕ 2.5 ಲಕ್ಷ ಕೋಟಿ ರೂಗಳಲ್ಲಿ ಆದಾಯವಾದ ಶೇ. 40 ಕ್ಕಿಂತ ಹೆಚ್ಚಿನ ಪ್ರಮಾಣದ ಸಂಪತ್ತನ್ನು ಸೃಷ್ಟಿಸುತ್ತಿರುವ ದೈತ್ಯ "ಬೆಂಗಳೂರು ಮಹಾನಗರ" ಎಂಬ 1.5 ಕೋಟಿ ಜನಸಂಖ್ಯೆಯ "ಬೃಹತ್ ಮಾರುಕಟ್ಟೆ"ಯು ನಮ್ಮ ಮುಂದಿದೆ. ಈ ದೈತ್ಯ ಬೆಂಗಳೂರು ಮಹಾನಗರದ ಮೂಗಿನ ಅಡಿಯಲ್ಲಿ ಇರುವ ನಮ್ಮ "ಕೋಲಾರ ಜಿಲ್ಲೆ"ಗೆ ಇದೊಂದು ಅವಕಾಶವೂ ಹೌದು. ಅದೇ ಸಂದರ್ಭದಲ್ಲಿ "ದೊಡ್ಡ ಆಪಾಯ"ಯೂ ಹೌದು. ಪ್ರಚಲಿತ ಕಾರ್ಪೋರೇಟ್ ಜಗತ್ತಿನ ಅತ್ಯಂತ ಸಕ್ರಿಯ ಭಾಗವಾಗಿರುವ "ಬೆಂಗಳೂರು ಮಹಾನಗರ" ಈಗಾಗಲೇ ನೂರಾರು ಕೆರೆ, ಕುಂಟೆ, ಗುಡ್ಡ, ಬೆಟ್ಟ, ಗ್ರಾಮಗಳನ್ನು ನುಗ್ಗಿ ನೀರು ಕುಡಿದಿದೆ. ಇದೇ ರೀತಿಯಲ್ಲಿ ಇನ್ನು 10–15 ವರ್ಷದಲ್ಲಿ ನಮ್ಮ "ಕೋಲಾರ ಜಿಲ್ಲೆ" ಯನ್ನು ನುಗ್ಗಿ ನೀರು ಕುಡಿಯಬಹುದು. ಈ ಪ್ರಕ್ರಿಯೆಯನ್ನೇ ದಂಧೆ ಮಾಡಿಕೊಂಡು "ಕೋಲಾರ ಜಿಲ್ಲೆ"ಯನ್ನು ಖಾಲಿ ಮಾಡುವ ಭರದಲ್ಲಿ ನೂರಾರು ಕೋಟಿ ರೂಗಳ ಸಂಪಾದನೆ ಮಾಡಬಹುದೆಂದು ಹತ್ತು ಹಲವು ರಣ ಹದ್ದುಗಳ ಕಾದು ಕುಳಿತ್ತಿವೆ. ಇತ್ತೀಚಿನ ದಿನಗಳಲ್ಲಿ ಸಾವಿನ ಮನೆಯಲ್ಲಿ "ರಾಜಕೀಯ" ಮತ್ತು "ವ್ಯಾಪಾರ" ಸರ್ವೆ ಸಾಮಾನ್ಯವಾಗುತ್ತಿದೆ. ನಾವು ಉಳಿಯಬೇಕಾದರೆ ಈ 'ಬಕಾಸುರ' ಸಂಸ್ಕೃತಿಯನ್ನು ತಡೆಯಬೇಕು ಮತ್ತು ಮತ್ತು ಇದರ ಜೊತೆಗೆ ತುಂಬಾ "ವ್ಯವಸ್ಥಿತ"ವಾಗಿ 'ಬದುಕುವುದು' ಮತ್ತು 'ವ್ಯವಹರಿಸುವುದುದನ್ನು' ಕಲಿಯಬೇಕು. ಶಾಶ್ವತ ನೀರಾವರಿ ಯೋಜನೆಗಳಿಲ್ಲದ ಸಂದರ್ಭದಲ್ಲಿ ಹಲವು ಹತ್ತು ಸಂಕಟಗಳ ನಡುವೆಯೂ ನಮ್ಮ ಜಿಲ್ಲೆಯ ರೈತರು, ಕೃಷಿ ಕೂಲಿಕಾರರು 'ವಿಜ್ಞಾನಿ'ಗಳಂತೆ ಬಹುತೇಕ ವೈಜ್ಞಾನಿಕ ಕೃಷಿಯನ್ನು ಮಾಡುತ್ತಾ ಬಂದಿದ್ದಾರೆ. ಇದು ನಮ್ಮ ಮುಂದಿರುವ ಭಾರಿ ದೊಡ್ಡ ಸವಾಲು. ಈ ಸವಾಲಿಗೆ ಉತ್ತರದ ಹುಡುಕಾಟದ ಭಾಗವಾಗಿಯೇ "ಕೋಲಾರ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜನಾಗ್ರಹ ಸಮಾವೇಶ"ವೆಂದು ನಾನಂತು ಭಾವಿಸಿದ್ದೇನೆ.

ಈ ಹಿನ್ನೆಲೆಯಲ್ಲಿ "ಕೋಲಾರ ಜಿಲ್ಲೆ"ಯನ್ನು 'ಉಳಿಸುವುದು', 'ಅಭಿವೃದ್ಧಿ' ಮಾಡುವುದು ಎನ್ನುವುದಾದರೆ, ಕೂಡಲೇ ಅಪಾರ ಸಂಖ್ಯೆಯಲ್ಲಿ ಇರುವ ಭೂಹೀನರಿಗೆ ಕೃಷಿ ಭೂಮಿಗಳನ್ನು ಹಂಚಿಕೆ ಮಾಡಬೇಕು. ವೈಜ್ಞಾನಿಕ ಭೂಬಳಕೆ ನೀತಿ, ಬೆಳೆ ಪದ್ಧತಿಗಳನ್ನು ಯೋಜಿಸಬೇಕು. ಇದಕ್ಕೆ ಅಗತ್ಯವಿರುವ ನೀತಿ ನಿರೂಪಣೆಗಳನ್ನು ರಾಜ್ಯ ಮತ್ತು ಜಿಲ್ಲಾಡಳಿತಗಳು ನಿರ್ಧರಿಸಬೇಕು. ಲಭ್ಯವಿರುವ ಸರ್ಕಾರಿ ಭೂಮಿಗಳು ಸೇರಿದಂತೆ, ಸಾವಿರಾರು ಎಕರೆ ರೈತರ ಕೃಷಿ ಯೋಗ್ಯ ಭೂಮಿಗಳನ್ನು ವಿವಿಧ ಯೋಜನೆಗಳ ಹೆಸರಿನಲ್ಲಿ ಲಜ್ಜೆಯಿಲ್ಲದೆ ಸ್ವಾಧೀನಪಡಿಸಿಕೊಳ್ಳುವುದನ್ನು ಕೂಡಲೇ ನಿಲ್ಲಿಸಬೇಕು. ತೀರ ಅಗತ್ಯವಿರುವ ಯೋಜನೆಗಳಿಗೆ ರೈತರ ಒಪ್ಪಿಗೆ ಪಡೆದು, ರೈತರಿಗೆ ಸೂಕ್ತ ಪರಿಹಾರದ ಜೊತೆಗೆ "ಯೋಜನೆ"ಗಾಗಿ ಭೂಮಿ ಕಳೆದುಕೊಂಡ "ರೈತರ"ನ್ನು "ಶೇರ್ ಹೋಲ್ಡರ್ಸ್"ಯಾಗಿ ಸೇರ್ಪಡೆ ಮಾಡುವ ವ್ಯವಸ್ಥೆ ರೂಪಿಸಿಕೊಳ್ಳಬೇಕಿದೆ. ಆಗ ಮಾತ್ರ "ಅಭಿವೃದ್ಧಿ"ಯ ಫಲವನ್ನು, ಈ"ಅಭಿವೃದ್ಧಿ"ಗಾಗಿ ಭೂಮಿಯನ್ನು ನೀಡಿದವರಿಗೆ ಸಿಗುವಂತೆ ಆಗುತ್ತದೆ.ಇಂತಹದೇ ಕಣ್ಣೋಟವನ್ನು ಕೃಷಿ, ತೋಟಗಾರಿಕೆ, ರೇಷ್ಮೆ, ತರಕಾರಿಗಳ ಸಂಸ್ಕರಣೆ, ಮಾರುಕಟ್ಟೆಗೆ ಸಂಬಂಧಿಸಿದ ನೀತಿಯನ್ನು ರೂಪಿಸಿಕೊಳ್ಳಬೇಕಿದೆ. ಇದನ್ನು ಸಾಧಿಸಿಬೇಕಾದರೆ ಬಲತ್ಕಾರವಾಗಿ ಏರಿಕೆ ಮಾಡುತ್ತಿರುವ 'ಕಂಪನಿ ಕೃಷಿ'ಯನ್ನು ಹಿಮ್ಮೆಟ್ಟಿಸಿ 'ರೈತಾಪಿ ಕೃಷಿ', 'ಸಹಕಾರಿ ಕೃಷಿ' ಯನ್ನು ಅಳವಡಿಸಿಕೊಳ್ಳಬೇಕಿದೆ. ಹಲವು ಬಲಹೀನತೆಗಳ ನಡುವೆಯು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆ.ಎಂ.ಎಫ್., ಡಿ.ಸಿ.ಸಿ. ಬ್ಯಾಂಕ್‌ಗಳ ಉತ್ತಮ ಉದಾಹರಣೆಗಳು ನಮ್ಮ ಮುಂದಿವೆ. ಇವುಗಳನ್ನು ಮತ್ತಷ್ಟು ಬಲಪಡಿಸುತ್ತಾ, 'ಉತ್ಪಾದನೆ', 'ಸಂಸ್ಕರಣೆ' 'ಮಾರುಕಟ್ಟೆ' ಈ ಹಂತಗಳಲ್ಲಿ ನಮ್ಮ ಒಂದು ವಿಶಿಷ್ಟ 'ಬ್ರಾಂಡ್' ಅನ್ನು ಬೆಳೆಸುವುದು ಅತಿ ಅಗತ್ಯವಾಗಿದೆ. ಈ ಕಣ್ಣೋಟ ಕೇವಲ ರಾಗಿ, ಮಾವು, ತರಕಾರಿಗಳಿಗೆ ಸೀಮಿತ ಮಾಡದೇ ಕುರಿ, ಕೋಳಿ, ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿ ವಿಸ್ತರಿಸುವುದರ ಬಗ್ಗೆ ಗಂಭೀರವಾದ, ಗಹನವಾದ ಚರ್ಚೆಗಳು ನಡೆಯಬೇಕಿದೆ. ಉದಾಹರಣೆಗೆ "ಕೋಲಾರ ಗೋಲ್ಡ್", ಹಣ್ಣುಗಳು, ತರಕಾರಿಗಳು, ಮಾಂಸ ಇತ್ಯಾದಿಗಳನ್ನು ಬೆಂಗಳೂರು ಸಗಟ್ಟು ಮಾರುಕಟ್ಟೆಗಳು ಸೇರಿದಂತೆ ಬೃಹತ್ ಅಪಾರ್ಟ್‌ಮೆಂಟ್‌ಗಳ ಜೊತೆ ಚೈನ್ ಲಿಂಕ್‌ನ್ನು ಏರ್ಪಡಿಸಿಕೊಳ್ಳುವುದು ಇತ್ಯಾದಿ.

**ಜಿಲ್ಲೆಯ ಕೈಗಾರಿಕೆಗಳ ಕುರಿತು:**

ಈಗಾಗಲೇ, ಇರುವ ಬೃಹತ್, ಮಾಧ್ಯಮ, ಸಣ್ಣ ಕೈಗಾರಿಕೆಗಳನ್ನು ಯೋಜಿತವಾಗಿ ಅಭಿವೃದ್ಧಿ ಪಡಿಸುವುದರ ಜೊತೆಗೆ ಕೃಷಿ, ತೋಟಗಾರಿಕೆ, ರೇಷ್ಮೆ, ತರಕಾರಿಗಳ ಮೌಲ್ಯವರ್ದನೆ, "ಮಾರುಕಟ್ಟೆ"ಯನ್ನು ನಡೆಸುವ ಸರ್ಕಾರಿ, ಖಾಸಗಿ, ಸಹಕಾರಿ ಕ್ಷೇತ್ರದ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಬರಬೇಕಿವೆ. ಈ ದೆಸೆಯಲ್ಲಿ ನಾವೆಲ್ಲರೂ ಸರ್ಕಾರಗಳನ್ನು ಒತ್ತಾಯಿಸಬೇಕಿದೆ. ಅದೇ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಹೆಮ್ಮೆಯ 'ಚಿನ್ನದ ಗಣಿ'ಯನ್ನು ಪುನರ್ ಆರಂಭಿಸುವ. ಬಿ.ಇ.ಎಂ.ಎಲ್. ನ್ನು ಖಾಸಗೀಕರಣದಿಂದ ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಮೂಲ ಸೌಕರ್ಯ ರಹದಾರಿ, ಇದು ನಮ್ಮ ಆದ್ಯತೆಯಾಗಬೇಕು**

ಈಗಾಗಲೆ ಪ್ರಸ್ತಾಸಿದಂತೆ 'ಉತ್ಪಾದನೆ' 'ಸಂಸ್ಕರಣೆ' 'ಮಾರುಕಟ್ಟೆ' ಆಧಾರಿತ ಕೈಗಾರಿಕೆಗಳ ಸ್ಥಾಪನೆ, ಇರು ಕೈಗಾರಿಕೆಗಳ ಮತ್ತಷ್ಟು ವಿಸ್ತರಣೆ ಹಾಗು ಮುಖ್ಯವಾಗಿ 'ಬೆಂಗಳೂರು ಮಹಾನಗರ' ಜೊತೆಗಿನ ಅಗ್ಗದ ಸಂಚಾರ, ಸಾರಿಗೆ, ವ್ಯಾಪಾರ, ವಹಿವಾಟಗಳನ್ನು ನಡೆಸಲು ರೈಲುವೇ ಅಭಿವೃದ್ಧಿಯು ತುಂಬಾ ಮುಖ್ಯವಾಗುತ್ತದೆ. ಇವುಗಳ ಸಾಧ್ಯತೆಗಳು, ನಿರ್ಧಿಷ್ಟ ಸೂಚನೆಗಳನ್ನು ನಾವು ಈ ಸಮಾವೇಶದಲ್ಲಿ ತೀರ್ಮಾನಿಸಲು ಸಾಧ್ಯವಾಗಬೇಕು.



ಎತ್ತಿನಹೊಳೆ ಯೋಜನೆಯು ಸೇರಿದಂತೆ ಕೆ.ಸಿ. ವ್ಯಾಲಿ ಇತ್ಯಾದಿ ನೀರಾವರಿ ಯೋಜನೆಗಳು ಕಾ ಲ ವಿ ತಿ ಂ ು ' ಊ ಳ ' ಗ ' ಜಾರಿಯಾಗಬೇಕು. ಸಾಮಾನ್ಯ ಜನರ ಆರೋಗ್ಯದ ರಕ್ಷಣೆಯ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಪ್ರಶ್ನೆಗಳು ಇತ್ಯಾರ್ಥವಾಗಬೇಕು. ಶ್ರೀ ಟಿ. ಚನ್ನಯ್ಯನವರ ಕಾಲದ ಹಳೇ ವಿದ್ಯುತ್ ಲೈನ್‌ಗಳನ್ನೇ ಇವತ್ತು ಮುಂದುವರಿಸಲಾಗುತ್ತಿದೆ. ಹೊಸ ಲೈನ್‌ಗಳು, ವಿದ್ಯುತ್ ಸ್ಟೇಷನ್ ಇತ್ಯಾದಿಗಳಲ್ಲಿ ಇ ದೊಡ್ಡ ಸುಧಾರಣೆಗಳು ನಡೆಯಬೇಕಿದೆ.


**ಜನಪರ ಅಭಿವೃದ್ಧಿಗಾಗಿ–ಜನಪರ ರಾಜಕಾರಣವನ್ನು ಬೆಂಬಲಿಸೋಣ:**

ಕೋಲಾರ ಜಿಲ್ಲೆಯಲ್ಲಿ "ಜನಪರ ಅಭಿವೃದ್ಧಿ"ಯನ್ನು ಸಾಧಿಸಬೇಕಾದರೆ, "ಜನಪರ ರಾಜಕಾರಣ"ವನ್ನು ಬೆಳೆಸಬೇಕಿದೆ. ನೂರು ವರ್ಷಗಳ ಕಾರ್ಮಿಕ ಚಳುವಳಿ ಇತಿಹಾಸ, ಚಾರಿತ್ರಿಕ ರೈತ, ದಲಿತ ಚಳುವಳಿಗಳ ಇತಿಹಾಸ ಇರುವ ಜಿಲ್ಲೆ ನಮ್ಮ ಕೋಲಾರ, ಕೇವಲ ಅಷ್ಟು ಮಾತ್ರವಲ್ಲ ಶ್ರೀ. ಕೆ.ಸಿ. ರೆಡ್ಡಿಯವರನ್ನು ಪ್ರಪ್ರಥಮ ಮುಖ್ಯಮಂತ್ರಿಯಾಗಿ ಕೊಟ್ಟ ಜಿಲ್ಲೆ, ದೊಡ್ಡ ಮಟ್ಟದಲ್ಲಿ ಹೈನುಗಾರಿಕೆಯನ್ನು ರಾಜ್ಯ ಮತ್ತು ದೇಶಕ್ಕೆ ಪರಿಚಯಿಸಿದ ಶ್ರೀ ಎಂ.ವಿ. ಕೃಷ್ಣಪ್ಪನವರಂತಹ ಮುತ್ಸದಿಯ ಜಿಲ್ಲೆ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಕಲ್ಪನೆಯೊಂದಿಗೆ "ಸಂವಿಧಾನ"ವನ್ನು ರೂಪಿಸುವುದರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಜೊತೆಯಲ್ಲಿ ಕೆಲಸ ಮಾಡಿದ ಶ್ರೀ ಟಿ. ಚನ್ನಯ್ಯನಂತಹ ಮಹನೀಯರ ಜಿಲ್ಲೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸ್ವಾತಂತ್ರ್ಯ ಪಡೆದ ತಕ್ಷಣ ರಾಜಕೀಯ ಅಧಿಕಾರದಿಂದ ದೂರು ಇರಬೇಕೆಂಬ ಮಹಾತ್ಮಗಾಂಧಿಜೀ ಕರೆಗೆ ತಲೆಬಾಗಿ ಸಿಗಬಹುದಿದ್ದ ಮಂತ್ರಿ ಸ್ಥಾನಗಳಿಂದ ದೂರ ಉಳಿದ ಶ್ರೀ ಕೆ. ಪಟ್ಟಾಭಿರಾಮನ್‌ನಂತಹ ತ್ಯಾಗ ಜೀವಿಗಳ ಜಿಲ್ಲೆ ನಮ್ಮ ಕೋಲಾರ.

ಈ ಮಹನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ಅಪಾರ ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ. ಸ್ವಾತಂತ್ರ್ಯದ ನಂತರವು ದೇಶದ ಅಭಿವೃದ್ಧಿಗಾಗಿ ಅವಿರತ ಸಂಘರ್ಷವನ್ನು ನಡೆಸಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆ 75 ವರ್ಷಗಳು ತುಂಬುತ್ತಿರುವ ಈ ಹಿನ್ನೆಲೆಯಲ್ಲಿ,

- ಶ್ರೀ ಕೆ.ಸಿ. ರೆಡ್ಡಿಯವರ ಸ್ಮರಣೆಯಲ್ಲಿ ಅವರ ಗ್ರಾಮವಾದ "ಕ್ಯಾಸಂಬಳಿ"ಯನ್ನು"ಮಾದರಿ ಗ್ರಾಮ"ವಾಗಿ ಅಭಿವೃದ್ಧಿ ಪಡಿಸುವುದು ಮತ್ತು ಗ್ರಾಮದ ಹತ್ತಿರ ಈಗಾಗಲೇ ಗುರ್ತಿಸಿರುವ 20 ಎಕರೆ ಭೂಮಿಯಲ್ಲಿ ಅರ್ಥ ಪೂರ್ಣ 'ಸ್ಮಾರಕ'ವನ್ನು ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರ ಈ ಬಜೆಟ್‌ನಲ್ಲಿ ಕನಿಷ್ಠ 100 ಕೋಟಿ ರೂ. ಗಳನ್ನು ಘೋಷಣೆ ಮಾಡಬೇಕು.
- ದೇಶ ಮತ್ತು ರಾಜ್ಯಕ್ಕೆ ಹೈಬ್ರಿಡ್ ಹಸುಗಳನ್ನು ಪರಿಚಯಿಸಿದ ಮತ್ತು ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿರುವ ಶ್ರೀ ಎಂ.ವಿ. ಕೃಷ್ಣಪ್ಪನವರ ಸ್ಮರನಾರ್ಥ ಜಿಲ್ಲೆಯಲ್ಲಿ "ಹೈನುಗಾರಿಕೆ ವಿಜ್ಞಾನಗಳ ಕಾಲೇಜ್"ಅನ್ನು ಸ್ಥಾಪಿಸುವುದರ ಬಗ್ಗೆ ಈ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು.
- ದೇಶಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್‌ರ ಜೊತೆಗೂಡಿ ಅತಿ ಉತ್ತಮವಾದ "ಸಂವಿಧಾನ"ವನ್ನು ನೀಡಿದ ಹಾಗು ಜಿಲ್ಲೆಯ ವಿದ್ಯುತ್ ಇತ್ಯಾದಿ ಕ್ಷೇತ್ರಗಳಲ್ಲಿ ಆದರ್ಶಮಯ ಕೆಲಸವನ್ನು ಮಾಡಿದ ಶ್ರೀ ಟಿ. ಚನ್ನಯ್ಯನವರ ಸ್ಮರಣೆಯಲ್ಲಿ ಬೆಂಗಳೂರು ಉತ್ತರ ವಿ.ವಿ. ಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ನೀಡಲಾಗಿರುವ ಮೀಸಲಾತಿಯ ಅನುಷ್ಠಾನದ ಕುರಿತು ಅಧ್ಯಯನ ಮಾಡಲು"ಶ್ರೀ ಟಿ. ಚನ್ನಯ್ಯ ಅಧ್ಯಯನ ಪೀಠ"ವನ್ನು ಸ್ಥಾಪಿಸಬೇಕು.
- ಭ್ರಷ್ಟಗೊಳುತ್ತಿರುವ ರಾಜಕೀಯ ವ್ಯವಸ್ಥೆಯ ಸಂದರ್ಭದಲ್ಲಿ ಗಾಂಧಿಜೀ ಮತ್ತು ಶ್ರೀ ಕೆ. ಪಟ್ಟಾಭಿರಾಮನ್‌ರವರ ಸರ್ವೋದಯ ಸಿದ್ಧಾಂತವನ್ನು ಯುವ ಜನಾಂಗದ ನಡುವೆ ಪ್ರಚಾರ ಮಾಡುವ ಉದ್ದೇಶದಿಂದ ಬೆಂಗಳೂರು ಉತ್ತರ ವಿವಿಯಲ್ಲಿ "ಶ್ರೀ ಕೆ. ಪಟ್ಟಾಭಿರಾಮನ್

ಪುಟ 10 ನೋಡಿ









('ಟ್ರೈಕಾಂಟಿನೆಂಟಲ್' ನ ವಿಜಯ ಪ್ರಶಾದ್, ನಿತೀಶ್ ನಾರಾಯಣ್ ಮತ್ತು 'ಲೆಫ್ಟ್ ವರ್ಡ್' ನ ಸುಧನ್ವ ದೇಶಪಾಂಡೆ ಬರಹಗಳ ಮೇಲೆ ಆಧಾರಿತ)

# ಜಗದಗಲದಲ್ಲೂ 'ಚಿಂತನೆಗಳ ಸಮರ'ಕ್ಕೆ ಓಗೊಟ್ಟ "ಕೆಂಪು ಪುಸ್ತಕ ದಿನ"

ಟಿ. ಸುರೇಂದ್ರ ರಾವ್

ಜಗತ್ತಿನ ದುಡಿಯುವ ಜನರ ಕಣ್ಮಣಿ ಫಿಡೆಲ್ ಕ್ಯಾಸ್ಟ್ರೊ 1999ರಲ್ಲಿ ವೆನೆಜುವೇಲಾದ ಕೇಂದ್ರೀಯ ವಿ.ವಿ.ಯಲ್ಲಿ ಸೋವಿಯೆಟ್ ಪತನದ ನಂತರ ಆ ದಶಕದಲ್ಲಿ ಸೈದ್ಧಾಂತಿಕ ಸೇರಿದಂತೆ ಸಾಮ್ರಾಜ್ಯಶಾಹಿಯ ಭೀಕರ ಸರಣಿ ದಾಳಿಗಳ ಕುರಿತು ಮಾತನಾಡಿದರು. "ನಾವು ಚಿಂತನೆಗಳು ಮಾತ್ರ ಇರುವ ಜನ ಆಗಿದ್ದೇವೆ. ಈ ದಾಳಿಗಳನ್ನು ಚಿಂತನೆಗಳ ಸಮರದಿಂದ ಮಾತ್ರ ಎದುರಿಸಬಲ್ಲೆವು' ಎಂದಿದ್ದರು. 20 ವರ್ಷಗಳ ನಂತರ, ಸಾಮ್ರಾಜ್ಯಶಾಹಿಯ ಸೈದ್ಧಾಂತಿಕ ದಾಳಿಗಳ 'ಚಿಂತನೆಗಳ ಸಮರ'ಕ್ಕೆ ಸೆಡ್ಡು ಹೊಡೆದು ಓಗೊಟ್ಟು ಒಂದು ಸ್ಪಷ್ಟ ರೂಪ ಕೊಡಲು ಲೆಫ್ಟ್ ವರ್ಡ್, ಕರ್ನಾಟಕದ ಕ್ರಿಯಾ ಮಾಧ್ಯಮ ಸೇರಿದಂತೆ 10 ಭಾರತದ ಎಡಪಂಥೀಯ ಪ್ರಕಾಶಕರು ನಿರ್ಧರಿಸಿದರು. ಪ್ರತಿ ವರ್ಷ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ ದಿನವಾದ ಫೆಬ್ರವರಿ 21 ರಂದು 'ಕೆಂಪು ಪುಸ್ತಕಗಳ ದಿನ' ಆಚರಿಸಲು ಆರಂಭಿಸಿದರು. ಎಡಪಂಥೀಯ ಚಿಂತನೆಗಳನ್ನು ಪ್ರಚಾರ ಮಾಡಲು, ಸಮರ್ಥಿಸಲು, ಜಗತ್ತಿನ ಎಲ್ಲರಿಗೂ ಅದನ್ನು ಮನಮುಟ್ಟುವಂತೆ ವಿವರಿಸಲು ಆ ದಿನದಂದು ಸಾರ್ವಜನಿಕರ ಬಳಿ ತೆರಳುವುದು ಈ ದಿನದ ಆಚರಣೆಯ .ಮುಖ್ಯ ಭಾಗವಾಯಿತು. ಈ ಯೋಜನೆಯನ್ನು ಜಗತ್ತಿನಾದ್ಯಂತ ಪಸರಿಸಬೇಕು ಎಂಬ ಆಶಯದಿಂದ ಎಡ ಪ್ರಕಾಶಕರ ಅಂತರ್ರಾಷ್ಟ್ರೀಯ ಸಂಘ (ಇಂಟರ್ ನ್ಯಾಷನಲ್ ಯೂನಿಯನ್ ಆಫ್ ಲೆಫ್ಟ್ ಪಬ್ಲಿಷರ್ಸ್) ವನ್ನು ರಚಿಸಲಾಯಿತು. ಇಂಡೋನೇಶಿಯಾದಿಂದ ಕ್ಯೂಬಾದವರೆಗೂ ಹಬ್ಬಿರುವ ಈ ಸಂಘದಲ್ಲಿ ಈಗ 50 ಎಡ ಪ್ರಕಾಶಕರು ಸದಸ್ಯರಾಗಿದ್ದಾರೆ. ಅರ್ಜೆಂಟಿನಾದಿಂದ ಈ ಸಂಘದ ಸದಸ್ಯ ಪ್ರಕಾಶನದ ಹೆಸರೆ 'ಬತಲ್ಲಾ ಡೆ ಐಡಿಯಾಸ್' (ಚಿಂತನೆಗಳ ಸಮರ) ಎಂದೇ ಇದೆ.

ಕೆಂಪು ಪುಸ್ತಕಗಳ ದಿನಾಚರಣೆಯ ಗುರಿ ಕೇವಲ ರಕ್ಷಣಾತ್ಮಕವಾಗಿರುವುದಲ್ಲ, ದಾಳಿಗೆ ಒಳಗಾಗಿರುವ ಎಡಪಂಥೀಯ ಬರಹಗಾರರು, ಎಡ ಚಿಂತಕರು, ಎಡ ಪ್ರಕಾಶಕರು, ಎಡ ಮುದ್ರಣಾಲಯ ಹಾಗೂ ಎಡಪಂಥೀಯ ಸಾಹಿತ್ಯ ಮಾರಾಟಗಾರರ ಪರವಾಗಿ ದೃಢವಾಗಿ ನಿಂತು ಅವರಲ್ಲಿ ಧೈರ್ಯ ತುಂಬುವ ಕೆಲಸವನ್ನು ಸಹ ಮಾಡಲಾಗುತ್ತದೆ. ಓದುಗರಲ್ಲಿ ಅಂತಹ ಸ್ಫೂರ್ತಿ ತುಂಬುವುದರ ಮೂಲಕ ಕ್ರೂರ ಪಾಶವೀ ಸಂಸ್ಕೃತಿ ಹಾಗೂ ನಾಶದ ವಿರುದ್ಧ ಮಾನವೀಯತೆಯನ್ನು ರಕ್ಷಿಸುವ ನಿಲುವು ಸಂಘದ್ದಾಗಿದೆ.

**ಕಮ್ಯುನಿಸ್ಟ್ ಪ್ರಣಾಳಿಕೆ ಮತ್ತು ಹಿನ್ನೆಲೆ**

ಮಾನವನ ಚರಿತ್ರೆಯಲ್ಲಿ ಹೆಚ್ಚು ವ್ಯಾಪಕವಾಗಿ ಓದಲ್ಪಟ್ಟ ಪುಸ್ತಕ 'ಕಮ್ಯುನಿಸ್ಟ್ ಪ್ರಣಾಳಿಕೆ ಪ್ರಕಟವಾಗಿ ಫೆಬ್ರವರಿ 21, 2022 ಕ್ಕೆ 174 ವರ್ಷಗಳಾದವು. 174 ವರ್ಷಗಳ ಹಿಂದೆ, ಫೆಬ್ರವರಿ 21, 1848 ರಂದು ಕಾರ್ಲ್ ಮಾರ್ಕ್ಸ್ ಮತ್ತು ಏಂಗೆಲ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದರು. ಎಲ್ಲರಲ್ಲೂ ಸ್ಫೂರ್ತಿ, ಉತ್ಸಾಹ ಹಾಗೂ ಧೈರ್ಯವನ್ನು ತುಂಬುವ ಆ ಪುಸ್ತಕವನ್ನು ಕಮ್ಯುನಿಸ್ಟ್ ಲೀಗಿನ ಪರವಾಗಿ ಹೊರತಂದರು. ಪ್ರಕಟವಾಗಿ ಹೊರ ಬಂದ ಕೆಲವೇ ಸಮಯದಲ್ಲಿ ಆ ಕ್ರಾಂತಿಕಾರಿ ಪುಸ್ತಕವು ಯೂರೋಪಿನಾದ್ಯಂತ ಬಂಡಾಯದ ಕಿಡಿ ಹೊತ್ತಿಸಿತು. ಆ ಅವಧಿಯನ್ನು 'ಜನಸಮುದಾಯದ ವಸಂತಕಾಲ' ಎಂದು ನಂತರದಲ್ಲಿ ಹೇಳಲಾಯಿತು. ಆದರೆ ಆ ಬಂಡಾಯವನ್ನು ನಿರ್ದಯವಾಗಿ ಬಗ್ಗುಬಡಿಯಲಾಯಿತು. ರೈತರು ಮತ್ತು ಕಾರ್ಮಿಕರು ತಮ್ಮ ಹೊಸ ಇತಿಹಾಸ ಬರೆಯಲು ಸಾಧ್ಯವಾಗಲಿಲ್ಲ, ಏಕೆಂದರೆ ಅವರು ಶಸ್ತ್ರಸಜ್ಜಿತರಾಗಿರಲಿಲ್ಲ ಮತ್ತು ತಮ್ಮದೇ ಆದ ಸಂಘಟನೆಯನ್ನು ಹೊಂದಿರಲಿಲ್ಲ. ಒಂದು ಸುಸಜ್ಜಿತ ಸಂಘಟನೆಯ ಕಟ್ಟುವಿಕೆಯನ್ನು ಪ್ರಣಾಳಿಕೆ ನಿರ್ದೇಶಿಸಿತ್ತು; ಅದಾಗಲೆ ಅಸ್ತಿತ್ವದಲ್ಲಿದ್ದ 'ಕಮ್ಯುನಿಸ್ಟ್ ಲೀಗ್' ದುರ್ಬಲವಾಗಿತ್ತು, ಅದೊಂದು ಕೆಲವೇ ಜನರ ಸಣ್ಣ ಕೂಟವಾಗಿತ್ತು – ರೈತರು ಮತ್ತು ಕಾರ್ಮಿಕರಿಂದ ಪ್ರತ್ಯೇಕವಾಗಿತ್ತು.

1870 ರ ತನಕ ಆ ಪ್ರಣಾಳಿಕೆ ಹೆಚ್ಚು ಪ್ರಭಾವ ಬೀರಲಿಲ್ಲ. 1871ರ ಪ್ಯಾರೀಸ್ ಕಮ್ಯುನ್ ಕ್ರಾಂತಿಯ ಹಿಂದೆ ಪ್ರಣಾಳಿಕೆಯ ಸ್ಫೂರ್ತಿಯಿತ್ತು. ಅದು 70 ದಿನಗಳ ಆಳ್ವಿಕೆಯ ನಂತರ ಸೋತರೂ, ಯೂರೋಪಿನಲ್ಲಿ ಕಾರ್ಮಿಕರ ಹಾಗೂ ಸಮಾಜವಾದಿಗಳ ಚಳುವಳಿ ಬೆಳೆಯಿತು ಮತ್ತು ಅದು ಆ ಕ್ರಾಂತಿಕಾರಿ ಪ್ರಣಾಳಿಕೆಯನ್ನು ತಮ್ಮ ಪ್ರಮುಖ ಪಠ್ಯವನ್ನಾಗಿ ಅಂಗೀಕರಿಸಿತು. ಹಲವಾರು ಭಾಷೆಗಳಿಗೆ ಅನುವಾದವಾಗಿ ವ್ಯಾಪಕವಾಗಿ ಹಂಚಲಾಯಿತು. ಆ ಪುಸ್ತಕ ಸಿಡಿಮದ್ದಿನಂತಿದೆ, ಅದರ ವಾಕ್ಯಗಳು ಸ್ಫೋಟಕದಂತಿವೆ, ಅದರ ಚಿಂತನೆಗಳು ಭವಿಷ್ಯವಾಣಿಯಂತಿವೆ. ಕೇವಲ 23 ಪುಟಗಳನ್ನು ಹೊಂದಿರುವ ಈ ಪುಟ್ಟ ಹೊತ್ತಿಗೆಯಲ್ಲಿ ವಿನಾಶಕಾರಿ ಬಂಡವಾಳವಾದದ ಕುರಿತ ಕಥನಗಳು ಇದ್ದರೂ ಅದು ಅಳಿವಿನ ಕರಪತ್ರವಲ್ಲ. ಅದು ಭರವಸೆಯ, ಕಾರ್ಯಾಚರಣೆಯ, ಹಾಗೂ ಮಾನವ ಕುಲದ ಕ್ರಾಂತಿಯ ಮಾರ್ಗದರ್ಶಿಯಾಗಿದೆ. ಅದು ರೈತರು ಹಾಗೂ ಕಾರ್ಮಿಕರ ದಾಸ್ಯದ ಸರಪಳಿಯನ್ನು ತುಂಡರಿಸಲಿದೆ, ಶ್ರಮಿಕರ ನಾಡಿನ ಉದಯಕ್ಕಾಗಿನ ಕೈಪಿಡಿಯಾಗಿದೆ. ಇದನ್ನು ಓದಬೇಕು, ಮತ್ತೆ ಮತ್ತೆ ಓದಬೇಕು, ಮನನ ಮಾಡಿಕೊಳ್ಳಬೇಕು ಮತ್ತು ಅದರ ಕುರಿತು ಪದೇ ಪದೇ ಚರ್ಚೆ ಹಾಗೂ ಸಂವಾದಗಳನ್ನು ನಡೆಸಬೇಕು. ಅದು ಭವಿಷ್ಯವಾಣಿಯಂತಿದ್ದರೂ, ಸಾಕ್ಷಾತ್ಕಾರಗೊಳಿಸುವ ಅಂಶಗಳೊಂದಿಗೆ ಸೂರ್ತಿದಾಯಕ ಕೂಡ.

ಭಾರತೀಯ ಎಡ ಪ್ರಕಾಶಕರು ಫೆಬ್ರವರಿ 21 ನ್ನು ಕಮ್ಯುನಿಸ್ಟ್ ಪ್ರಣಾಳಿಕೆ ಪ್ರಕಟವಾದ ದಿನವೆಂದು ಮಾತ್ರವೇ ಕೆಂಪು ಪುಸ್ತಕದ ದಿನವನ್ನಾಗಿ ಆಚರಿಸದೆ ಇನ್ನೆರಡು ದೃಷ್ಟಿಯಿಂದ ಕೂಡ ಆಚರಿಸಿದರು: ಒಂದನೆಯದು ಫೆಬ್ರವರಿ 21 ಅಂತರ್ರಾಷ್ಟ್ರೀಯ ಮಾತೃಭಾಷೆಯ ದಿನ, ಮತ್ತು ಎರಡನೆಯದು ಭಾರತ ಕಮ್ಯುನಿಸ್ಟ್ ಪಕ್ಷದ ಧುರೀಣ ಹಾಗೂ ಲೆಫ್ಟ್ ವರ್ಡ್ – ಬರಹಗಾರ ಗೋವಿಂದ ಪನ್ಸಾರೆಯವರು ಹತ್ಯೆಯಾದ ಫೆಬ್ರವರಿ 20 ದಿನವನ್ನು ನೆನಪು ಮಾಡಿಕೊಳ್ಳಲೂ ಕೂಡ. 2020 ರಲ್ಲಿ ಮೊಟ್ಟ ಮೊದಲ ಬಾರಿಗೆ ಕೆಂಪು ಪುಸ್ತಕಗಳ ದಿನವನ್ನಾಗಿ ಆಚರಿಸುವಾಗ ಜನರು ತಮ್ಮ ತಮ್ಮ ಭಾಷೆಗಳಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಓದುವಂತಾಗಲಿ ಎಂದಾಗಿತ್ತು, ಮತ್ತು ಕಾಮ್ರೇಡ್ ಪನ್ಸಾರೆಯಂತಹ ಎಡಪಂಥೀಯ ಬರಹಗಾರರು, ಎಡ ಪ್ರಕಾಶಕರು ಹಾಗೂ ಎಡ ಪುಸ್ತಕ ಮಾರಾಟಗಾರರನ್ನು ಸಂರಕ್ಷಿಸುವ ಸಲುವಾಗಿ ಕೂಡ ಆಗಿತ್ತು.

**2020 ಕೆಂಪು ಪುಸ್ತಕ ದಿನಾಚರಣೆ**

2020 ರಲ್ಲಿ, ದಕ್ಷಿಣ ಕೊರಿಯಾದಿಂದ ಪ್ರಾರಂಭವಾಗಿ ವೆನೆಜುವೆಲಾ ದ ವರೆಗಿನ ಮುವ್ವತ್ತು ಸಾವಿರಕ್ಕೂ ಹೆಚ್ಚು ಜನರು ತಮ್ಮ ತಮ್ಮ ಭಾಷೆಗಳಲ್ಲಿ ಪ್ರಣಾಳಿಕೆಯನ್ನು ಸಾರ್ವಜನಿಕವಾಗಿ ಓದಿದರು. ಕೆಂಪು ಪುಸ್ತಕಗಳ ದಿನದ ಅಧಿಕೇಂದ್ರವಾದ ಭಾರತದ ನಾಲ್ಕು ರಾಜ್ಯಗಳಾದ ಆಂಧ್ರ ಪ್ರದೇಶ, ಕೇರಳ, ತಮಿಳುನಾಡು ಮತ್ತು ತೆಲಂಗಾಣಗಳಲ್ಲಿ ಬಹುತೇಕ ಸಾರ್ವಜನಿಕ ಓದುಗಾರಿಕೆ ಜರುಗಿದವು. ಭಾರತಿ ಪುಸ್ತಕಾಲಯಂ ಮತ್ತು ತಮಿಳುನಾಡಿನ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯು ಅತಿ ದೊಡ್ಡ ಸಂಖ್ಯೆಯಲ್ಲಿ – ಬೆಳಗ್ಗೆ ಚೆನ್ನೈನ ಮರೀನಾ ಬೀಚಿನ ಕಾರ್ಮಿಕ ಪ್ರತಿಮೆಯ ಅಡಿಯಲ್ಲಿ (ಅಲ್ಲೇ ಭಾರತದ ಮೊದಲ ಮೇ ದಿನಾಚರಣೆ ಆಗಿತ್ತು) ಪ್ರಣಾಳಿಕೆ

ಪುಟ 10 ನೋಡಿ

# ಜಗತ್ತಿನ ಐವರಲ್ಲಿ ಒಬ್ಬರು ಸಮಸಮಾಜವನ್ನು ಕಟ್ಟುತ್ತಿರುವ ದೇಶಗಳಲ್ಲಿದ್ದಾರೆ: ಬೇಬಿ

ವಸಂತರಾಜ ಎನ್.ಕೆ.

ಜಗತ್ತಿನ ಇಂದಿನ ಜನಸಂಖ್ಯೆಯ 789 ಕೋಟಿ ಜನರಲ್ಲಿ 159 ಕೋಟಿ ಜನ ಸಮಸಮಾಜವನ್ನು ಕಟ್ಟುವ ಪ್ರಯತ್ನದಲ್ಲಿರುವ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅಂದರೆ ಐವರಲ್ಲಿ ಒಬ್ಬರು ಸಮಸಮಾಜವನ್ನು ಕಟ್ಟುತ್ತಿರುವ ದೇಶಗಳಲ್ಲಿದ್ದಾರೆ. ಇದು ಸಾಧ್ಯವಾಗಿದ್ದು ಕಮ್ಯುನಿಸ್ಟ್ ಪ್ರಣಾಳಿಕೆಯ ಸ್ಫೂರ್ತಿಯಿಂದ ನಡೆದ ಚಳುವಳಿಯಿಂದ. ಭಾರತದ ಕೇರಳದಲ್ಲೂ ಎಲ್.ಡಿ.ಎಫ್. ಸರಕಾರ ಅಧಿಕಾರಕ್ಕೆ ಬಂದಿದ್ದೂ ಪ್ರಣಾಳಿಕೆಯ ಸ್ಫೂರ್ತಿಯಿಂದಲೇ. ಹೀಗೆಂದವರು ಕಾ. ಎಂ.ಎ. ಬೇಬಿ. ಅವರು ಫೆ.21 ರಂದು ಆನ್ ಲೈನಿನಲ್ಲಿ ಸಂಘಟಿಸಲಾಗಿದ್ದ 'ಕೆಂಪು ಪುಸ್ತಕ ದಿನಾಚರಣೆ'ಯಲ್ಲಿ ಮಾತನಾಡುತ್ತಿದ್ದರು.




ಕೇವಲ 23 ಪುಟಗಳ ಪುಸ್ತಿಕೆಯಾಗಿದ್ದ ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಬಲ ಮತ್ತು ತೀಕ್ಷ್ಣ ಸೈದ್ಧಾಂತಿಕ ಹೂರಣ, ಶೈಲಿ; ಏಂಗೆಲ್ಸ್ ಸಾವಿನ ವರೆಗೆ ಮಾರ್ಕ್ಸ್–ಏಂಗೆಲ್ಸ್ ಜಂಟಿಯಾಗಿ ಬರೆದ ಎರಡು ಮತ್ತು ಏಂಗೆಲ್ಸ್ ಒಬ್ಬರೇ ಬರೆದ ಐದು (ಒಟ್ಟು 7) ಮುನ್ನುಡಿಗಳ ಮಹತ್ವ; ಆ ಮೇಲೆ ವಿವಿಧ ಘಟ್ಟಗಳಲ್ಲಿ ವಿವಿಧ ದೇಶಗಳಲ್ಲಿ ವಿವಿಧ ನಾಯಕರು, ಪರಿಣತರು ಅದರ ಪ್ರಸ್ತುತತೆ ತಿಳಿಸಿದ ಮತ್ತು ಸಮಕಾಲೀನಗೊಳಿಸಿದ ಮುನ್ನುಡಿಗಳ ಮಹತ್ವ – ಕುರಿತು ಅವರು ಮಾತನಾಡಿದರು. ಉದಾಹರಣೆಗೆ ಪ್ರಣಾಳಿಕೆಯ ಜಾರಿಯತ್ತ ಮೊದಲ ಭಾಗಶಃ ಸಫಲ ಪ್ರಯತ್ನವಾದ ಪ್ಯಾರೀಸ್ ಕಮ್ಯೂನ್ ನಂತರ 1872ರಲ್ಲಿ ಬರೆದ ಮುನ್ನುಡಿಯಲ್ಲಿ ಕಮ್ಯುನ್ ನ ಅನುಭವದ ಆಧಾರದ ಮೇಲೆ ಕಾರ್ಮಿಕ ಪ್ರಭುತ್ವ ಯಾವ ರೀತಿ ಇರಬೇಕೆಂಬ ಕುರಿತು ಬರೆದಿದ್ದರು. 1882ರಲ್ಲಿ ಮೊದಲ ರಶ್ಯನ್ ಆವೃತ್ತಿಯಲ್ಲಿ ಕಾರ್ಮಿಕ ಕ್ರಾಂತಿ ರಶ್ಯಾದಲ್ಲಿ ಫ್ರಾನ್ಸ್, ಜರ್ಮನಿ, ಯು.ಕೆ ಯಂತಹ ಯುರೋಪಿನ ಅಭಿವೃದ್ಧ ಬಂಡವಾಳಶಾಹಿ ದೇಶಗಳಿಗಿಂತ ಮೊದಲು ಆಗಬಹುದು ಎಂದು ಕಾರಣ ಸಮೇತ ಪ್ರತಿಪಾದಿಸಿದ್ದರು. ವಿವಿಧ ಓದುಗಳು, ಆಯಾ ಕಾಲ/ದೇಶಗಳ ಕಾರ್ಮಿಕ ಚಳುವಳಿಗಳ ಅನುಭವ ಮತ್ತು ಸೈದ್ಧಾಂತಿಕ ವಿಕಾಸಗಳನ್ನು ಮಂಡಿಸುವ ಮುನ್ನುಡಿಗಳು ಬಂದಿವೆ. ಅವುಗಳನ್ನು ಅಧ್ಯಯನ ಮಾಡುವುದು ಸೂಕ್ತ ಎಂದು ಕಾ.ಎಂ.ಎ.ಬೇಬಿ ಅವರು ಸಲಹೆ ಮಾಡಿದರು. ದಮನ, ಶೋಷಣೆ, ಹಸಿವು, ಅಸಮಾನತೆಗಳು ಇರುವವರೆಗೆ ಕಮ್ಯುನಿಸ್ಟ್ ಪ್ರಣಾಳಿಕೆ ಪ್ರಸ್ತುತವಾಗಿರುತ್ತದೆ. ಮುಂದಿನ ವರ್ಷ ಕಮ್ಯುನಿಸ್ಟ್ ಪ್ರಣಾಳಿಕೆಯ 175ನೇ ವಾರ್ಷಿಕವಾಗಿದ್ದು ಅದನ್ನು ಇನ್ನಷ್ಟು ವ್ಯಾಪಕವಾಗಿ ಕಮ್ಯುನಿಸ್ಟ್ ಕಾರ್ಯಕರ್ತರ ಮತ್ತು ದುಡಿಯುವ ಜನತೆಯ ಮಧ್ಯೆ ತೆಗೆದುಕೊಂಡು ಹೋಗಬೇಕೆಂದು ಕಾ. ಬೇಬಿ ಕರೆ ನೀಡಿದರು.

ಕಮ್ಯುನಿಸ್ಟ್ ಪ್ರಣಾಳಿಕೆಯ ತಮಗೆ ಇಷ್ಟವಾದ ವಿವಿಧ ಆಯ್ದ ಭಾಗಗಳನ್ನು ಸಂಗಾತಿಗಳಾದ, ಹುಳ್ಳಿ ಉಮೇಶ್ (ಬೆಂಗಳೂರು), ಪೃಥ್ವಿ (ಹಾಸನ), ಸುರೇಶ ಕಲ್ಲಗಾರ (ಉಡುಪಿ), ರವಿ (ಕಲ್ಬುರ್ಗಿ) ಓದಿದರು. ಲಕ್ಷ್ಮಿ ಕೆ.ಎಸ್. ಅವರು ಡಾ.ಸಿದ್ಧಲಿಂಗಯ್ಯ ಅವರು ಬರೆದ 'ಕಾರ್ಲ್ ಮಾರ್ಕ್ಸ್' ಕವನವನ್ನು ಹಾಡಿದರು. ಗೋಪಾಲಕೃಷ್ಣ ಅರಳಹಳ್ಳಿ ಅವರು ತಮ್ಮ 'ಕಾರ್ಲ್ ಮಾರ್ಕ್ಸ್' ಸ್ವರಚಿತ ಕವನ ಓದಿದರು. ಯಮುನಾ ಗಾಂವ್ಕರ್ ಅವರು 'ಕಾರ್ಲ್ ಮಾರ್ಕ್ಸ್' ಅವರ ಕುರಿತ ಸು.ರಂ.ಎಕ್ಕುಂಡಿ ಅವರ "ಕಿಟಕಿ ಮತ್ತು ಗಾಲಿಗಳು' ಮತ್ತು "ಕದವ ತಟ್ಟಿದಾಗ" ಕಥನ ಕವನಗಳನ್ನು ಓದಿದರು. ವಸಂತರಾಜ ಎನ್.ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಎಸ್.ವಿಮಲಾ ಅವರು ಸಭೆಯ ನಿರೂಪಣೆ/ನಿರ್ವಹಣೆ ಮಾಡಿದರು.

ಮಂಗಳೂರು, ಬೆಂಗಳೂರು, ಹಾಸನ, ಕಲ್ಬುರ್ಗಿ ಇತ್ಯಾದಿ ರಾಜ್ಯದ ಹಲವು ಭಾಗಗಳಿಂದ 'ಕೆಂಪು ಪುಸ್ತಕ ದಿನ'ವನ್ನು ಆಚರಿಸಿದ ವರದಿಗಳು ಬಂದಿವೆ.

## ಜಗದಗಲದಲ್ಲೂ 'ಚಿಂತನೆಗಳ ಸಮರ'ಕ್ಕೆ..... ಪುಟ 9 ರಿಂದ

ಓದಿದರೆ ಸಂಜೆ ಕಾರ್ಮಿಕ ಸಂಘಗಳ ಕಛೇರಿಗಳಲ್ಲಿ ಓದಿದರು. ನೇಪಾಳದ ಕಮ್ಯುನಿಸ್ಟ್ ನಾಯಕತ್ವದ ರೈತ ಸಂಘಟನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಓದಿದರೆ, ಬ್ರೆಜಿಲಿನಲ್ಲಿ ಭೂಹೀನ ಕಾರ್ಮಿಕರ ಚಳುವಳಿ (ಎಂ.ಎಸ್.ಟಿ) ಯವರು ಅವರು ವಶಪಡಿಸಿಕೊಂಡ ಕಾಲೋನಿಗಳಲ್ಲಿ ಓದಿದರು; ಹವಾನಾದಲ್ಲಿ ಅಧ್ಯಯನ ಶಿಬಿರಗಳಲ್ಲಿ ಪ್ರಣಾಳಿಕೆ ಓದಿದರೆ, ದಕ್ಷಿಣ ಆಫ್ರಿಕಾದಲ್ಲಿ ಮೊಟ್ಟ ಮೊದಲ ಬಾರಿಗೆ ಸೆಸೋತೋದಲ್ಲಿ ಓದಲಾಯಿತು. ಎಡ ಪ್ರಕಾಶಕರಾದ ಬ್ರೆಜಿಲಿನ 'ಎಕ್ಸ್‌ಪ್ರೆಸ್ಸಾಓ ಪಾಪ್ಯುಲರ್', ಅರ್ಜಂಟೈನಾದ 'ಬತಲ್ಲಾ ಡೆ ಐಡಿಯಾಸ್' ಮತ್ತು ದಕ್ಷಿಣ ಆಫ್ರಿಕಾದ 'ಇಂಕಾನಿ ಬುಕ್ಸ್' ಈ ಪ್ರಯತ್ನದಲ್ಲಿ ಭಾಗಿಯಾದರು.

ಅಲ್ಲಿಯವರೆಗೂ ಮಾರ್ಕ್ಸ್ ವಾದಿ ಸಾಹಿತ್ಯಗಳನ್ನೇ ಓದದವರು ಅನೇಕ ಕಡೆಗಳಲ್ಲಿ ಮೊದಲ ಬಾರಿಗೆ ಮಾರ್ಕ್ಸ್ ಪುಸ್ತಕ ತೆರೆದು ಓದಿದರು, ಆ ನಂತರದಲ್ಲಿ ಮಾರ್ಕ್ಸ್ ವಾದಿ ಸಾಹಿತ್ಯ ಅಧ್ಯಯನ ಕೂಟಗಳನ್ನು ಪ್ರಾರಂಭಿಸಿದರು.

**2021ರಲ್ಲಿ..**

2021 ರಲ್ಲಿ ಕೋವಿಡ್ 19 ರ ಮಹಾಸೋಂಕಿನಿಂದಾಗಿ ಕೆಂಪು ಪುಸ್ತಕಗಳ ದಿನಾಚರಣೆಯನ್ನು ಆನ್ ಲೈನಿನಲ್ಲಿ ನಡೆಸಲಾಯಿತು. ಕೆಂಪು ಪುಸ್ತಕ ದಿನಾರಣೆಯ ಉತ್ಸಾಹ ಸ್ವಲ್ಪವೂ ಕುಂದಿರಲಿಲ್ಲ. ಸ್ಲೊವೇನಿಯಾದ ಜಲೋಜ್ಬಾ ಪ್ರಕಾಶಕ ಸಂಸ್ಥೆಯು 'ಕೆಂಪು ಪುಸ್ತಕಗಳ ದಿನ' ಎಂಬ ಸಿನಿಮಾವೊಂದನ್ನು ಬಿಡುಗಡೆ ಮಾಡಿತು, ಅದರಲ್ಲಿ ಅನೇಕ ಬರಹಗಾರರು ಪ್ರಣಾಳಿಕೆಯನ್ನು ಓದಿದರು; ಟರ್ಕಿಯಲ್ಲಿ 'ಯೋರ್ಡಮ್ ಕಿತಾಪ್' ತನ್ನ ಬರಹಗಾರರನ್ನು ಟರ್ಕಿ ಭಾಷೆಯಲ್ಲಿ ಓದುವಂತೆ ಮಾಡಿತು; ಅದೂ ಅಲ್ಲದೇ ಪೀಪಲ್ಸ್ ಡೆಮಾಕ್ರಾಟಿಕ್ ಪಕ್ಷದ (ಹೆಚ್.ಡಿ.ಪಿ) ಮುಖಂಡರೊಬ್ಬರಿಂದ ಪ್ರಣಾಳಿಕೆ ಕುರಿತ ಉಪನ್ಯಾಸವನ್ನು ಏರ್ಪಡಿಸಿತ್ತು. ಬ್ರೆಜಿಲಿನಲ್ಲಿ ಭೂಹೀನ ಕಾರ್ಮಿಕರ ಚಳುವಳಿ (ಎಂಎಸ್.ಟಿ) ತಮ್ಮ ಕ್ಯಾಂಪುಗಳಲ್ಲಿ ಪ್ರಣಾಳಿಕೆಯನ್ನು ಓದಿದರು. ಭಾರತದ ಕೇರಳದಲ್ಲಿ ಸಣ್ಣ ಸಣ್ಣ ಗುಂಪುಗಳು ದೈಹಿಕ ಅಂತರವನ್ನು ಕಾಯ್ದುಕೊಳ್ಳುತ್ತಾ ಪ್ರಣಾಳಿಕೆಯನ್ನು ಮಲಯಾಳಂ ಹಾಗೂ ಇಂಗ್ಲಿಷಿನಲ್ಲಿ ಓದಿದರು.

**2022 ರಲ್ಲಿ**

ಭಾರತದ ಮೂಲೆ ಮೂಲೆಗಳಲ್ಲಿ – ಅಸ್ಸಾಮಿನಿಂದ ಆರಂಭವಾಗಿ ಕರ್ನಾಟಕವನ್ನೂ ಒಳಗೊಂಡಂತೆ ತಮಿಳುನಾಡಿನವರೆಗೂ ಅವರವರ ಭಾಷೆಗಳಲ್ಲಿ ಓದುಗಾರಿಕೆ ಹಾಗೂ ಚರ್ಚೆಗಳ ಮೂಲಕ – ಕೆಂಪು ಪುಸ್ತಕ ದಿನಾಚರಣೆಯನ್ನು ಉತ್ಸಾಹದಿಂದ ಆಚರಿಸಲಾಯಿತು.

ಈ ಬಾರಿಯ – 2022 ರ – ಕೆಂಪು ಪುಸ್ತಕಗಳ ದಿನಾಚರಣೆಯ ವಿಶೇಷತೆಯೇನೆಂದರೆ ಕೇರಳದಲ್ಲಿ ರಾಜ್ಯದಾದ್ಯಂತ 35,000 ಸಭೆಗಳನ್ನು ನಡೆಸಿ ಇ.ಎಂ.ಎಸ್ ನಂಬೂದಿರಿಪಾಡ್ ಅವರ ಪುಸ್ತಕಗಳನ್ನು ಐದು ಲಕ್ಷಕೂ ಹೆಚ್ಚು ಜನ ಓದಿದರು. ಮಲಪ್ಪುರಂನ ಪೆರಿಂತಲ್ಮನ್ನ ಕಾಲೇಜುಗಳಲ್ಲಿ "ನಿಷೇಧಗಳ ಯುಗದಲ್ಲಿ ಸಾಹಿತ್ಯದ ಕದನ" (ಬ್ಯಾಟಲ್ ಆಫ್ ಲಿಟರೇಚರ್ ಇನ್ ದಿ ಎರಾ ಆಫ್ ಬ್ಯಾನ್) ಎಂಬ ಮೂರು ದಿನಗಳ ಪುಸ್ತಕೋತ್ಸವವನ್ನು ಏರ್ಪಡಿಸಿದ್ದರೆ, ಕೇರಳದ ಪುಕಾಸ (ಪುರೋಗಮನ ಕಲಾ ಸಾಹಿತ್ಯ ಸಂಘ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ನಡೆಸಿತು. ಫೆ.14–ಫೆ.21ರ ವರೆಗಿನ ಇಡೀ ವಾರವನ್ನು ಪ್ರತಿ ದಿನ ಒಂದು ಪುಸ್ತಕದ ಕುರಿತು ರಾಜ್ಯವ್ಯಾಪಿ ಆನ್ ಲೈನ್ ಭಾಷಣದ ಮೂಲಕ ಕೆಂಪು ಪುಸ್ತಕ ವಾರವನ್ನಾಗಿ ಆಚರಿಸಲಾಯಿತು.



Manifesto reading at Florestan Fernandes National School of the Landless Worker's Movement (MST) Guararema, Brasil

ವಿಜಯವಾಡ ಪುಸ್ತಕೋತ್ಸವದಲ್ಲಿ, 'ಪ್ರಜಾಶಕ್ತಿ ಪ್ರಕಾಶನ ಸಂಸ್ಥೆಯು "ಕಮ್ಯುನಿಸ್ಟ್ ಪ್ರಣಾಳಿಕೆ ಪುಸ್ತಕದ ಅಂಗಡಿ" ಯನ್ನು ತೆರೆದಿತ್ತು. ಅತ್ತ, ಮಹಾರಾಷ್ಟ್ರದಲ್ಲಿ ರಾತ್ರಿ ತರಗತಿಗಳು ನಡೆದು ರೈತ ಚಳುವಳಿಯ ಹಿಂದಿನ ದಿನಗಳನ್ನು ನೆನಪಿಸಿತು. ಸಿಪಿಐ(ಎಂ) ಮುಖಂಡರು ಆ ದಿನದ ಪ್ರಾಮುಖ್ಯತೆ ಬಗ್ಗೆ ಮಾತನಾಡಿದರು.

ಕೆಂಪು ಪುಸ್ತಕಗಳ ದಿನದ ನಸುಕಿನಲ್ಲಿ, ನವ–ಫ್ಯಾಸಿಸ್ಟರಾದ ಆರ್.ಎಸ್.ಎಸ್. ಕಾರ್ಯಕರ್ತರು ತಲ್ಲಶೇರಿ (ಕೇರಳದ ಕಣ್ಣೂರಿನ) ಯಲ್ಲಿ ಸಂಗಾತಿ ಪುನ್ನೋಲ್ ಹರಿದಾಸ ಅವರನ್ನು ಇರಿದು ಹತ್ಯೆ ಮಾಡಿದರು. ಮೀನುಗಾರರಾಗಿದ್ದ ಕಾಂ. ಹರಿದಾಸ್ ಸಿಪಿಐ(ಎಂ)ನ ಕಾರ್ಯಕರ್ತರಾಗಿದ್ದರು. "ನನ್ನ ಅತ್ಯಂತ ಪ್ರಿಯವಾದ ಕೆಂಪು ಪುಸ್ತಕಗಳ ದಿನದಂದು ಅದರ ಬಗ್ಗೆ ನಾನು ಬರೆಯಬೇಕಿತ್ತು" ಎಂದ ಸಂಸದರೂ ಹಾಗೂ ಸಿಪಿಐ(ಎಂ) ಮುಖಂಡರೂ ಆದ ಕಾಂ.ವಿ.ಶಿವದಾಸನ್ "ಆದರೆ, ನಮ್ಮ ಸಂಗಾತಿಯೊಬ್ಬರನ್ನು ಆರ್.ಎಸ್.ಎಸ್ ಭಯೋತ್ಪಾದಕರು ಹತ್ಯೆ ಮಾಡಿದ್ದರ ಬಗ್ಗೆ ಬರೆಯಬೇಕಾದ ಸನ್ನಿವೇಶ ಉದ್ಭವವಾಗಿದೆ." ಎಂದು ಮರುಗಿದರು. ಒಂದು ಕಡೆಯಲ್ಲಿ ಪುಸ್ತಕಗಳು ಹಾಗೂ ಮನುಷ್ಯತ್ವದ ಗಡಿಗಳನ್ನು ವಿಸ್ತರಿಸಬೇಕಾದ ಹಂಬಲ, ಕೆಂಪು ಪುಸ್ತಕಗಳು ಮತ್ತು ಎಡ ಸಂಸ್ಕೃತಿ; ಮತ್ತೊಂದೆಡೆಯಲ್ಲಿ ಹಿಂಸೆ ಮತ್ತು ರಕ್ತಪಾತ, ಬರ್ಬರತೆಯ ಪಾಶವೀಯತೆ. ಇದು ಇಂದಿನ ವಾಸ್ತವ!

ಭಾರತದ ತುಂಬಾ ಎಡ ವಿದ್ಯಾರ್ಥಿ, ರೈತ ಕಾರ್ಮಿಕರ ಸಂಘಟನೆಗಳ ಕೆಲವು ಘಟಕಗಳು ಕೆಂಪು ಪುಸ್ತಕ ದಿನವನ್ನು ಆಚರಿಸಿದವು

**ಜಗದಗಲದಲ್ಲೂ ಕೆಂಪು ಪುಸ್ತಕ ದಿನ**

ಕೆಂಪು ಪುಸ್ತಕದ ದಿನಕ್ಕೆ ಜಾಗತಿಕ ಪೋಸ್ಟರ್ ರಚನಾ ಸ್ಪರ್ಧೆ ಈ ಬಾರಿಯ ವಿಶೇಷವಾಗಿತ್ತು. ಫೆ.20ರಂದು ಸ್ಪರ್ಧೆಗೆ ಬಂದ ಗಮನಾರ್ಹ ಪೋಸ್ಟರುಗಳ ಆನ್ ಲೈನ್ ಪ್ರದರ್ಶನ (redbooksday.org/Art) ಏರ್ಪಡಿಸಲಾಗಿತ್ತು. (ಆ ಕೆಲವು ಪೋಸ್ಟರುಗಳ ಚಿತ್ರಗಳು ಇಲ್ಲಿವೆ)

ಅಮೆರಿಕಾದ ನ್ಯೂಯಾರ್ಕ್ ನಗರದಲಿ ಪೀಪಲ್ಸ್ ಫೋರಂ ಅಡಿಯಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಓದುವ ಹಾಗು ಅದರ ಕುರಿತು ಚರ್ಚೆ ಹಾಗೂ ಸಂವಾದಗಳನ್ನು ಏರ್ಪಡಿಸಲಾಗಿತ್ತು. ಚಲನಚಿತ್ರ ಪ್ರದರ್ಶನ, ಮ್ಯಾನಿಫೆಸ್ಟೋದ ಹೊರ ಮುಖಪುಟದ ವಿನ್ಯಾಸ ರಚಿಸುವುದು, ಗೀತಗಾಯನ, ಹೀಗೆ ವಿವಿಧ ರೀತಿಯಲ್ಲಿ ಆಚರಿಸಿದರು. ಆದರೆ ರೋಡ್ ದ್ವೀಪದ ಪ್ರೊವಿಡೆನ್ಸಲ್ಲಿ ಪ್ರಣಾಳಿಕೆ ಓದುವುದನ್ನು ನವ–ಫ್ಯಾಸಿಸ್ಟ್ ಗುಂಪೊಂದು ಬಂದು ಚದುರಿಸಿತು. ಕಪ್ಪು ಬಟ್ಟೆ ಧರಿಸಿದ್ದ ಬಿಳಿಯರ ಆ ಗುಂಪು ದಾಂಧಲೆ ಮಾಡಿತು. ಇಟಲಿಯ ನೇಪಲ್ಸ್ ನಲ್ಲಿ ಎಡ ಪಕ್ಷ ಪೊಟೆರ ಅಲ್ ಪೊಪ್ಪೊಲೊ ಲೆನಿನ್ ಅವರ 'ವಾಟ್ ಇಸ್ ಟುಬಿ ಡನ್' (ಮುಂದೇನು ಮಾಡಬೇಕು) ಪುಸ್ತಕ ಕುರಿತ ಚರ್ಚೆ ಏರ್ಪಡಿಸಿತ್ತು. ದಕ್ಷಿಣ ಆಫ್ರಿಕಾದ ಡರ್ಬನ್ ನಲ್ಲಿ ಕೊಳಚೆ ಪ್ರದೇಶಗಳ ಜನರ ಚಳುವಳಿ (ಶ್ಯಾಕ್ ಡ್ವೆಲ್ಲರ್ಸ್ ಮೂವ್ಮೆಂಟ್) ಯ ಸದಸ್ಯರು ಸಾಮೂಹಿಕವಾಗಿ ಪ್ರಣಾಳಿಕೆ ಓದುವ ಕಾರ್ಯಕ್ರಮ ನಡೆಸಿದರು. 'ಭೂಮಿ ಮತ್ತು ಸ್ವಾಯತ್ತತೆಗಾಗಿ ಯಾವಾಗಲೂ ರಕ್ತ ಹರಿಸಿದ್ದೇವೆ, ಆದರೆ ಹೋರಾಟವೆಂದರೆ ಕಷ್ಟ, ಕೋಟಲೆ ಹಂಚಿಕೊಳ್ಳುವುದು ಮಾತ್ರವಲ್ಲ, ಅದು ಸಂತೋಷವನ್ನು ಹಂಚಿಕೊಳ್ಳುವುದು ಕೂಡ' ಎಂದು ಸಂಘಟನೆ ಘೋಷಣೆ ಮಾಡಿತು. ಹಾಗೆಯೇ ದಕ್ಷಿಣ ಆಫ್ರಿಕಾದ 'ನ್ಯಾಷನಲ್ ಯೂನಿಯನ್ ಆಫ್ ಮೆಟಲ್ ವರ್ಕರ್ಸ್' ಕೂಡ ಓದುವ ಕಾರ್ಯಕ್ರಮ ನಡೆಸಿತು. ಇಂಡೋನೇಶಿಯಾ, ಟರ್ಕಿ, ಬ್ರೆಜಿಲ್ ಹಾಗೂ ವೆನೆಜುವೆಲಾದಲ್ಲಿ ಚಲನಚಿತ್ರ ಪ್ರದರ್ಶನ, ಗೀತಗಾಯನ, ಹಲವಾರು ಭಾಷೆಗಳಲ್ಲಿ ಕೆಂಪು ಪುಸ್ತಕಗಳ ದಿನಾಚರಣೆ ನಡೆಸಿದರು. ಸಾಮಾಜಿಕ ಮಾಧ್ಯಮಗಳಲ್ಲಿ #RedBooksDay ಹ್ಯಾಶ್ ಟ್ಯಾಗ್ ರಾರಾಜಿಸಿತು.

## ತೀರ್ಪೊಂದು ಬರಬಹುದು...... ಪುಟ 6 ರಿಂದ

ಜಾರಿಗೆ ತರುವ ಒಂದು ಅನುಕೂಲ ಸಿಂಧು ರಾಜಕಾರಣ ಮತ್ತೆ ಕೆಲಸ ಮಾಡಿತು. ಅದರ ಪ್ರಕಾರ ಸಿ.ಡಿ.ಸಿ ನಿಗದಿ ಪಡಿಸಿದ ಸಂಸ್ಥೆಗಳು ಎಂದು ಸ್ಪಷ್ಟವಾಗಿಯೇ ಇದ್ದರೂ ಶಾಲೆಗಳಲ್ಲಿ ಕಾಲೇಜುಗಳಲ್ಲಿ, ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೂಡಾ ಹಿಜಾಬ್ ಧರಿಸಿದ ಹೆಣ್ಣುಮಕ್ಕಳನ್ನು ಗೇಟಿನೊಳಗೆ ಬಾರದಂತೆ ತಡೆಯಲಾಯಿತು. ಮಾಧ್ಯಮಗಳಲ್ಲಿ ವರದಿಯಾದಂತೆ ಅಲ್ಪಸಂಖ್ಯಾತ ಸಂಸ್ಥೆಗಳು ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ಕೂಡಾ ಹಿಜಾಬ್ ಧರಿಸಿ ಬರದಂತೆ ಮಕ್ಕಳನ್ನು ಪ್ರತಿಬಂಧಿಸಲಾಯಿತು. ಇದು ಕೇವಲ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಂಗತಿಯಾದರೂ ಶಿಕ್ಷಕಿಯರನ್ನೂ ಒತ್ತಡಿಸಲಾಯಿತು. ಇದಾವ ಪರಿ. ನೂರಾರು ಜನ ಮುಸ್ಲಿಂ ವಿದ್ಯಾರ್ಥಿನಿಯರು ಪ್ರಾಕ್ಟಿಕಲ್ ಪರೀಕ್ಷೆ ಬರೆಯಲಾರದ ವಾತಾವರಣ ಸೃಷ್ಟಿಯಾಯಿತು. ಕೇಸರೀ ಶಾಲಿನ ಪಡೆ ಕೊಡಬಹುದಾದ ತೊಂದರೆಗೆ ಹೆದರಿದ ಖಾಸಗೀ ಆಡಳಿತ ಮಂಡಳಿ ಮುಸ್ಲಿಂ ಯುವತಿಯರ ಜೊತೆ ಸಂಧಾನ ಪ್ರಯತ್ನಗಳನ್ನೂ ನಡೆಸಿದ ವರದಿಗಳಿವೆ. ಎಂದರೆ ಆಡಳಿತ ಹಿಡಿದವರಿಗೆ ಸಂವಿಧಾನಕ್ಕಿಂತ ಭಗವದ್ವಜ 'ಪವಿತ್ರ' ಎನಿಸಿದಾಗ ಹುಟ್ಟುವ ಭಯವೇ ಇದು.

ಇಂಥಹ ಭಯೋತ್ಪಾದನೆಗೆ ದಂಡನೆ ಸಿಗಬೇಕು, ಜನತಂತ್ರದ ಮತದಾನದ ದಂಡ ಬಳಸಿ. ಇಡೀ ರಾಜ್ಯದಲ್ಲಿ ಇಂಥಹ ಕಳವಳಕಾರೀ ಸನ್ನಿವೇಶವಿದೆ. ನರಗುಂದದಲ್ಲಿ ಹೆಣ ಉರುಳಿದೆ, ಶಿವಮೊಗ್ಗದಲ್ಲಿ ತಮ್ಮದೇ ಭಾಷೆ ಮಾತಾಡುತ್ತಿದ್ದ ಯುವಕನ ಪ್ರಾಣ ಹೋಗಿದೆ, ಅದನ್ನೇ ಬಂಡವಾಳ ಮಾಡಿಕೊಳ್ಳಲು ಹೊರಟ ಅಸಹ್ಯ ಪ್ರದರ್ಶನ ಕಣ್ಣಿಗೆ ರಾಚುತ್ತಿದೆ. ಹೀಗಿರುವಾಗ ಗಾಂಧಿಯನ್ನು ಕೊಂದ ಅಪರಾಧದ ಪಟ್ಟಿಯಲ್ಲಿರುವ ಹೆಸರಿನ ಹಿಂದೆ ವೀರನೆಂಬ ವಿಶೇಷಣ ಬಳಸಿ ಶುಭಾಶಯ ಹಾಕುವ ಮೂಲಕ ಮತ್ತೇನು ಸಂದೇಶ ರವಾನಿಸಿದರು ರಾಜ್ಯದ ಮುಖ್ಯಮಂತ್ರಿಗಳು? ಕೆಲವು ದಿನಗಳ ಹಿಂದೆ ಕ್ರಿಯೆಗೆ ಪ್ರತಿಕ್ರಿಯೆ ಎಂಬ ಸಂದೇಶ ರವಾನಿಸಿ ನರಬೇಟೆಗೆ ಪರವಾನಗಿ ಕೊಟ್ಟಿದ್ದಾಯ್ತು. ಮುಂದೇನು ನಡೆಯಲಿದೆ? ರಾಜ್ಯದ ಜನರ ಹಿತ ಕಾಯಲು ಅಗತ್ಯವಾದ ಕ್ರಮಗಳನ್ನು ಕೈಗೊಂಡರೆ ಜನ ಮೆಚ್ಚುತ್ತಿದ್ದರು. ಅದು ಸಾಧ್ಯವಾಗದಾಗ ಹೆಣ ಉರುಳಿಸಿ ರಾಜಕಾರಣ ಮಾಡುವುದನ್ನು ಯಾಕೆ ಯಾರಾದರೂ ಒಪ್ಪಬೇಕು?

ಇದೇ ವೇಳೆಗೆ ಇಷ್ಟು ಹಿಂದುಳಿದ ಸ್ಥಿತಿಯಲ್ಲಿ ತಾನಿರುವುದೇ ತನ್ನ ಸಮುದಾಯದ ಮೇಲಿನ ದಬ್ಬಾಳಿಕೆಗೆ ಕಾರಣವೆಂಬುದನ್ನು ಅರಿತು ಮುಂದುವರೆಯಲು ಅಗತ್ಯ ಸಾಧನ ಶಿಕ್ಷಣವೆಂಬ ಸರಳ ಸತ್ಯಕ್ಕೆ ಮುಸ್ಲಿಂ ಸಮುದಾಯವೂ ತೆರೆದುಕೊಂಡಲ್ಲಿ ಪರಿಸ್ಥಿತಿ ಬದಲಾಗಬಹುದು. ಪುರುಷ ಪ್ರಧಾನ ಪಾಳೆಯಗಾರಿ ಮೌಲ್ಯಗಳು ಮೇಳೈಸಿರುವ ಧಾರ್ಮಿಕ ಮೂಲಭೂತವಾದ ನಮ್ಮ ಹಕ್ಕು, ಅಸ್ತಿತ್ವ, ಅಸ್ಮಿತೆಗಳನ್ನು ಹೊಸಕಿ ಹಾಕಲು ಒಂದಿಲ್ಲೊಂದು ಪ್ರಯತ್ನ ಮಾಡುವಾಗ ಅದಕ್ಕೆ ಸವಾಲೆಸೆಯಲು ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ ಅತ್ಯಗತ್ಯವೆಂದು ಅರ್ಥ ಮಾಡಿಕೊಳ್ಳಲಾಗಬೇಕು. ಹೈಕೋರ್ಟ್ ಪೀಠ ತೀರ್ಪು ಕೊಡಲಿದೆ. ಬರುವ ತೀರ್ಪು ಏನೇ ಇದ್ದರೂ ಈ ಮಧ್ಯೆ ಪರೀಕ್ಷೆಗಳಿಂದ ವಂಚಿತರಾದ, ಅನ್ಯಾಯವಾಗಿ ಹೊರಗುಳಿದು ಹಾಜರಿ ಕಡಿಮೆ ಮಾಡಿಕೊಂಡ ವಿದ್ಯಾರ್ಥಿನಿಯರನ್ನು ಸಮಾನವಾಗಿ ನೋಡುವ ಮತ್ತು ಸಂವಿಧಾನ ಬದ್ಧವಾಗಿ ನಡೆದುಕೊಳ್ಳುವ ಜವಾಬ್ದಾರಿ ಸರಕಾರದ್ದು. ಇದು ಅದರ ಹೊಣೆಗಾರಿಕೆ.

## ಭೂಹೀನರಿಗೆ ಕೃಷಿಭೂಮಿ ಹಂಚ ಬೇಕು..... ಪುಟ 8 ರಿಂದ

ಸರ್ವೋದಯ ಅಧ್ಯಯನ ಪೀಠ"ವನ್ನು ಸ್ಥಾಪಿಸಬೇಕು.

- ನಮ್ಮ ನಾಡಿನ ಹೆಮ್ಮೆಯಾದ ಕೋಲಾರ ಚಿನ್ನದ ಗಣಿಯ ಕಾರ್ಮಿಕರನ್ನು ಸಂಘಟಿಸಿ, ಕಾರ್ಮಿಕರ ಹಕ್ಕುಗಳ ಜೊತೆಗೆ, ದೇಶದ ಸ್ವಾತಂತ್ರ್ಯ ಚಳುವಳಿಗೆ ಕಾರ್ಮಿಕರನ್ನು ದೊಡ್ಡ ಸಂಖ್ಯೆಯಲ್ಲಿ ಅಣಿನೆರಿಸಿದ ಮತ್ತು 1952 ರಲ್ಲಿ ಜಿಲ್ಲೆಯಿಂದ ಕಾರ್ಮಿಕ ಮುಖಂಡರಾಗಿ ಶಾಸನ ಸಭೆಗೆ ಆಯ್ಕೆಯಾದ ಶ್ರೀ ಕೆ.ಎಸ್. ವಾಸನ್‌ರ ಸ್ಮರಣೆಯಲ್ಲಿ "ಶ್ರೀ ಕೆ.ಎಸ್. ವಾಸನ್ ದಲಿತ ಕಾರ್ಮಿಕರ ಸ್ಥಿತಿಗತಿ ಕುರಿತು ಅಧ್ಯಯನ ಪೀಠ"ವನ್ನು ಸ್ಥಾಪಿಸಬೇಕು.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗುತ್ತಿವೆ. ಈ ಕಾಲಾವಧಿಯಲ್ಲಿ ವೈಜ್ಞಾನಿಕ, ಆರ್ಥಿಕ ಇತ್ಯಾದಿ ಕ್ಷೇತ್ರಗಳಲ್ಲಿ ಹಲವು ಸಾಧನೆಗಳನ್ನು ಮಾಡುತ್ತಾ ಬಂದಿದ್ದೇವೆ. ಮಾಡಬೇಕಿರುವುದು ಇನ್ನೂ ತುಂಬಾ ಇದೆ. ಆದರೆ ದೇಶದ ಭವ್ಯ ಪರಂಪರೆ ಬಗ್ಗೆ ನಾವು ಮಾತನಾಡುವಾಗ, ಅಸ್ಪೃಶ್ಯತೆ, ಜಾತಿತಾರತಮ್ಯ, ಜಾತಿ ದಬ್ಬಾಳಿಕೆಗಳು ನಮ್ಮ ಬಾಯನ್ನು ಕಟ್ಟಿ ಹಾಕುತ್ತವೆ. ಈ ಕ್ಷೇತ್ರದಲ್ಲಿ ಏನೂ ಪ್ರಗತಿ ಆಗಿಲ್ಲ ಎನ್ನುವುದು ನನ್ನ ಅಭಿಪ್ರಾಯವಲ್ಲ, ಆದರೆ ಆಗಿರುವುದು ತೀರ ಕಡಿಮೆ. ಈಗಲೂ ಪ್ರಯತ್ನಗಳು ನಡೆದಿವೆ. ಇಂತಹ ಪ್ರಯತ್ನಗಳ ಭಾಗವಾಗಿಯೇ ಪರಿಶಿಷ್ಟ ಜಾತಿಗಳ ಉಪ ಯೋಜನೆ(ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ(ಟಿಎಸ್‌ಪಿ) ಗಳು ಜಾರಿಯಾಗಿ ಇತ್ತೀಚಿಗೆ 25,000–30,000 ಕೋಟಿರೂ. ಗಳನ್ನು ಇದಕ್ಕಾಗಿ ವಾರ್ಷಿಕವಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಮೀಸಲಿಡಲಾಗುತ್ತಿದೆ. ಆದರೆ ಈ ಹಣ ಸರಿಯಾದ ರೀತಿಯಲ್ಲಿ ಖರ್ಚು ಆಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಪರಿಶಿಷ್ಟ ಜಾತಿಯ ಜನಸಂಖ್ಯೆಯಿರುವ ಮತ್ತು ಶ್ರೀ ಕೆ.ಸಿ. ರೆಡ್ಡಿರವರ ತಾಲ್ಲೂಕು ಆಗಿರುವ 'ಕೆ.ಜಿ.ಎಫ್. ನ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್' ನ್ನು ಈ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಈ ಪ್ಯಾಕೇಜ್ ಕೇವಲ 4–5 ವರ್ಷಗಳಲ್ಲಿ ಕೆ.ಜಿ.ಎಫ್.ನ್ನು 'ಮಾದರಿ' ಕ್ಷೇತ್ರವಾಗಿ ತೋರಿಸಲು ಸಾಧ್ಯವಾಗುವ ರೀತಿಯಲ್ಲಿ 'ಹಣಕಾಸು ನೀಡಿಕೆ' ಮತ್ತು 'ಅಭಿವೃದ್ಧಿಯ ನೀಲಿ ನಕ್ಷೆ' ತಯಾರಿಸ ಬೇಕೆಂದು ಆಗ್ರಹಿಸುತ್ತೇವೆ. ಈ ಯೋಜನೆಯ ಬೇರೆಲ್ಲ ಕಾರ್ಯಗಳ ಜೊತೆಗೆ ಚಿನ್ನದ ಗಣಿಯನ್ನು ಪುನರ್ ಆರಂಬಿಸುವುದು, ಚಿನ್ನದ ಗಣಿಯ ಕಾರ್ಮಿಕರ ವಸತಿ ಪ್ರಶ್ನೆಗಳು, ಅವರ ಮಕ್ಕಳ ಉದ್ಯೋಗದ ಪ್ರಶ್ನೆಗಳಿಗೆ ಪರಿಹಾರ ನೀಡುವಂತಾಗಬೇಕೆಂದು ನಮ್ಮ ಆಗ್ರಹ. ಗಣಿ ಕಾರ್ಮಿಕರ ಬೆವರಿನಿಂದ ತೆಗೆದ 'ಚಿನ್ನ'ದ ಮಾರಾಟದಿಂದ ದೊಡ್ಡ ಪ್ರಮಾಣದ ಆದಾಯವನ್ನು ಗಳಿಸಿರುವ ಕೇಂದ್ರ ಸರ್ಕಾರದಿಂದಲೂ ಕೆ.ಜಿ.ಎಫ್. ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ 'ಹಣಕಾಸಿನ' ಸಂಪನ್ಮೂಲವನ್ನು ಪಡೆಯಲು ರಾಜ್ಯ ಸರ್ಕಾರ ವಿಶೇಷವಾದ ಪ್ರಯತ್ನಗಳನ್ನು ಮಾಡಬೇಕು.

ಅಭಿವೃದ್ಧಿ'ಗೆ 'ಶಾಂತಿ' 'ಸಾಮರಸ್ಯ'ದ ಬದುಕು ತುಂಬಾ ಮುಖ್ಯವೆಂದು, ಹೀಗಾಗಿ "ಶಾಂತಿ ಮತ್ತು ಸಾಮರಸ್ಯ'ದ ಬದುಕಿಗೆ ಬೆಂಕಿ ಹಚ್ಚುತ್ತಿರುವ ಎಲ್ಲಾ ರೀತಿಯ ಕೋಮುವಾದಿ ಶಕ್ತಿಗಳನ್ನು ದಿಕ್ಕರಿಸಬೇಕೆಂದು ವಿನಂತಿಸುತ್ತೇನೆ ಮತ್ತು ಕೋಲಾರ ಜಿಲ್ಲೆಯ ಘನತೆ, ಗೌರವಗಳನ್ನು ರಕ್ಷಿಸುವ, ಬಲಪಡಿಸುವ ಎಡ, ಜಾತ್ಯತೀತ, ಪ್ರಗತಿಪರ ಶಕ್ತಿಗಳಿಗೆ ಜನತೆ ಬೆಂಬಲಿಸಬೇಕೆಂದು ಕೋರುತ್ತೇನೆ.

# 28-29 ಮಾರ್ಚ್ 2022 ಅಖಿಲ ಭಾರತ ಸಾರ್ವತ್ರಿಕ ಮುಷ್ಕರದತ್ತ

## ಆಟೊ–ಟ್ಯಾಕ್ಸಿ ಚಾಲಕರ ಜೀವನೋಪಾಯದ ರಕ್ಷಣೆಗೆ ನವ–ಉದಾರವಾದಿ ನೀತಿಗಳ ವಿರುದ್ಧ ಹೋರಾಡಿ!

ದೇಶದಾದ್ಯಂತ ಇಂದು ಆಟೊ ರಿಕ್ಷಾ ಮತ್ತು ಟ್ಯಾಕ್ಸಿಗಳು ಜನತೆಯು ಸಾಮಾನ್ಯವಾಗಿ ಬಳಕೆ ಮಾಡುವ ಸಾರಿಗೆ ಸೌಕರ್ಯವಾಗಿದೆ. ಒಂದಾನೊಂದು ಕಾಲದಲ್ಲಿ ಪಟ್ಟಣ ಮತ್ತು ನಗರಗಳಿಗೆ ಸೀಮಿತವಿದ್ದ ಆಟೊ–ಟ್ಯಾಕ್ಸಿಗಳು ಇಂದು ಹಳ್ಳಿಯಿಂದ ಹಳ್ಳಿಗೆ, ಹಳ್ಳಿಯಿಂದ ಹತ್ತಿರದ ಪಟ್ಟಣಕ್ಕೆ ಜನರನ್ನು ಹೊತ್ತು ಓಡಾಡುವುದು ಕಂಡುಬರುತ್ತದೆ. ಹಳ್ಳಿಯ ಬಡಜನತೆಗೆ ಸ್ಥಳೀಯ ಯುವಕರು ಓಡಿಸುವ "ಶೇರ್ಡ್ ಆಟೋ" ಸುಗಮ ಸಾರಿಗೆಯಾಗಿ, ಕೈಗೆಟುಕುವ ಸಂಚಾರ ವಿಧಾನವಾಗಿ ಮಾರ್ಪಟ್ಟಿದೆ. ನಗರಗಳಲ್ಲಂತೂ ಮೊದಲ ಮತ್ತು ಕೊನೆಯ ಹಂತದ ಪ್ರಯಾಣದದಲ್ಲಿ ಆಟೊ–ಟ್ಯಾಕ್ಸಿಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಮೊದಲ ಮತ್ತು ಕೊನೆಯ ಹಂತದಲ್ಲಿ ಪರಿಣಾಮಕಾರಿ ಸಾರ್ವಜನಕ ಸಾರಿಗೆ ಸೌಕರ್ಯಗಳ ಅಲಭ್ಯತೆಯಿಂದಾಗಿ, ನಗರದಲ್ಲಿ ನೂರಾರು ಸಾವಿರ ಜನರು ತಮ್ಮ ನಿತ್ಯ ಸಂಚಾರಕ್ಕಾಗಿ ಆಟೊ ರಿಕ್ಷಾಗಳನ್ನು ಅವಲಂಬಿಸಿದ್ದಾರೆ.

ಅದೇ ರೀತಿ, ಖಾಸಗಿ ವಾಹನಗಳ ದೊಡ್ಡ ಪಡೆಯನ್ನು ಹೊಂದಿರುವ ಸಾರಿಗೆ ಸೇವೆಗಳು ಎಲ್ಲೆಡೆ ತಲೆಯೆತ್ತಿವೆ.

**ನವ ಉದಾರವಾದಿ ವ್ಯವಸ್ಥೆಯಡಿ ಖಾಯಂ ಉದ್ಯೋಗವನ್ನು ಗಳಿಸುವ ಸಾಧ್ಯತೆಯು ನೆಲಕಚ್ಚಿರುವ ಸಂದರ್ಭದಲ್ಲಿ, ಇಂದು ಹೆಚ್ಚೆಚ್ಚು ಯುವಕರು ಆಟೊ –ಟ್ಯಾಕ್ಸಿ ಓಡಿಸಿ ತಮ್ಮ ಜೀವನೋಪಾಯ ಕಂಡುಕೊಳ್ಳುತ್ತಿದ್ದಾರೆ. ನಿರುದ್ಯೋಗದ ಸ್ಥಿತಿಯು ಹದಗೆಟ್ಟಿರುವುದರಿಂದ, ಪದವೀಧರರು, ಸ್ನಾತಕೋತ್ತರ ಪದವೀಧರರಲ್ಲದೆ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುವವರೂ ಈ ರಂಗಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸಿದ್ದಾರೆ.**

ಸರಿಸುಮಾರು 90%ಕ್ಕಿಂತ ಹೆಚ್ಚಿನ ಆಟೊ ಚಾಲಕರು ಈ ಕೆಲಸವನ್ನು ಸ್ವಯಂ ಉದ್ಯೋಗವನ್ನಾಗಿ ಸ್ವೀಕರಿಸಿದ್ದಾರೆ. ತಮ್ಮ ವಾಹನಗಳಿಗೆ ತಾವೇ ಮಾಲೀಕರು, ತಾವೇ ಚಾಲಕರೂ ಆಗಿದ್ದಾರೆ. ಇವರಲ್ಲಿ ಬಹುತೇಕರು ಖಾಸಗಿ ಹಣಕಾಸಿನ ಸಂಸ್ಥೆಗಳಿಂದ ಸಾಲ ಪಡೆದು ತಮ್ಮ ವಾಹನಗಳನ್ನು ಖರೀದಿಸಿದ್ದಾರೆ. ಸರ್ಕಾರವು ಇವರಿಗೆ ಯಾವುದೇ ಹಣಕಾಸಿನ ನೆರವನ್ನೂ ನೀಡಿಲ್ಲ ಮತ್ತು ವಾಹನಗಳ ಖರೀದಿಗೂ ಯಾವುದೇ ಸಾಲ ಸೌಲಭ್ಯವನ್ನೂ ವ್ಯವಸ್ಥೆ ಮಾಡಿಲ್ಲ.

**ಆದರೆ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಆಟೊ–ಟ್ಯಾಕ್ಸಿ ಚಾಲಕರಿಗೆ ಖರ್ಚಿನ ಹೆಚ್ಚಳ, ಗಳಿಕೆಯ ಇಳಿಕೆಯು ಸಾಮಾನ್ಯ ಅನುಭವವಾಗಿದೆ.**

**ಡೀಸೆಲ್ ಬೆಲೆಯೇರಿಕೆ:** ನವ ಉದಾರವಾದಿ ಆರ್ಥಿಕ ನೀತಿಗಳು ಜಾರಿಯಾದ ಬಳಿಕ, ಡೀಸೆಲ್ ಬೆಲೆಯ ನಿಯಂತ್ರಣವನ್ನು ತೆಗೆದು ಹಾಕಲಾಗಿ, ದಿನನಿತ್ಯವೆಂಬಂತೆ ಅದರ ದರವನ್ನು ಪರಿಷ್ಕರಿಸಲಾಗುತ್ತಿದೆ. ಈ ದರವು ಮೋದಿ ಆಡಳಿತಾವಧಿಯಲ್ಲಿ ವಿಪರೀತವಾಗಿ ಏರಿಕೆಯಾಗಿದೆ. ಅದರಲ್ಲೂ 2019ರ ಬಳಿಕ ಡೀಸೆಲ್ ಬೆಲೆಯು ರಾಕೆಟ್ ವೇಗದಲ್ಲಿ ಏರುತ್ತಿದೆ.

**ವಿಮಾ ಪ್ರೀಮಿಯಂ ಏರಿಕೆ:** ಅದೇ ರೀತಿ, ಪ್ರತಿ ವರ್ಷವೂ ವಿಮಾ ಪ್ರೀಮಿಯಂ ಹೆಚ್ಚುತ್ತಾ ಹೋಗುತ್ತದೆ. ಇಲ್ಲಿ ಕೂಡ ಕಾಲಾಂತರದಲ್ಲಿ ಬಂದಂತಹ ಆಳುವ ಸರ್ಕಾರಗಳು ಮುಂದುವರಿಸಿಕೊಂಡ ಬಂದಂತಹ ನವ ಉದಾರವಾದಿ ಆರ್ಥಿಕ ನೀತಿಗಳು ಆಟೋ ಕಾರ್ಮಿಕರನ್ನು ನಿಷ್ಕರುಣೆಯಿಂದ ಹಿಂಡಿ ಹಿಪ್ಪೆ ಮಾಡುತ್ತಿವೆ. ಸರ್ಕಾರವು ಸಾಮಾನ್ಯ ವಿಮೆ ಉದ್ಯಮವನ್ನು ಖಾಸಗಿ ಹಣಕಾಸು ಬಂಡವಾಳ ಹೂಡಿಕೆಗೆ ಮುಕ್ತವಾಗಿ ತೆರೆದಿಟ್ಟಿದೆ. ಏಪ್ರಿಲ್ ಆಟೊ ರಿಕ್ಷಾಗೆ ಪಾವತಿಸಬೇಕಿದ್ದ ಥರ್ಡ್ ಪಾರ್ಟಿ ವಿಮೆ 2014ರಿಂದ 5–6 ಪಟ್ಟು ಹೆಚ್ಚಿದೆ. ವಿಮಾ ಕಂಪನಿಗಳ ಲಾಭವನ್ನು ಗರಿಷ್ಠಗೊಳಿಸಲು ಅನುಕೂಲ ಮಾಡಿಕೊಡುವುದನ್ನು ಬಿಟ್ಟರೆ ಈ ಹೆಚ್ಚಳಕ್ಕೆ ಯಾವುದೇ ಸಕಾರಣ ಸಮರ್ಥನೆ ಕಂಡುಬರುತ್ತಿಲ್ಲ.

**ವಿವಿಧ ಶುಲ್ಕಗಳಲ್ಲಿ ಹೆಚ್ಚಳ:** ಆಟೊ ಮತ್ತು ಟ್ಯಾಕ್ಸಿ ಚಾಲಕರ ಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಲು, ರಸ್ತೆ ಸಾರಿಗೆ ಸಚಿವಾಲಯವು ಸಾರಿಗೆ ಇಲಾಖೆಯ ಪರವಾನಗಿ ಶುಲ್ಕ, ನವೀಕರಣ ಶುಲ್ಕ, ಫಿಟ್ನೆಸ್, ಇತ್ಯಾದಿ ಶುಲ್ಕಗಳನ್ನು ಅಸಹಜವಾಗಿ ಹೆಚ್ಚಿಸಿದೆ.

**ಅದಲ್ಲದೆ ಪೊಲೀಸರ ಕಿರುಕುಳದ ಹೆಚ್ಚುವರಿ ಹೊರೆ ಇದ್ದೇ ಇದೆ.** ದೇಶದ ಉದ್ದಗಲಕ್ಕೂ ಕಾನೂನು ಮತ್ತು ಶಿಸ್ತು ಪಾಲನಾ ಅಧಿಕಾರಿಗಳು ಈ ಕಾರ್ಮಿಕರನ್ನು ಅಪರಾಧಿಗಳಂತೆ ಕಾಣುತ್ತಿದ್ದಾರೆ. ಆಟೊ ಮತ್ತು ಟ್ಯಾಕ್ಸಿ ಚಾಲಕರು ಯಾವುದೇ ಮುಜಗರವಿಲ್ಲದೆ ಕಿರುಕುಳ ಕೊಡಲು ಇವರಿಗೆ ಸುಲಭವಾಗಿ ಸಿಗುವ ಜನವಿಭಾಗವಾಗಿದೆ. ಪೊಲೀಸರ ಒಂದು ವಿಭಾಗಕ್ಕೆ ವರಮಾನದ ಸೆಲೆಯಾಗಿದೆ. ಬಹುತೇಕ ಆಟೊ ಚಾಲಕರು ಮಾಸಿಕ ಕನಿಷ್ಠ 600ರೂಗಳನ್ನು, ಕೆಲವೊಮ್ಮೆ ಮಾಸಿಕ 1000ರೂಗಳಿಗೂ ಅಧಿಕ ಮೊತ್ತವನ್ನು ಪೊಲೀಸರಿಗೆ ಪಾವತಿಸಬೇಕಾಗುತ್ತದೆ. ಇವರ ಗಾಯದ ಮೇಲೆ ಬರೆ ಹಾಕಿದಂತೆ, ಸ್ಥಳಿಯ ಸಂಸ್ಥೆಗಳ ಆಡಳಿತವು ಇವರಿಗೆ ನಿಲುಗಡೆ (ಪಾರ್ಕಿಂಗ್) ಅವಕಾಶ ನೀಡಲು ನಿರಾಕರಿಸುತ್ತಿವೆ. ಇವೆಲ್ಲವೂಗಳ ಪರಿಣಾಮವಾಗಿ ಮತ್ತು ಹೆಚ್ಚುತ್ತಿರುವ ಮೀಸಲು ಶ್ರಮಶಕ್ತಿಯು ಈ ಕ್ಷೇತ್ರಕ್ಕೆ ನುಗ್ಗುತ್ತಿರುವುದರಿಂದಾಗಿ, ಬಹುತೇಕ ಆಟೊ–ಟ್ಯಾಕ್ಸಿ ಚಾಲಕರ ವರಮಾನವು ಸತತವಾಗಿ ಇಳಿಕೆಯಾಗುತ್ತಿದೆ.

ಅದೂ ಅಲ್ಲದೆ ಆಟೊ ಚಾಲಕರಿಗೆ ಇಎಸ್ಐ, ಭವಿಷ್ಯನಿಧಿ, ಇತ್ಯಾದಿ ಸಾಮಾಜಿಕ ಭದ್ರತಾ ಸೌಲಭ್ಯಗಳಾಗಲೀ, ವೃದ್ಧಾಪ್ಯದ ಭದ್ರತೆಗಾಗಿ ಪಿಂಚಣಿಯಾಗಲಿ ಅಥವಾ ಯಾವುದೇ ಬಗೆಯ ಸಾಮಾಜಿಕ ಭದ್ರತೆಯಾಗಲೀ ಇಲ್ಲ. 2015ರಲ್ಲಿ ನಡೆದ 46ನೆಯ ಭಾರತೀಯ ಶ್ರಮ ಸಮ್ಮೇಳನವು, ಆಟೊ ಚಾಲಕರು, ಟ್ಯಾಕ್ಸಿ ಚಾಲಕರು, ರಿಕ್ಷಾ ಎಳೆಯುವವರಿಗೆ ಇನ್ನಿತರ ಸೌಲಭ್ಯಗಳ ಜೊತೆಗೆ ಇಎಸ್ಐ ಸೌಲಭ್ಯವು ವಿಸ್ತರಣೆಯಾಗಬೇಕೆಂದು ಶಿಫಾರಸ್ಸು ಮಾಡಿದೆ. ಭಾರತ ಸರ್ಕಾರದ ಶ್ರಮ ಸಚಿವಾಲಯದಡಿಯಲ್ಲಿರುವ ವಿವಿ ಗಿರಿ ರಾಷ್ಟ್ರೀಯ ಶ್ರಮ ಸಂಸ್ಥೆ, ಸಾರಿಗೆ ರಂಗದಲ್ಲಿ ಒಬ್ಬನೇ ಒಬ್ಬ ಕಾರ್ಮಿಕನಿದ್ದರೂ ಅಲ್ಲಿ ಲೇಬರ್ ಕಾನೂನು ಅನ್ವಯವಾಗಬೇಕೆಂದು ಶಿಫಾರಸ್ಸು ಮಾಡಿದೆ. ಹಿಂದಿನ ಕಾಂಗ್ರೆಸ್ ಸರ್ಕಾರವಾಗಲಿ, ಇಂದಿನ ಮೋದಿ ನೇತೃತ್ವದ ಬಿಜೆಪಿ ಸರ್ಕಾರವಾಗಲಿ ಈ ಶಿಫಾರಸ್ಸನ್ನು ಜಾರಿಗೆ ತಂದಿಲ್ಲ.

**ಅನೇಕ ಪಟ್ಟಣ ಮತ್ತು ನಗರಗಳಲ್ಲಿ, ವಾಹನ ಸಂಚಾರದ ದಟ್ಟನೆಯು ಹಲವು ಪಟ್ಟು ಹೆಚ್ಚಿದೆ. ಟ್ರಾಫಿಕ್ ಜಾಮ್‌ಗಳು ದಿನನಿತ್ಯದ ಸರ್ವೇಸಾಮಾನ್ಯ ಸಮಸ್ಯೆಯಾಗಿದೆ. ಇದರಿಂದ ಇದು ದೈಹಿಕವಾಗಿ ಮತ್ತು ಮಾನಸಿಕವಾಗಿ ಒತ್ತಡದ ಕೆಲಸವಾಗಿ ಮಾರ್ಪಟ್ಟಿದೆ.**

ಅನೇಕ ನಗರಗಳಲ್ಲಿ ಟ್ರಾಫಿಕ್‌ಗೆ ಸಂಬಂಧಪಟ್ಟಂತ ವ್ಯಾಜ್ಯ, ಕಲಹ, ಹಿಂಸೆ, ದಾಳಿಗಳು ವರದಿಯಾಗಿವೆ. ಆದರೆ, ಮೀಟರ್ ದರ 'ನಿಗದಿ ಮಾಡುವಾಗ ಸರ್ಕಾರ ಸದಾ ಏರುಗತಿಯಲ್ಲಿರುವ ಡೀಸೆಲ್, ಇತ್ಯಾದಿಗಳ ಜೊತೆಗೆ ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಅಲ್ಲದೆ ಮೀಟರ್ ದರಗಳನ್ನು ಸಕಾಲಿಕವಾಗಿ ಪರಿಷ್ಕರಿಸುವುದೂ ಇಲ್ಲ. ಸುದೀರ್ಘ ಹೋರಾಟ ಮಾಡಿದ ಬಳಿಕವೇ ಆಗುತ್ತದೆ.

ವಿದ್ಯಾವಂತ ಯುವಕರು ದೊಡ್ಡ ಪ್ರಮಾಣದಲ್ಲಿದ್ದು, ಆಳುವ ಪಕ್ಷಗಳ ಸರ್ಕಾರಗಳ ತಪ್ಪು ನೀತಿಗಳಿಂದಾಗಿ ಸೂಕ್ತ ಉದ್ಯೋಗ ಲಭಿಸದೆ, ಸರ್ಕಾರದ ಯಾವುದೇ ನೆರವಿಲ್ಲದೆ, ಆಟೊ ರಿಕ್ಷಾ ಖರೀದಿಸಿ ಸ್ವಯಂ ಉದ್ಯೋಗಿಗಳಾಗುತ್ತಿದ್ದಾರೆ. ಹಲವು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಆಟೊ ಚಾಲಕರಿಗೆ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಸರ್ಕಾರವು ಕೊಂಚವಾದರೂ ಪರಿಹಾರ ಕೊಡಬೇಕೆಂದು ನಿರೀಕ್ಷಿಸುವುದು ಸಹಜ.

**ಆದರೆ ಇದರ ಬದಲಿಗೆ, ಅಪಘಾತಗಳನ್ನು ಕಡಿತಗೊಳಿಸುವ ನೆಪವೊಡ್ಡಿ, ರಸ್ತೆ ಸಾರಿಗೆ ಕಾರ್ಮಿಕರ ಸಂಘಟನೆಗಳ ಪ್ರಬಲ ವಿರೋಧದ ನಡುವೆಯೂ ಅಲ್ಲದೆ ರಾಜಕೀಯ ಪಕ್ಷಗಳೂ ವಿಶೇಷವಾಗಿ ಎಡ ಪಕ್ಷಗಳ ಪ್ರಬಲ ವಿರೋಧದ ನಡುವೆಯೂ ಬಿಜೆಪಿ ನೇತೃತ್ವದ ಸರ್ಕಾರವು 2019ರ ಮೋಟಾರು ವಾಹನಗಳ (ತಿದ್ದುಪಡಿ) ಅಧಿನಿಯಮವನ್ನು ರೂಪಿಸಿದೆ. ಈ ಕಾನೂನಿನಿಂದ ಸಾಮಾನ್ಯವಾಗಿ ಎಲ್ಲಾ ಸಾರಿಗೆ ಕಾರ್ಮಿಕರ, ವಿಶೇಷವಾಗಿ ಆಟೊ ರಿಕ್ಷಾ ತತ್ತರಿಸಿ ಹೋಗಲಿದ್ದಾರೆ.**

ಇದರಲ್ಲಿ ತರಲಾಗಿರುವ ತಿದ್ದುಪಡಿಯೆಂದರೆ, 'ಅಗ್ರಿಗೇಟರ್' ಅಂದರೆ 'ಒಗ್ಗೂಡಿಸುವವ' ಎಂಬ ಪರಿಕಲ್ಪನೆ. ಈ ತಿದ್ದುಪಡಿಯ ಮೂಲಕ ಏಕ ವಾಹನ ಮಾಲೀಕರೆಲ್ಲರನ್ನು ಸರ್ಕಾರ ನಿರ್ನಾಮ ಮಾಡಿ ಇಡೀ ವ್ಯವಹಾರವನ್ನು ಒಲಾ ಮತ್ತು ಊಬರ್‌ನಂತಹ ಬೃಹತ್ ಕಾರ್ಪೊರೇಟ್ ಕಂಪನಿಗಳಿಗೆ ವರ್ಗಾಯಿಸುವುದು ಸರ್ಕಾರದ ಇಂಗಿತ. ಅನೇಕ ರಾಜ್ಯಗಳಲ್ಲಿ ಈಗಾಗಲೇ ಈ ಅಗ್ರಿಗೇಟರ್‌ಗಳು ಟ್ಯಾಕ್ಸಿಗಳಷ್ಟೇ ಅಲ್ಲ, ಆಟೊ ರಿಕ್ಷಾಗಳನ್ನು ನಿರ್ವಹಿಸಲಾರಂಭಿಸಿದ್ದಾರೆ. ಈ ತಿದ್ದುಪಡಿಯಿಂದಾಗಿ ವ್ಯಕ್ತಿಗತ ಚಾಲಕ ಮಾಲೀಕರು ಈ ಬೃಹತ್ ಕಂಪನಿಗಳಿಗೆ ಶರಣಾಗಬೇಕು ಅಥವಾ ಈ ರಂಗಕ್ಕೆ ವಿದಾಯ ಹೇಳಿ, ಉಪವಾಸದಿಂದ ನರಳಿ ಸಾಯಬೇಕು ಎಂಬ ಪರಿಸ್ಥಿತಿ ಉದ್ಭವಿಸಲಿದೆ.


ಭವಿಷ್ಯದಲ್ಲಿ, ಎಲ್ಲಾ ರಿಪೇರಿಗಳು ಮತ್ತು ಸರ್ವಿಸಿಂಗನ್ನು ಅಧಿಕೃತ ಕೇಂದ್ರಗಳಲ್ಲಿಯೇ ಆಟೊ ಚಾಲಕರು ಕೈಗೊಳ್ಳಬೇಕಾಗುತ್ತದೆ. ಈ ರಿಪೇರಿ / ಸರ್ವಿಸ್‌ಗೆ ಬೇಕಾಗುವ ಬಿಡಿ ಭಾಗಗಳನ್ನು ಸಂಬಂಧಿತ ಕಂಪನಿಗಳಿಂದಲೇ ಖರೀದಿಸಬೇಕಾಗುತ್ತದೆ. ವಾಹನದ ಫಿಟ್ನೆಸ್ ಪ್ರಮಾಣಪತ್ರವನ್ನು ಅಧಿಕೃತ ಖಾಸಗಿ ಏಜೆನ್ಸಿಯ ಮೂಲಕವೇ ಭಾರಿ ವೆಚ್ಚ / ಶುಲ್ಕ ಭರಿಸ ಪಡೆಯಬೇಕಾಗುತ್ತದೆ. ಇವೆಲ್ಲವೂ ದುಬಾರಿ ವಿಚಾರವಾಗಿದ್ದು, ಬಹುತೇಕ ಆಟೊ ಚಾಲಕರಿಗೆ ಕೈಗೆಟಕುವುದಿಲ್ಲ. ಅಪಘಾತಗಳನ್ನು ಕಡಿತಗೊಳಿಸುವ ನೆಪವೊಡ್ಡಿ, ಆಟೊ ಚಾಲಕರಿಗೆ ವಿಧಿಸಲಾಗುವ ದಂಡ ಮತ್ತು ಶಿಕ್ಷೆಗಳೆಲ್ಲವನ್ನೂ ಅಸಹಜವಾಗಿ ಹೆಚ್ಚಿಸಲಾಗಿದೆ.

**ಮೋಟಾರು ವಾಹನಗಳ ತಿದ್ದುಪಡಿ (ಅಧಿನಿಯಮ)ದ ನಿಜವಾದ ಗುರಿಯು, ತಾವೇ ಸ್ವಂತ ಮಾಲೀಕರೂ ಆಟೊ ಚಾಲಕರೂ ಆಗಿರುವವರನ್ನು, ಟ್ಯಾಕ್ಸಿ ಚಾಲಕರೆಲ್ಲರನ್ನು ಈ ರಂಗದಿಂದ ಹೊರದಬ್ಬಿ ಊಬರ್, ಓಲಾಗಳಂತಹ ಬೃಹತ್ ಕಂಪನಿಗಳಿಗೆ ಈ ಕ್ಷೇತ್ರವನ್ನು ಮುಕ್ತವಾಗಿಸುವುದು, ಅವರ ಲಾಭ ಹೆಚ್ಚಿಸುವುದು, ಮತ್ತು ಖಾಸಗಿ ದೇಶೀ–ವಿದೇಶೀ ವಿಮಾ ಕಂಪನಿಗಳ ಲಾಭ ಹೆಚ್ಚಿಸುವುದೇ ಆಗಿದೆ.**

ಈ ಬಗೆಯ ಆರ್ಥಿಕ ಮಾದರಿಯು ನವ ಉದಾರವಾದಿ ಆಳ್ವಿಕೆಯ ಭಾಗವಾಗಿದ್ದು, ಕಾರ್ಪೊರೇಟ್ ಕಂಪನಿಗಳನ್ನು ಉದ್ಧಾರ ಮಾಡಿ, ಜನಸಾಮಾನ್ಯರು ಅದರಲ್ಲೂ ಕಾರ್ಮಿಕರನ್ನು ಸರ್ವನಾಶ ಮಾಡುವ ಹುನ್ನಾರವಾಗಿದೆ.

ಇದರ ಹೊರತಾಗಿಯೂ ಊಬರ್/ಒಲಾದ ಅತಿಕ್ರಮಣದಿಂದಾಗಿ ಆಟೊ–ಟ್ಯಾಕ್ಸಿ ಚಾಲಕರ ಗಳಿಕೆಯೂ ಕೋವಿಡ್ ಸಂದರ್ಭದಲ್ಲಿ ನೆಲಕಚ್ಚಿದೆ, ಇದರಿಂದ ಪರಿಸ್ಥಿತಿಯು ವಿಷಮಗೊಂಡಿದೆ. ಕೋವಿಡ್ ಸಂದರ್ಭದಲ್ಲಿ ಹೇರಲಾದ ನಿರ್ಬಂಧ/ಲಾಕ್ಡೌನ್ ಇತ್ಯಾದಿ ಮನುಷ್ಯ ವಿರೋಧಿ ಕ್ರಮಗಳಿಂದಾಗಿ ಬಹುತೇಕ ಆಟೊ ರಿಕ್ಷಾ ಚಾಲಕರು ತಮ್ಮ ದುಡಿಮೆಯ ಸಾಧನಗಳನ್ನೇ ಕಳೆದುಕೊಂಡು ತಮ್ಮ ಕುಟುಂಬ ನಿರ್ವಹಣೆಗಾಗಿ ವಿಪರೀತ ಹೆಣಗಾಡಿದ್ದಾರೆ. ಕೆಲವು ರಾಜ್ಯಗಳನ್ನು ಹೊರತುಪಡಿಸಿದರೆ, ಸರ್ಕಾರಗಳು ಆಟೊ ಚಾಲಕರಿಗೆ ಕೋವಿಡ್ ಸಂದರ್ಭದಲ್ಲಿ ಯಾವುದೇ ಬಗೆಯ ಹಣಕಾಸಿನ ಪರಿಹಾರ / ಬೆಂಬಲವನ್ನು ನೀಡಲಿಲ್ಲ. ಇಂದಿಗೂ ಕೋವಿಡ್ ಪೂರ್ವದ ಸಂದರ್ಭದ ಮಟ್ಟಿಗೆ ಬೇಡಿಕೆ ಇಲ್ಲದ ಕಾರಣದಿಂದಾಗಿ ಬೃಹತ್ ಪ್ರಮಾಣದಲ್ಲಿ ಆಟೊ / ಟ್ಯಾಕ್ಸಿ ಚಾಲಕರು ಇತರ ಉದ್ಯೋಗದ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಸಾಲದ ಕಂತಿನ ಪಾವತಿಗಾಗಿ ಹಣಕಾಸಿನ ಕಂಪನಿಗಳ ಅಸಹನೀಯ ಕಿರುಕುಳವನ್ನು ಆಟೊ–ಟ್ಯಾಕ್ಸಿ ಚಾಲಕರು ಅನುಭವಿಸುತ್ತಿದ್ದಾರೆ. ಇವೆಲ್ಲಗಳ ಪರಿಣಾಮವಾಗಿ, ಹತಾಶರಾಗಿ, ಹಲವು ಕಡೆ ಇವರುಗಳ ಪೈಕಿ ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

**ಮೋಟಾರು ವಾಹನಗಳ ತಿದ್ದುಪಡಿ ಅಧಿನಿಯಮವು ಭಾಗವಾಗಿರುವ ನವ ಉದಾರವಾದಿ ಆಡಳಿತ ಕ್ರಮವನ್ನು ಹಿಮ್ಮೆಟ್ಟಿಸುವುದೂ ಈ ಎರಡು ದಿನಗಳ ಮುಷ್ಕರದ ಉದ್ದೇಶವಾಗಿದೆ..**



**0.1% ಮಂದಿಗಾಗಿ ಕಾರ್ಯನಿರ್ವಹಿಸುವ ಅನಾಹುತಕಾರಿ ಆಳ್ವಿಕೆಯ ವಿರುದ್ಧ**
**99.9% ಜನರಿಗೆ ಪ್ರಯೋಜನಕಾರಿ ನೀತಿಗಳ ಜಾರಿಗಾಗಿ**

# ಎರಡನೇ ಅಲೆಯಲ್ಲಿ ಲಾಕ್‌ಡೌನ್ ಇಲ್ಲದಿದ್ದರೂ ಅದೇ ಕಡುಬಡತನ, ಹಸಿವಿನ ಸಂಕಟ

## ಕೊವಿಡ್ ಕಾಲದಲ್ಲಿ ಮೂರನೇ ಎರಡು ಮಂದಿಯ ಆದಾಯದಲ್ಲಿ, ಆಹಾರ ಭದ್ರತೆಯಲ್ಲಿ ಇಳಿಕೆ, ಆದರೂ.....

**ಕೊವಿಡ್ ಮಹಾಸೋಂಕಿನ ಎರಡು ವರ್ಷಗಳ ನಂತರವೂ ದೇಶದ ಬಡ ವಿಭಾಗಗಳು ಆಹಾರ ಅಭದ್ರತೆ, ಆದಾಯದ ಕೊರತೆ, ಪೌಷ್ಟಿಕ ಆಹಾರದ ಕೊರತೆ ಮತ್ತಿತರ ಸಂಕಟಗಳಿಂದ ಈಗಲೂ ನರಳುತ್ತಿದ್ದಾರೆ. ಎರಡನೇ ಅಲೆಯ ವೇಳೆಯಲ್ಲಿ ಮೊದಲಿನ ಅಲೆಯ ವೇಳೆಯಲ್ಲಿದ್ದಂತೆ ರಾಷ್ಟ್ರೀಯ ಮಟ್ಟದ ಲಾಕ್‌ಡೌನ್ ಇಲ್ಲದಿದ್ದರೂ, ಸಂಕಟಗಳೇನೂ ಕಡಿಮೆಯಾಗಲಿಲ್ಲ. ಇದು ದೇಶದ 14 ರಾಜ್ಯಗಳಲ್ಲಿ ಮಾಡಿದ ಒಂದು ಸರ್ವೆಯಲ್ಲಿ ಕಂಡು ಬಂದ ಸಂಗತಿ.**

ರೈಟ್ ಟು ಫುಡ್ ಕ್ಯಾಂಪೇನ್ (ಆಹಾರದ ಹಕ್ಕು ಅಭಿಯಾನ) ಮತ್ತು ಸೆಂಟರ್ ಫಾರ್ ಇಕ್ವಿಟಿ ಸ್ಟಡೀಸ್(ಸಮತ್ವದ ಅಧ್ಯಯನ ಕೇಂದ್ರ) ಡಿಸೆಂಬರ್ 2021ರಿಂದ ಜನವರಿ 2022ರ ನಡುವೆ ಈ ಸರ್ವೆಯನ್ನು ನಡೆಸಿದೆ. ಫೆಬ್ರುವರಿ 23 ರಂದು ಈ ಸರ್ವೆಯ ಫಲಿತಾಂಶಗಳನ್ನು ಅವು ಬಿಡುಗಡೆ ಮಾಡಿವೆ. ಕೆಲವು ಅಂಕಿ–ಅಂಶಗಳು ಹೀಗಿವೆ:

* ಮಹಾಸೋಂಕಿನ ಹಿಂದಿನ ದಿನಗಳಲ್ಲೂ ಸರ್ವೆ ಮಾಡಿದ ಬಹುಪಾಲು ಮಂದಿಯ ಜೀವನ ಪರಿಸ್ಥಿತಿ ಚೆನ್ನಾಗಿಯೇನೂ ಇರಲಿಲ್ಲ. ಆದರೆ ಈ ಕೊವಿಡ್ ಅಲೆಗಳ ನಂತರ ತಮ್ಮ ಆದಾಯದಲ್ಲಿ ಬಹಳ ಇಳಿಕೆಯಾಗಿದೆ ಎಂದು 66% ಮಂದಿ ಹೇಳಿದ್ದರೆ, ಅವರಲ್ಲಿ 60% ಮಂದಿ ತಮ್ಮ ಆದಾಯ ಅರ್ಧಕ್ಕಿಂತಲೂ ಕೆಳಕ್ಕಿಳಿದಿದೆ ಎಂದು ಹೇಳಿದ್ದಾರೆ. 26% ಮಂದಿ ಅದೇ ಮಟ್ಟದಲ್ಲಿದೆ ಎಂದಿದ್ದಾರೆ ಮತ್ತು ಕೇವಲ 5% ಮಂದಿ ಆದಾಯ ಹೆಚ್ಚಿದೆ ಎಂದಿದ್ದಾರೆ.
* ಆದಾಯ ಇಳಿದಿದೆ ಎಂದವರಲ್ಲಿ ನಗರಪ್ರದೇಶದ ಕುಟುಂಬಗಳ, ಅದರಲ್ಲೂ ಮಾಸಿಕ 3000 ರೂ. ಗಳಿಗಿಂತಲೂ ಕಡಿಮೆ ಆದಾಯದ ಮತ್ತು ಮುಸ್ಲಿಂ ಸಮುದಾಯದ ಕುಟುಂಬಗಳ ಪ್ರಮಾಣವೇ ಹೆಚ್ಚು.
* ತಮ್ಮ ಕುಟುಂಬದ ಧಾನ್ಯ ಬಳಕೆ ಕೊವಿಡ್–ಪೂರ್ವದಲ್ಲಿ ಸಾಕಷ್ಟು ಇತ್ತು ಎಂದು 34% ಮಂದಿ ಹೇಳಿದ್ದರೆ, 79% ಮಂದಿಯನ್ನು ಆಗಲೂ ಆಹಾರ ಅಭದ್ರತೆ ಕಾಡುತ್ತಿತ್ತು ಎಂದು ಕಂಡು ಬಂದಿದೆ. 25% ಮಂದಿಯಲ್ಲಿ ಈ ಆಹಾರ ಅಭದ್ರತೆ ಈಗ ತೀವ್ರ ಮಟ್ಟದಲ್ಲಿದೆ ಎಂದು ಕಂಡುಬಂದಿದೆ. ಇದು ಕೂಡ ನಗರಪ್ರದೇಶದ ಕುಟುಂಬಗಳಲ್ಲೇ ಹೆಚ್ಚು, ಹಿಂದೂ ಕುಟುಂಬಗಳಲ್ಲಿ 77%ದಷ್ಟು ಮತ್ತು ಮುಸ್ಲಿಂ ಕುಟುಂಬಗಳಲ್ಲಿ 87%ದಷ್ಟು.
* 41% ಮಂದಿ ತಮ್ಮ ಕುಟುಂಬದ ಪೌಷ್ಟಿಕತೆಯ ಮಟ್ಟ ಇಳಿದಿದೆ ಎಂದಿದ್ದಾರೆ.
* ಇವರಲ್ಲಿ 84% ಮಂದಿಯ ಬಳಿ ರೇಶನ್ ಕಾರ್ಡ್‌ಗಳಿವೆ, ಇವರಲ್ಲಿ 90% ಮಂದಿ ಸ್ವಲ್ಪ ಮಟ್ಟಿನ ಆಹಾರಧಾನ್ಯಗಳನ್ನು ಸಬ್ಸಿಡಿ ದರಗಳಲ್ಲಿ ಪಡೆದಿದ್ದಾರೆ. ಆದರೆ ಇತರ ಸ್ಕೀಮುಗಳಿಂದ ಹೆಚ್ಚೇನೂ ಪ್ರಯೋಜನ ಸಿಕ್ಕಿಲ್ಲ. 25%ದಷ್ಟು ಮಂದಿಗೆ ಈ ಅವಧಿಯಲ್ಲಿ ಮಧ್ಯಾಹ್ನ ಊಟವಾಗಲಿ, ಐಸಿಡಿಎಸ್‌ನ ನೆರವಾಗಲೀ ಸಿಗಲಿಲ್ಲ ಎಂದಿದ್ದಾರೆ.

ಇವೇ ಎರಡು ಸಂಸ್ಥೆಗಳು ಈ ಹಿಂದೆ ಮೊದಲನೇ ಕೊವಿಡ್ ಅಲೆಯ ನಂತರ ಅಕ್ಟೋಬರ್‌ನಿಂದ ಡಿಸೆಂಬರ್ 2020ರ ನಡುವೆ ಈ ರೀತಿಯ ಮೊದಲ ಸರ್ವೆ ನಡೆಸಿದ್ದವು. ಆ ಸರ್ವೆಯಲ್ಲಿಯೂ ಸುಮಾರಾಗಿ ಇಂತಹುದೇ ಅಂಕಿ–ಅಂಶಗಳು ಕಂಡು ಬಂದಿದ್ದವು ಎಂದು ಈ ಸರ್ವೇ ನಡೆಸಿದವರು ಹೇಳುತ್ತಾರೆ. ಎರಡನೇ ಅಲೆಯ ವೇಳೆಯಲ್ಲಿ ರಾಷ್ಟ್ರೀಯ ಮಟ್ಟದ ಲಾಕ್ ಡೌನ್ ಇದ್ದಿರದಿದ್ದರೂ ಕಡು ಬಡವರಿಗೆ ಸಾಕಷ್ಟು ಕೆಲಸ ಮತ್ತು ಪೌಷ್ಟಿಕಾಂಶಗಳನ್ನು ಪಡೆಯಲು ಸಾಧ್ಯವಾಗಿಲ್ಲ.

ಉದಾ: ಮೂರನೇ ಎರಡರಷ್ಟು ಮಂದಿ ಅಕ್ಟೋಬರ್ 2020ರಲ್ಲಿ ತಮಗೆ ಸಿಕ್ಕಿದ ಆಹಾರ ಲಾಕ್‌ಡೌನಿಗಿಂತ ಮೊದಲು ಲಭ್ಯವಾದುದಕ್ಕಿಂತ ಕಡಿಮೆ ಎಂದು ಹೇಳಿದರೆ, 70% ದಷ್ಟು ಮಂದಿ ಪೌಷ್ಟಿಕತೆಯ ಗುಣಮಟ್ಟ ಹದಗೆಟ್ಟಿದೆ ಎಂದಿದ್ದಾರೆ.

18%ದಷ್ಟು ಕುಟುಂಬಗಳು ಲಾಕ್‌ಡೌನ್ ಮೊದಲು ತಮ್ಮ ಮಗು ಶಾಲೆಗೆ ಹೋಗುತ್ತಿತ್ತು, ಈಗ ಶಾಲೆ ಬಿಟ್ಟಿದೆ ಎಂದಿದ್ದಾರೆ.

ಈ ಸರ್ವೆ 14 ರಾಜ್ಯಗಳ 6697 ಮಂದಿಯನ್ನು ಒಳಗೊಂಡಿತ್ತು. ಇವರಲ್ಲಿ 4481, ಅಂದರೆ 70%ದಷ್ಟು ಗ್ರಾಮೀಣ ಪ್ರದೇಶದವರು, 64% ಹಿಂದೂಗಳು, 18% ಮುಸ್ಲಿಮರು, 71% ಮಹಿಳೆಯರು, 25% ಪರಿಶಿಷ್ಟ ಜಾತಿಗಳಿಗೆ, 31% ಪರಿಶಿಷ್ಟ ಬುಡಕಟ್ಟುಗಳಿಗೆ ಮತ್ತು 15% ಒಬಿಸಿ ಪ್ರವರ್ಗಗಳಿಗೆ ಸೇರಿದವರು. 41% ಕೃಷಿಯೇತರ ಕೂಲಿಕಾರರು, 19% ಕೃಷಿ ಕೂಲಿಕಾರರು, 11% ಬೇಸಾಯಗಾರರು, 18% ಅನೌಪಚಾರಿಕ ವಲಯದ ಸಂಬಳದಾರರು ಮತ್ತು 6% ನಿರುದ್ಯೋಗಿಗಳು.

ಅಂದರೆ ಸರ್ವೆ ಸಂಪೂರ್ಣ ಪ್ರಾತಿನಿಧಿಕವಾಗಿರಲಿಕ್ಕಿಲ್ಲ, ಆದರೆ ಈ ಅಂಕಿ–ಅಂಶಗಳು ಲಕ್ಷಾಂತರ ಕುಟುಂಬಗಳ ತೀವ್ರ ಕೊರತೆಯ ಕತೆ ಹೇಳುತ್ತವೆ" ಎಂದು ಇದನ್ನು ಬಿಡುಗಡೆ ಮಾಡಿದವರು ಹೇಳಿದ್ದಾರೆ. ವಾಸ್ತವವಾಗಿ ಈ ಅಂಕಿ–ಅಂಶಗಳೂ ನಿಜವಾಗಿ ಇರುವ ಹೃದಯ ವಿದ್ರಾವಕ ಸ್ಥಿತಿಯನ್ನು ಸರಿಯಾಗಿ ಬಿಂಬಿಸುತ್ತಿಲ್ಲ ಎನ್ನುತ್ತ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕ ಗೊಳಿಸಬೇಕು, ಅದರಲ್ಲಿ ಬೇಳೆಕಾಳುಗಳು, ಅಡುಗೆ ಎಣ್ಣೆ ಮುಂತಾದವು ಗಳನ್ನೂ ಸೇರಿಸಬೇಕು, ಪಿಎಂಜಿಕೆಎವೈಯನ್ನು ಮಹಾಸೋಂಕು ಇರುವ ವರೆಗೂ ಮುಂದುವರೆಸಬೇಕು, ಅಂಗನವಾಡಿಗಳನ್ನು ಪೂರ್ಣವಾಗಿ ಪುನರುಜ್ಜೀವನಗೊಳಿಸಬೇಕು, ಮೊಟ್ಟೆ, ಹಾಲು ಮತ್ತು ಹಣ್ಣುಗಳನ್ನು ಸೇರಿಸಿ ಉತ್ತಮಪಡಿಸಬೇಕು ಹಾಗೂ ಸಾಮಾಜಿಕ ಭದ್ರತಾ ಪೆನ್ಶನ್‌ಗಳನ್ನು, ' ತಾಯಂದಿರಿಗೆ ಸೌಲಭ್ಯಗಳನ್ನು 'ಹಾಗೂ ಮನರೇಗಕ್ಕೆ ಹಣನಿಡಿಕೆಗಳನ್ನು ಹೆಚ್ಚಿಸಬೇಕು ಎಂದು ಸರ್ವೆಯ ಆಧಾರದಲ್ಲಿ ಹೇಳಿದ್ದಾರೆ.

ಇತ್ತೀಚಿನ ಬಿಜೆಟಿನ ಮೊದಲು ಬಹುಪಾಲು ಪ್ರಜಾಪ್ರಭುತ್ವವಾದಿಗಳು ಇದನ್ನೇ ನಿರೀಕ್ಷಿಸಿದ್ದರು. ಆದರೆ ತದ್ವಿರುದ್ಧವಾದುದೇ ಕಂಡು ಬಂದಿದೆ. ಆದಾಯ ತೆರಿಗೆ ವ್ಯಾಪ್ತಿಗೆ ಬರದ ಕುಟುಂಬಗಳಿಗೆ ನೇರ ನಗದು ವರ್ಗಾವಣೆ ಮತ್ತು ಆಹಾರದ ಕಿಟ್‌ಗಳನ್ನು ಕೊಡಬೇಕು ಎಂಬ ಬೇಡಿಕೆಗೆ ಈಗಲೂ ಕಿವುಡಾಗಿರುವುದು ನಿಜಕ್ಕೂ ಅಮಾನವೀಯತೆ, ಕ್ರೌರ್ಯ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಆರ್ಥಿಕ ಅಭಿವೃದ್ಧಿಗೆ 25 ವರ್ಷಗಳ ನೀಲನಕ್ಷೆ

ಇವೆಲ್ಲವೂ ನಿಮ್ಮದೇ
.......25 ವರ್ಷಗಳ ನಂತರ




ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

# ಮಾರ್ಚ್ 5 ರಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ಸತ್ಯಾಗ್ರಹ

ಪುಟ 2 ರಿಂದ

ಹಲವಾರು ಅರ್ಥಶಾಸ್ತ್ರಜ್ಞರು, ಅಧ್ಯಯನಕರರು, ಪತ್ರಕರ್ತರು ಮತ್ತು ಕಾನೂನುತಜ್ಞರಿಂದಲೂ ವಿರೋಧ ವ್ಯಕ್ತವಾಗಿತ್ತು. ಪ್ರತಿಷ್ಠಿತ ನಾಗರಿಕರ ವೇದಿಕೆಯಾದ "ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳ ಕುರಿತಾದ ಜನತಾ ಆಯೋಗ" ಈ ಶೇರು ಮಾರಾಟ ಕುರಿತಂತೆ ಹಲವಾರು ಪ್ರಶ್ನೆಗಳನ್ನು ಸರಕಾರದ ಮುಂದಿಟ್ಟಿದೆ. ಬಹುಶಃ ಇವೆಲ್ಲದರ ಪರಿಣಾಮವಾಗಿ ಸರಕಾರ ಎಲ್‌ಐಸಿ ಕಾಯ್ದೆಯ ತಿದ್ದುಪಡಿಯಲ್ಲಿ 51 % ಒಡೆತನವನ್ನು ಸರಕಾರದ ಕೈಗಳಲ್ಲೇ ಇರುತ್ತದೆ ಎಂಬುದಕ್ಕೆ ಬದ್ಧಗೊಳ್ಳಬೇಕಾಗಿ ಬಂದಿದೆ. ಅಲ್ಲದೆ ಮಾರಾಟಕ್ಕಿಡುವ ಶೇರುಗಳ ಸಂಖ್ಯೆಯನ್ನು 5%ಕ್ಕಿಳಿಸಿದೆ. ಅಲ್ಲದೆ, **ಶೇರು ಮಾರುಕಟ್ಟೆಗೆ ಎಲ್‌ಐಸಿಯನ್ನು ಒಯ್ಯಲಿಕ್ಕಾಗಿ ಸೆಬಿಗೆ ಸಲ್ಲಿಸಬೇಕಾದ ಕರಡನ್ನು ಒಂದು ರಜಾದಿನದಂದು (ಫೆಬ್ರುವರಿ 13 ರ ಭಾನುವಾರದ ಸಂಜೆ) ಸಲ್ಲಿಸಿದೆ.**

**ಈ ಸುದ್ದಿ ತಿಳಿದ ನೌಕರರು ಮರುದಿನವೇ, ಫೆಬ್ರುವರಿ 14ರಂದು ಊಟದ ವಿರಾಮದ ವೇಳೆಯಲ್ಲಿ ಜಂಟಿ ವೇದಿಕೆಯ ನೇತೃತ್ವದಲ್ಲಿ ದೇಶಾದ್ಯಂತ ಪ್ರತಿಭಟನಾ ಮತಪ್ರದರ್ಶನ ನಡೆಸಿದರು.**

ಕೇವಲ 5% ಶೇರು ಮಾರಾಟಕ್ಕಿಟ್ಟರೂ, ಅದು ಈ ಅತ್ಯಂತ ಯಶಸ್ವಿ ಮಾದರಿಯನ್ನು ಹಾಕಿಕೊಟ್ಟ ಬೃಹತ್ ಸಾರ್ವಜನಿಕ ವಲಯದ ಸಂಸ್ಥೆಯ ಖಾಸಗೀಕರಣದತ್ತ ಮೊದಲ ಹೆಜ್ಜೆ. ಮಾರಾಟಕ್ಕಿಡುವ ಸಮಾರು 32 ಕೋಟಿ ಶೇರುಗಳಲ್ಲಿ 65% ದೇಶೀ ಮತ್ತು ವಿದೇಶೀ ಸಾಂಸ್ಥಿಕ ಹೂಡಿಕೆದಾರರಿಗೆ ಮೀಸಲಾಗಿದೆ. ಉಳಿದ 35% ಚಿಲ್ಲರೆ ಹೂಡಿಕೆದಾರರಿಗೆ ಕೊಡಲಾಗುವುದಂತೆ. ಇದರಲ್ಲಿ 10% ಪಾಲಿಸಿದಾರರಿಗೆ ಮತ್ತು 5% ನೌಕರರಿಗೆ ಮೀಸಲಿಡುವುದಾಗಿ ಹೇಳಲಾಗಿದೆ. ಆದರೆ ಇದು ಅವರಿಗೆ ಒಡ್ಡಿರುವ ಆಮಿಷವಷ್ಟೇ ಎಂದು ನೌಕರರು ಹೇಳುತ್ತಾರೆ.




ಎಲ್‌ಐಸಿ ಅಗಾಧ ಪ್ರಗತಿ ಸಾಧಿಸಿರುವುದು ಪಾಲಿಸಿದಾರರ ಹಣದಿಂದ ಮತ್ತು ನೌಕರರ ಶ್ರಮದಿಂದ. ಇದರಿಂದ ಸಾಮಾಜಿಕ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಮೂಲಕ ಇಡೀ ಸಮಾಜಕ್ಕೆ ಪ್ರಯೋಜನವಾಗಿದೆ. ಈ ರೀತಿಯಲ್ಲಿ ಕಟ್ಟಿದ ಸಂಸ್ಥೆಯನ್ನು ಕೆಲವು ಖಾಸಗಿ ಹೂಡಿಕೆದಾರರ ಲಾಭದ ಪ್ರವೃತ್ತಿಗೆ ಅಧೀನಗೊಳಿಸಬಾರದು ಎಂಬುದು ಸರಕಾರದ ಈ ಕ್ರಮವನ್ನು ವಿರೋಧಿಸುವ ಎಲ್ಲರ ಪ್ರಮುಖ ಆಕ್ಷೇಪ.


**ಪಾಲಿಸಿದಾರರ ವಿಶ್ವಾಸವನ್ನು ಮಾರಾಟಕ್ಕಿಟ್ಟಿರುವ ಸರಕಾರ**

ಎಲ್‌ಐಸಿಯಲ್ಲಿ ಇಕ್ವಿಟಿ ಬಂಡವಾಳದ ಮೊತ್ತ ರೂ.6325 ಕೋಟಿ ಎಂದು ಲೆಕ್ಕ ಹಾಕಲಾಗಿದೆ. ಇದರಲ್ಲಿ ಸರಕಾರದ ಹೂಡಿಕೆ 100 ಕೋಟಿ ರೂ. ಮಾತ್ರ. ಅಂದರೆ ಈಗ ಕೋಟ್ಯಂತರ ಪಾಲಿಸಿದಾರರ ವಂತಿಗೆಗಳಿಂದ ನಿರ್ಮಿತವಾದ ಅಗಾಧವಾದ ಮೌಲ್ಯದಲ್ಲಿ ಎಲ್ಲವನ್ನೂ ಸರಕಾರ ಶೇರುದಾರನಾಗಿ ತನ್ನದಾಗಿಸಿಕೊಂಡು ಖಾಸಗಿಯವರ ಲಾಭ ಗಳಿಕೆಗೆ ವಹಿಸಿಕೊಡುತ್ತಿದೆ ಎಂದು ಜಂಟಿ ವೇದಿಕೆ ಖೇದ ವ್ಯಕ್ತಪಡಿಸಿದೆ. ವಾಸ್ತವವಾಗಿ ಎಲ್‌ಐಸಿಯ ನಿಜವಾದ ಮೌಲ್ಯದ ಮಾಪನವೂ ಸರಿಯಾಗಿ ಆಗಿಯೇ ಇಲ್ಲ. ಮೌಲ್ಯಮಾಪನದ ಕೆಲಸವನ್ನು ಸಂಬಂಧಪಟ್ಟ ಯಾರೊಂದಿಗೂ ಸಮಾಲೋಚಿಸದೆ ಗುಟ್ಟಾಗಿ ನಡೆಸಲಾಗಿದೆ.

ಈ ಮೊದಲು ಎಲ್‌ಐಸಿ ಗಳಿಸುವ ಲಾಭಾಂಶದಲ್ಲಿ 95% ಪಾಲಿಸಿದಾರರಿಗೆ ಹೋಗುತ್ತಿತ್ತು. ನಂತರ ನವ–ಉದಾರೀಕರಣ ಧೋರಣೆಯ ಭಾಗವಾಗಿ ವಿರೋಧಗಳನ್ನೂ ಲೆಕ್ಕಿಸದೆ ಜೀವ ವಿಮೆಯನ್ನು ಖಾಸಗಿಯವರಿಗೆ ತೆರೆದ ನಂತರ ಇದನ್ನು 90%ಕ್ಕೆ ಇಳಿಸಲಾಯಿತು. ಈಗ ಎಲ್‌ಐಸಿಯನ್ನು ಶೇರು ಮಾರುಕಟ್ಟೆಗೆ ಒಯ್ಯುವುದರಿಂದ ಅದರ ವ್ಯವಹಾರದ ಮಾದರಿಯಲ್ಲಿಯೇ ಬದಲಾವಣೆಯಾಗಿ ಹಳೆಯ ಮತ್ತು ಹೊಸ ಪಾಲಿಸಿದಾರರಿಗಿಂತ ಹೊಸ ಶೇರುದಾರರ ಹಿತಾಸಕ್ತಿಯೇ ಮುಖ್ಯವಾಗುತ್ತದೆ, ಸಾಮಾಜಿಕ ಹಿತಾಸಕ್ತಿಗಳಿಗಿಂತ ಲಾಭಗಳಿಕೆಯೇ ಮುಖ್ಯವಾಗುತದೆ, ಶೇರುದಾರರಿಗೆ ಗರಿಷ್ಟ ಲಾಭ ಗಳಿಸಿಕೊಡುವ ದೊಡ್ಡ ಪಾಲಿಸಿಗಳ ಮಾರಾಟಕ್ಕೇ ಪ್ರಾಶಸ್ತ್ಯ ಸಿಕ್ಕಿ ಸಣ್ಣ ಪಾಲಿಸಿದಾರರ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಏಕೆಂದರೆ ಸಣ್ಣ ಪಾಲಿಸಿದಾರರು ಜೀವ ವಿಮೆಯನ್ನು ಬೇಗನೇ ಸಾಯುವ ಅಪಾಯದ ವಿರುದ್ಧ ಮಾತ್ರವಲ್ಲ, ದೀರ್ಘ ಕಾಲ ಬದುಕಿದರೆ ಬೇಕಾಗುವ ಉಳಿತಾಯದ ಸಾಧನವಾಗಿಯೂ ಕಾಣುತ್ತಾರೆ ಎಂದು ಸರಕಾರದ ಈ ಕ್ರಮದ ದುಷ್ಪರಿಣಾಮಗಳ ವಿಶ್ಲೇಷಣೆ ಮಾಡುತ್ತ ಜಂಟಿ ವೇದಿಕೆ ಹೇಳಿದೆ.

ಈ ಹಿನ್ನೆಲೆಯಲ್ಲಿ ಅದು ಎಲ್‌ಐಸಿ ಐಪಿಒವನ್ನು ವಿರೋಧಿಸಲೇ ಬೇಕಾಗಿದೆ ಮತ್ತು ಈ ಪ್ರಶ್ನೆಯ ಮೇಲೆ ಒಂದು ನಿರಂತರ ಹೋರಾಟದ ಅಗತ್ಯವಿದೆ ಎಂಬ ಒಮ್ಮತದ ನಿರ್ಧಾರಕ್ಕೆ ಬಂದಿರುವುದಾಗಿ ಜಂಟಿ ವೇದಿಕೆಯ ಹೇಳಿಕೆ ತಿಳಿಸಿದೆ.

# ಎರಡು ಸಮಾಜ ವ್ಯವಸ್ಥೆಗಳ ನಡುವೆ ಊಹೆಗೂ ನಿಲುಕದ ವ್ಯತ್ಯಾಸ




**ಅಸಮಾನತೆಗಳು ಮಾನವ ಇತಿಹಾಸದಲ್ಲಿ ಬೇರೆ ಯಾವುದೇ ಸಮಯಕ್ಕೆ ಹೋಲಿಸಿದರೂ ಇಂದು ಹೆಚ್ಚಾಗಿವೆ ಎಂದು ಈಗ ಬಹಳಷ್ಟು ವರದಿಗಳು ಹೇಳುತ್ತಿವೆ. ಆದರೆ, ಕೇವಲ ಮೂರು ದಶಕಗಳ ಹಿಂದೆ, ಮಾನವ ಇತಿಹಾಸದಲ್ಲಿ ಹಿಂದೆಂದಿಗಿಂತಲೂ ಅಸಮಾನತೆಯು ಅತಿ ಕಡಿಮೆ ಮಟ್ಟದಲ್ಲಿದ್ದ ಸಮಾಜಗಳೂ ಅಸ್ತಿತ್ವದಲ್ಲಿದ್ದವು ಎಂಬುದನ್ನೂ ನೆನಪಿಸಿಕೊಳ್ಳಬೇಕು. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನ ಕೆಲವು ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯ ಕುಸಿತದ ನಂತರ, ಅಸಮಾನತೆಗೆ ಸಂಬಂಧಿಸಿದಂತೆ ಈ ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಗಳ ನಡುವಿನ ವ್ಯತ್ಯಾಸಗಳನ್ನು ಅಳಿಸಿಹಾಕುವ ಪ್ರಯತ್ನ ನಡೆದಿದೆ. ಇದೊಂದು ಅಪ್ರಾಮಾಣಿಕ ಸೈದ್ಧಾಂತಿಕ ತಂತ್ರಗಾರಿಕೆ. ಇದಕ್ಕೆ ವ್ಯತಿರಿಕ್ತವಾಗಿ, ಅಸಮಾನತೆಯ ವಿಷಯದಲ್ಲಿ ಈ ಎರಡು ವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ಊಹಿಸಲೂ ಸಾಧ್ಯವಿಲ್ಲ.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ. ನಾಗರಾಜ್

ಆರ್ಥಿಕ ಅಸಮಾನತೆಗಳ ಅಗಾಧ ಹೆಚ್ಚಳದ ಬಗ್ಗೆ ಇತ್ತೀಚೆಗೆ ಬಹಳಷ್ಟು ಬರೆಯಲಾಗಿದೆ. ಆಕ್ಸ್‌ಫಾಮ್ ನಂತಹ ಸಂಸ್ಥೆಗಳು ಆಶ್ಚರ್ಯಕರ ಅಂಕಿಅಂಶಗಳನ್ನು ಒದಗಿಸಿವೆ. ಆಕ್ಸ್‌ಫಾಮ್ Inequality Kills ( ಅಸಮಾನತೆ ಕೊಲ್ಲುತ್ತದೆ)ಎಂಬ ಶಿರ್ಷಿಕೆಯಡಿಯಲ್ಲಿ ಒಂದು ವರದಿಯನ್ನು ಇತ್ತೀಚೆಗೆ ಪ್ರಕಟಿಸಿದೆ. ಈ ವರದಿಯು ನಮ್ಮ ಸುತ್ತಲಿನ ಅಸಮಾನತೆಯ ಬಗ್ಗೆ ಚಕಿತಗೊಳಿಸುವ ಸಂಗತಿಗಳನ್ನು ಮತ್ತು ಅಂಕಿ-ಅಂಶಗಳನ್ನು ಹೊರಹಾಕಿದೆ. ಕೊರೊನಾ ಕಾಣಿಸಿಕೊಂಡ ನಂತರದ ಅವಧಿಯಲ್ಲಿ ವಿಶ್ವದ ಹತ್ತು ಅತಿ ಹೆಚ್ಚು ಶ್ರೀಮಂತರ ಸಂಪತ್ತು ದ್ವಿಗುಣಗೊಂಡಿದೆ. ಇದೇ ಅವಧಿಯಲ್ಲಿ, ವಿಶ್ವದ 99% ರಷ್ಟು ಜನರ ಆದಾಯದಲ್ಲಿ ಇಳಿಕೆಯಾಗಿದೆ. ವಿಶ್ವದ ಜನಸಂಖ್ಯೆಯ ಕೇವಲ 0.027% ಜನರು, 2020 ರಲ್ಲಿ, ಒಟ್ಟು 45 ಟ್ರಿಲಿಯನ್ ಡಾಲರ್ ಸಂಪತ್ತನ್ನು ಹೊಂದಿದ್ದರು ಎಂದು ಅಂದಾಜಿಸಲಾಗಿದೆ. ಅವರ ಈ ಸಂಪತ್ತು ಭಾರತದ ಪ್ರಸ್ತುತ ಜಿಡಿಪಿಯ 15 ಪಟ್ಟು ದೊಡ್ಡದು.

ನಮ್ಮ ಸಮಕಾಲೀನ ಜಗತ್ತು, ಮಾನವ ಇತಿಹಾಸದಲ್ಲಿ ಎಂದೂ ಕಂಡಿರದಷ್ಟು ಹೆಚ್ಚಿನ ಮಟ್ಟದ ಆರ್ಥಿಕ ಅಸಮಾನತೆಯ ಗುಣಲಕ್ಷಣಗಳನ್ನು ತೋರುತ್ತಿದೆ ಗುರುತಿಸಿಕೊಂಡಿದೆ ಎಂದೂ ಕೆಲವರು ಹೇಳುತ್ತಾರೆ (ಎಂಆರ್ ಆನ್‌ಲೈನ್, ಫೆಬ್ರವರಿ 12). ಈ ಹೇಳಿಕೆಯನ್ನು ತಳ್ಳಿಹಾಕುವಂತಿಲ್ಲ. ವಿಷಯಕ್ಕೆ ಬರುವುದಾದರೆ, ಪ್ರತಿಯೊಂದು ಸಮಾಜ ವ್ಯವಸ್ಥೆಗೂ ಹಲವು ಹತ್ತು ಬಳಕೆಯ ವಸ್ತುಗಳ ಅಗತ್ಯವಿರುತ್ತದೆ. ಈ ವಸ್ತುಗಳನ್ನು ಉತ್ಪಾದಿಸುವ ಜನರಿಗೆ, ಅವರ ಉತ್ಪಾದಕತೆಯ ಮಟ್ಟವು ಎಷ್ಟೇ ಕಡಿಮೆ ಇದ್ದರೂ ಸಹ, ಒಂದು ಕನಿಷ್ಠ ಮಟ್ಟದ ಆದಾಯವನ್ನು ನೀಡಬೇಕಾಗುತ್ತದೆ. ಇದೇನು ಹೊಸದಲ್ಲ. ಹಿಂದಿನ ಸಮಾಜ ವ್ಯವಸ್ಥೆಗಳೂ ಸಹ ಇದೇ ಕ್ರಮವನ್ನೇ ಅನುಸರಿಸಿದ್ದವು. ಆದಾಗ್ಯೂ, ಉತ್ಪಾದಕ ಶಕ್ತಿಗಳು ಅಭಿವೃದ್ಧಿ ಹೊಂದುತ್ತಾ ಹೋದಂತೆಲ್ಲಾ ಶ್ರಮಿಕರ ಉತ್ಪಾದಕತೆಯೂ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ, ಉತ್ಪಾದನೆಯಲ್ಲಿ ಆರ್ಥಿಕ ಮಿಗುತಾಯದ ಪಾಲು (ಶ್ರಮಿಕರ ಉತ್ಪಾದಕತೆ ಮತ್ತು ಶ್ರಮಿಕರಿಗೆ ಸಿಗುವ ವೇತನ ದರ ಇವುಗಳ ನಡುವಿನ ವ್ಯತ್ಯಾಸವೇ ಆರ್ಥಿಕ ಮಿಗುತಾಯ) ಹೆಚ್ಚುತ್ತಲೇ ಹೋಗುತ್ತದೆ. ಬಂಡವಾಳಶಾಹಿಯು ಈವರೆಗೂ ಉತ್ಪಾದಕ ಶಕ್ತಿಗಳ ಅತ್ಯುನ್ನತ ಮಟ್ಟದ ಅಭಿವೃದ್ಧಿಯನ್ನು ಕಂಡಿರುವುದರಿಂದ, ಉತ್ಪಾದನೆಯಲ್ಲಿ ಆರ್ಥಿಕ ಮಿಗುತಾಯದ ಪಾಲು ಎಂಬ ಅರ್ಥದಲ್ಲಿ, ಬಂಡವಾಳಶಾಹಿಯ ಅಡಿಯಲ್ಲಿ ಆರ್ಥಿಕ ಅಸಮಾನತೆಗಳು ಹಿಂದಿನ ಯಾವುದೇ ಸಮಯಕ್ಕಿಂತಲೂ ಇಂದು ಹೆಚ್ಚಿನ ಮಟ್ಟದಲ್ಲಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ಈ ದೃಷ್ಟಿಕೋನದ ವಿರುದ್ಧವಾಗಿ ಹೀಗೊಂದು ವಾದವನ್ನು ಮಂಡಿಸಬಹುದು: ಹಿಂದಿನ ಉತ್ಪಾದನಾ ವಿಧಾನಗಳಿಗೆ ಹೋಲಿಸಿದರೆ, ಬಂಡವಾಳಶಾಹಿಯ ಅಡಿಯಲ್ಲಿ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯೊಂದಿಗೆ ಕಾರ್ಮಿಕರ ನಿಜ ವೇತನವೂ ಹೆಚ್ಚುವ ಕಾರಣದಿಂದಾಗಿ ಮತ್ತು ವೇತನ ಮಟ್ಟದ ಒಂದು ಕವಲಾಗಿ ಪ್ರಕಟಗೊಳ್ಳುವ ಅಸಮಾನತೆಗಳು ಬಂಡವಾಳಶಾಹಿಯ ಅಡಿಯಲ್ಲಿ, ಹಿಂದಿನ ಉತ್ಪಾದನಾ ವಿಧಾನಗಳಿಗೆ ಹೋಲಿಸಿದರೆ ಹೆಚ್ಚಬೇಕಾಗಿಯೇನೂ ಇಲ್ಲ. ಆದರೆ, ಬಂಡವಾಳಶಾಹಿಯ ಪ್ರವೃತ್ತಿಯನ್ನು ಅದರ ಅಂತರರಾಷ್ಟ್ರೀಯ ಸಂದರ್ಭ-ಸನ್ನಿವೇಶದಲ್ಲಿ ನೋಡಿದಾಗ ಅದು ತನ್ನ ಪರಿಧಿಯಲ್ಲಿ ಅಪಕೈಗಾರಿಕೀಕರಣವಾಗುವಂತೆ ನೋಡಿಕೊಳ್ಳುವ ಮೂಲಕ ಕಾರ್ಮಿಕರ ಒಂದು ಮೀಸಲು ಪಡೆಯನ್ನು ಸೃಷ್ಟಿಸುತ್ತದೆ. ಹಾಗಾಗಿ, ಕಾರ್ಮಿಕ ಉತ್ಪಾದಕತೆಯಲ್ಲಿ ಗಣನೀಯ ಹೆಚ್ಚಳವಿದ್ದರೂ ಸಹ, ಕಾರ್ಮಿಕರ ನಿಜ ವೇತನವನ್ನು ಬದುಕುಳಿಯಲಷ್ಟೇ ಸಾಕಾಗುವ ಮಟ್ಟಕ್ಕೆ ಬಹಳ ಹತ್ತಿರದಲ್ಲಿಡುತ್ತದೆ. ಅದೂ ಅಲ್ಲದೆ, ಹಿಂದಿನ ಯಾವುದೇ ಉತ್ಪಾದನಾ ವಿಧಾನಕ್ಕೆ ಹೋಲಿಸಿದರೂ ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ಉತ್ಪಾದಕ ಶಕ್ತಿಗಳ ಅಭಿವೃದ್ಧಿಯು ಅತ್ಯುನ್ನತ ಮಟ್ಟದಲ್ಲಿರುವುದರಿಂದಾಗಿ, ಸೃಷ್ಟಿಯಾಗುವ ಆರ್ಥಿಕ ಮಿಗುತಾಯದ ಪಾಲೂ ಸಹ ದೊಡ್ಡದೇ ಇರುತ್ತದೆ. ಹಾಗಾಗಿ, ಇಡೀ ವಿಶ್ವದ ಬಂಡವಾಳಶಾಹಿ ಉತ್ಪಾದನೆಯಲ್ಲಿ ಸೃಷ್ಟಿಯಾಗುವ ಆರ್ಥಿಕ ಮಿಗುತಾಯದ ಪಾಲು ಎಂಬ ಅರ್ಥದಲ್ಲಿ, ಆರ್ಥಿಕ ಅಸಮಾನತೆಗಳು ಹಿಂದಿನ ಯಾವುದೇ ಸಮಯಕ್ಕಿಂತಲೂ ಇಂದು ಹೆಚ್ಚಿನ ಮಟ್ಟದಲ್ಲಿವೆ.

**ಮೂರು ದಶಕಗಳ ಹಿಂದೆ...**

ಈ ಅರ್ಥದಲ್ಲಿ ಅಸಮಾನತೆಗಳು ಮಾನವ ಇತಿಹಾಸದಲ್ಲಿ ಬೇರೆ ಯಾವುದೇ ಸಮಯಕ್ಕೆ ಹೋಲಿಸಿದರೂ ಇಂದು ಹೆಚ್ಚಾಗಿವೆಯಾದರೂ, ಕೇವಲ ಮೂರು ದಶಕಗಳ ಹಿಂದೆ, ಮಾನವ ಇತಿಹಾಸದಲ್ಲಿ ಹಿಂದೆಂದಿಗಿಂತಲೂ ಅಸಮಾನತೆಯು ಅತಿ ಕಡಿಮೆ ಮಟ್ಟದಲ್ಲಿದ್ದ ಸಮಾಜಗಳೂ ಅಸ್ತಿತ್ವದಲ್ಲಿದ್ದವು. ಅವುಗಳೆಂದರೆ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನ ಕೆಲವು ಸಮಾಜವಾದಿ ದೇಶಗಳು. ಈ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯ ಕುಸಿತದ ನಂತರ, ಅಸಮಾನತೆಯ ವಿಷಯದಲ್ಲಿ, ಈ ದೇಶಗಳು ಬಂಡವಾಳಶಾಹಿ ದೇಶಗಳಿಗಿಂತ ಭಿನ್ನವೇನಲ್ಲ ಎಂದು ಹೇಳುವುದೇ ಒಂದು ಫ್ಯಾಶನ್ ಆಗಿಬಿಟ್ಟಿದೆ. ಈ ದೇಶಗಳಲ್ಲಿಯೂ ಸಹ, ಬಂಡವಾಳಶಾಹಿ ವ್ಯವಸ್ಥೆಯಲ್ಲಿದ್ದಂತೆ, ಆರ್ಥಿಕ ಮಿಗುತಾಯವನ್ನೇ ಅವಲಂಬಿಸಿ ಬದುಕುತ್ತಿದ್ದ ಆಡಳಿತ ಯಂತ್ರದ ಭಾಗವಾಗಿದ್ದವರು (ಅಪಾರಾಟ್‌ಚಿಕ್) ಇದ್ದರು ಎಂದು ಹೇಳುತ್ತಾರೆ. ಆದರೆ, ಅಸಮಾನತೆಗೆ ಸಂಬಂಧಿಸಿದಂತೆ ಎರಡು ಸಮಾಜ ವ್ಯವಸ್ಥೆಗಳ ನಡುವಿನ ವ್ಯತ್ಯಾಸಗಳನ್ನು ಅಳಿಸಿಹಾಕುವ ಈ ಪ್ರಯತ್ನವು ಒಂದು ಅಪ್ರಾಮಾಣಿಕ ಸೈದ್ಧಾಂತಿಕ ತಂತ್ರಗಾರಿಕೆಯಾಗಿದೆ. ವಾಸ್ತವವಾಗಿ, ಇದು ತಪ್ಪು ಅಭಿಪ್ರಾಯ. ಇದಕ್ಕೆ ವ್ಯತಿರಿಕ್ತವಾಗಿ, ಅಸಮಾನತೆಯ ವಿಷಯದಲ್ಲಿ ಎರಡು ವ್ಯವಸ್ಥೆಗಳ ನಡುವಿನ ವ್ಯತ್ಯಾಸವನ್ನು ಊಹಿಸಲೂ ಸಾಧ್ಯವಿಲ್ಲ.

ಹೆಚ್ಚಿನ ಮಟ್ಟದ ಅಸಮಾನತೆಗಳಿರುವ ಅಮೆರಿಕಾವನ್ನು ಬದಿಗಿಟ್ಟು, ಪಶ್ಚಿಮ ಜರ್ಮನಿ, ಫ್ರಾನ್ಸ್ ಅಥವಾ ಡೆನ್ಮಾರ್ಕ್ ಇಂತಹ ದೇಶಗಳಿಗೆ ಹೋಲಿಸಿದರೂ ಸಹ, ಪೂರ್ವ ಯುರೋಪಿನ ದೇಶಗಳಲ್ಲಿ ಅಸಮಾನತೆ ಅತಿ ಕಡಿಮೆ ಇತ್ತು ಎಂಬುದನ್ನು ತೋರಿಸಲು ಆಕ್ಸ್‌ಫಾಮ್ ಸಂಸ್ಥೆಯ ಮ್ಯಾಕ್ಸ್ ಲಾಸನ್, ಯುಗೊಸ್ಲಾವಿಯಾ ಮೂಲದ ಅರ್ಥಶಾಸ್ತ್ರಜ್ಞ ಬ್ರಾಂಕೊ ಮಿಲಾನೊವಿಕ್ ಅವರನ್ನು ಉಲ್ಲೇಖಿಸುತ್ತಾರೆ. ಮಿಲಾನೊವಿಕ್ ಅವರ ಪ್ರಕಾರ, ಈ ಅತಿ ಕಡಿಮೆ ಅಸಮಾನತೆಯು ಕನಿಷ್ಠ ಮೂರು ಅಂಶಗಳಿಂದಾಗಿತ್ತು. ಮೊದಲನೆಯದು, ಬೋಲ್ಶೆವಿಕ್ ಕ್ರಾಂತಿಯ ನಂತರ ಖಾಸಗಿ ಆಸ್ತಿಯನ್ನು,ವಿಶೇಷವಾಗಿ ಪಾಳೇಗಾರೀ ಆಸ್ತಿಯನ್ನು, ಬೃಹತ್ ಪ್ರಮಾಣದಲ್ಲಿ ಸ್ವಾಧೀನಪಡಿಸಿಕೊಂಡು ಅದನ್ನು ರೈತರಿಗೆ ಹಂಚಿಕೆ ಮಾಡಲಾಗಿತ್ತು. ಇದೇ ರೀತಿಯಲ್ಲಿ, ಯುದ್ಧಾನಂತರದಲ್ಲಿ ಪೂರ್ವ ಯುರೋಪಿಯನ್ ದೇಶಗಳಲ್ಲೂ ಭೂ-ಮರುಹಂಚಿಕೆ ಮಾಡಲಾಗಿತ್ತು. ಎರಡನೆಯದು, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯನ್ನು ಪ್ರತಿಯೊಬ್ಬರಿಗೂ ಉಚಿತವಾಗಿ ಒದಗಿಸಲಾಗಿತ್ತು. ಉಚಿತ ಶಿಕ್ಷಣ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಅಧ್ಯಯನಕ್ಕಾಗಿ ಸ್ಟೈಪೆಂಡ್ ಸಹ ಲಭ್ಯವಿತ್ತು. ಖಾಸಗಿ ಕಾಲೇಜುಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಇಲ್ಲದ ಕಾರಣ, ಎಲ್ಲರೂ ಒಂದೇ ಗುಣಮಟ್ಟದ ಶಿಕ್ಷಣ ಪಡೆದರು. ತಮ್ಮ ಭವಿಷ್ಯವನ್ನು ಉತ್ತಮಗೊಳಿಸುವ ಮುಕ್ತ ಅವಕಾಶಗಳನ್ನು ಎಲ್ಲ ವಿದ್ಯಾರ್ಥಿಗಳೂ ಹೊಂದಿದ್ದರು. ಇತರ ವಿದ್ಯಾರ್ಥಿಗಳಿಗೆ ಹೋಲಿಸಿದರೆ "ಶ್ರೀಮಂತ" ಹಿನ್ನೆಲೆಯವರು ಎಂದು ಹೇಳಲಾದ ಕೆಲವು ವಿದ್ಯಾರ್ಥಿಗಳು ಮಾತ್ರ ಉತ್ತಮ ಸ್ಥಿತಿಯಲ್ಲಿದ್ದರು ಎನ್ನುವ ಪ್ರಶ್ನೆಯೇ ಇರಲಿಲ್ಲ. ಮೂರನೆಯ ಅಂಶವೆಂದರೆ, ಉದ್ಯೋಗದ ಖಾತರಿ. ಎಲ್ಲರಿಗೂ ಉದ್ಯೋಗ ದೊರಕುವ ಭರವಸೆ ಇತ್ತು. ಆದ್ದರಿಂದ, ಯಾರೂ ನಿರುದ್ಯೋಗಿಗಳಾಗಿ ಉಳಿಯುವ ಪ್ರಶ್ನೆಯೇ ಇರಲಿಲ್ಲ. ಹಾಗಾಗಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಂಭವಿಸುವಂತೆ ಕಾರ್ಮಿಕರ ಮೀಸಲು ಸೈನ್ಯ ಸೃಷ್ಟಿಯಾಗುವ ಪ್ರಶ್ನೆಯೇ ಇರಲಿಲ್ಲ.

**ಭಿನ್ನವಾದ ಪ್ರೇರಕ ಶಕ್ತಿ**


ಇವೆಲ್ಲವೂ ಮುಖ್ಯವಾದ ಅಂಶಗಳಾಗಿದ್ದರೂ ಸಹ, ಅವು ಸಮಾಜವಾದದ ಅಡಿಯಲ್ಲಿ ಹೆಚ್ಚಿನ ಸಮಾನತೆ ಇದ್ದುದಕ್ಕೆ ಪೂರ್ಣ ವಿವರಣೆಯಾಗುವುದಿಲ್ಲ. ಅವುಗಳ ಜೊತೆಗೆ ಪೂರಕವಾಗಿ, ಅಸಮಾನತೆಯ ಹೆಚ್ಚಳವನ್ನು ತಡೆಯುವ ಸಮಾಜವಾದಿ ವ್ಯವಸ್ಥೆಯ ತರ್ಕವನ್ನೂ ವಿವರಿಸಬೇಕಾಗುತ್ತದೆ. ಪೂರ್ಣ ಉದ್ಯೋಗ ಪರಿಸ್ಥಿತಿ ಶಾಶ್ವತವಾಗಿದ್ದ ಹಿಂದಿನ ಸಮಾಜವಾದಿ ಅರ್ಥವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಗಿಂತ ಮೂಲಭೂತವಾಗಿ ಭಿನ್ನವಾದ ಪ್ರೇರಕ ಶಕ್ತಿಯನ್ನು ಹೊಂದಿತ್ತು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ಮತ್ತು ಬಂಡವಾಳಗಾರರ ನಡುವೆ ಒಂದು ಚೌಕಾಶಿಯ ಮೂಲಕ, ಆದಾಯ ವಿತರಣೆಯನ್ನು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ ನಿರ್ಧರಿಸಲಾಗುತ್ತದೆ. ಕಾರ್ಮಿಕರ ಒಂದು ಮೀಸಲು ಪಡೆಯು ಯಾವತ್ತೂ ಅಸ್ತಿತ್ವದಲ್ಲಿರುವ ಕಾರಣದಿಂದಾಗಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರು ಯಾವತ್ತೂ ಒಂದು ಅನನುಕೂಲದ ಪರಿಸ್ಥಿತಿಯಲ್ಲೇ ಇರುತ್ತಾರೆ: ಮೀಸಲು ಪಡೆಯ ಗಾತ್ರವು ಎಷ್ಟು ದೊಡ್ಡದಿರುತ್ತದೋ, ಕಾರ್ಮಿಕರು ತಮ್ಮ ಚೌಕಾಶಿಯ ಮೂಲಕ ಪಡೆಯಬಹುದಾದ ವೇತನ ಪಾಲು ಅಷ್ಟೇ ಕಡಿಮೆ ಇರುತ್ತದೆ.

ಕಾರ್ಮಿಕರು ಮತ್ತು ಬಂಡವಾಳಗಾರರ ನಡುವೆ ಆದಾಯದ ವಿತರಣೆಯು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ ಈ ರೀತಿಯಲ್ಲಿ ನಿರ್ಧರಿಸಲ್ಪಡುವ ಕಾರಣದಿಂದಾಗಿಯೇ ಬಂಡವಾಳಶಾಹಿ ವ್ಯವಸ್ಥೆಯು ಅತಿ-ಉತ್ಪಾದನೆಯ ಬಿಕ್ಕಟ್ಟಿಗೆ ಒಳಗಾಗುತ್ತದೆ. ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳಬಹುದು: ಒಂದು ಅರ್ಥವ್ಯವಸ್ಥೆಯ ಒಟ್ಟು ಉತ್ಪಾದನಾ ಸಾಮರ್ಥ್ಯವು 100 ಎಂದು ಭಾವಿಸಿ, ಪೂರ್ಣ ಸಾಮರ್ಥ್ಯದ ಉತ್ಪತ್ತಿಯನ್ನು ಉತ್ಪಾದಿಸಿದರೆ ಮತ್ತು ಇದರಲ್ಲಿ ಕಾರ್ಮಿಕರಿಗೆ ಸಿಗುವ ಪಾಲು (ಅಂದರೆ, ಕಾರ್ಮಿಕರ ನಿಜ ವೇತನವನ್ನು ಕಾರ್ಮಿಕ ಉತ್ಪಾದಕತೆಯಿಂದ ಭಾಗಿಸಿದಾಗ ಸಿಗುವಂತದ್ದು) ಅರ್ಧದಷ್ಟು ಎಂದು ಭಾವಿಸಿದರೆ, ಆಗ, 50 ಕಾರ್ಮಿಕರಿಗೂ ಮತ್ತು 50 ಬಂಡವಾಳಗಾರರಿಗೂ ಬರುತ್ತದೆ. ತಮಗೆ ಬಂದದ್ದನ್ನು ಕಾರ್ಮಿಕರು ಹೆಚ್ಚು ಕಡಿಮೆ ಬಳಸಿಕೊಳ್ಳುತ್ತಾರೆ. ಆದರೆ, ಸ್ವತಂತ್ರವಾಗಿ ನಿರ್ಧರಿಸಿದ ತಮ್ಮ ಹೂಡಿಕೆಯೂ ಸೇರಿದಂತೆ ಬಂಡವಾಳಗಾರರು ಕೇವಲ 40ನ್ನು ಬಳಕೆಮಾಡಿಕೊಂಡರೆ, ಆಗ 40ರ ಹೆಚ್ಚುವರಿ ಮಾತ್ರ "ಸಾಕಾರಗೊಳ್ಳುತ್ತದೆ". ಮಿಗುತಾಯದ ಪಾಲು ಅರ್ಧದಷ್ಟು ಇರುವುದರಿಂದ, ಕಾರ್ಮಿಕರು 50 ಅಲ್ಲ 40ನ್ನು ಪಡೆಯುತ್ತಾರೆ ಮತ್ತು "ಸಾಕಾರಗೊಂಡ" ಒಟ್ಟು ಉತ್ಪಾದನೆಯು 80 ಆಗಿರುತ್ತದೆ. ಅಂದರೆ, ಉತ್ಪಾದಿಸಬಹುದಾದ 20 ಉತ್ಪಾದನೆಯಾಗದೇ ಉಳಿದುಬಿಡುತ್ತದೆ ಮತ್ತು ಕಾರ್ಮಿಕ ಉತ್ಪಾದಕತೆಯು 1 ಆಗಿದ್ದರೆ, 100ಅನ್ನು ಉತ್ಪಾದಿಸಿದ್ದರೂ ನಿರುದ್ಯೋಗಿಗಳಾಗಿಯೇ ಉಳಿಯುತ್ತಿದ್ದವರಿಗಿಂತ ಇನ್ನೂ 20 ಹೆಚ್ಚು ಕಾರ್ಮಿಕರು ನಿರುದ್ಯೋಗಿಗಳಾಗುತ್ತಾರೆ.

ಆದರೆ, ಒಂದು ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ (ಇಲ್ಲಿ ಬಂಡವಾಳಗಾರರಿಲ್ಲ; ಬಂಡವಾಳಗಾರರ ಬಳಕೆಯೂ ಇಲ್ಲ) ಹೂಡಿಕೆಯ ಮೊತ್ತ ಮತ್ತು ವ್ಯವಸ್ಥಾಪಕರೂ ಸೇರಿದಂತೆ ಪ್ರಭುತ್ವದ ಸಿಬ್ಬಂದಿಯ ಬಳಕೆಯ ಒಟ್ಟು ಮೊತ್ತವು 40 ಆಗಿದ್ದರೆ, ಆಗ

ಪುಟ 14 ನೋಡಿ

**ಸಮಾನತೆಯ ಸಮಾಜದಲ್ಲಿ ಸೃಜನಶೀಲತೆ ಪ್ರಕಟಗೊಳ್ಳುವುದು ಸಾಧ್ಯವಿಲ್ಲ ಎಂದೇ ಕೆಲವರು ನಂಬುತ್ತಾರೆ ಮತ್ತು ಅಂತಹ ಸಮಾಜವು ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದಿಲ್ಲ ಎಂದೂ ಹೇಳುತ್ತಾರೆ. ಎರಡು ಸ್ಪಷ್ಟ ಕಾರಣಗಳಿಂದಾಗಿ ಇದು ದೋಷಪೂರಿತವಾಗಿದೆ. ಒಂದು, ಹಣವೇ ಸೃಜನಶೀಲ ಪ್ರಯತ್ನಗಳ ಚಿಲುಮೆ ಎಂದು ನಂಬುವುದು ದೃಷ್ಟಿ ದೋಷ.**




**ಎರಡು, ಬಹಳ ಮಂದಿ ಶಿಕ್ಷಣದಿಂದ ಮತ್ತು ಉದ್ಯೋಗಾವಕಾಶಗಳಿಂದ ವಂಚಿತರಾಗುವ ಮತ್ತು ರೋಗ ರುಜಿನಗಳಿಂದ ನರಳುವ ಪರಿಸ್ಥಿತಿಯಿಂದಾಗಿ ಅದೆಷ್ಟು ಅಗಾಧ ಪ್ರಮಾಣದ ಸೃಜನಶೀಲತೆ ನಾಶಗೊಳ್ಳುತ್ತದೆ ಎಂಬುದರ ಲೆಕ್ಕಾಚಾರವನ್ನೇ ಮಾಡುವುದಿಲ್ಲ.**

## ಊಹೆಗೂ ನಿಲುಕದ ವ್ಯತ್ಯಾಸ

ಪುಟ 13 ರಿಂದ

ಉತ್ಪಾದನೆಯು ಇನ್ನೂ 100 ರಲ್ಲೇ ಇರುತ್ತದೆ. ಅಂದರೆ, ಪೂರ್ಣ ಸಾಮರ್ಥ್ಯದ ಮಟ್ಟದಲ್ಲಿ ಉತ್ಪಾದನೆಯಾಗುತ್ತದೆ ಮತ್ತು ಸೃಷ್ಟಿಯಾಗುವ ಹೆಚ್ಚುವರಿಯ ಹಣವನ್ನು ಕಾರ್ಮಿಕರಿಗೇ ನೀಡಲಾಗುತ್ತದೆ. ಕಾರ್ಮಿಕರಿಗೆ ಸಿಗುವ ಹಣ–ವೇತನಕ್ಕೆ ಹೋಲಿಸಿದರೆ, ಬೆಲೆಗಳ ಕುಸಿತದ ಮೂಲಕ ಅವರು 60 ಪಡೆಯುವಂತೆ ಕಾರ್ಮಿಕರ ಪಾಲನ್ನು ಮೇಲ್ಮುಖವಾಗಿ ಸರಿಹೊಂದಿಸಲಾಗುತ್ತದೆ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾರ್ಮಿಕರ ಪಾಲು ಸ್ವತಂತ್ರವಾಗಿರುವುದರ ಬದಲು, ಯಾವಾಗಲೂ ಪೂರ್ಣ ಸಾಮರ್ಥ್ಯದ ಉತ್ಪಾದನೆ ಸಾಕಾರಗೊಳ್ಳುವ ಮಟ್ಟದಲ್ಲಿ ಹೊಂದಿಕೊಳ್ಳುತ್ತದೆ, ಸ್ವತಃ ಹೊಂದಿಕೊಳ್ಳುತ್ತದೆ.

ಈ ರೀತಿಯಲ್ಲಿ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯಲ್ಲಿ ಕೊರತೆ ಕಂಡುಬಂದ ಸಂದರ್ಭದಲ್ಲಿ ನಿರುದ್ಯೋಗ ಹೆಚ್ಚುತ್ತದೆ. ಆದರೆ, ಒಂದು ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ, ಒಟ್ಟು ಬೇಡಿಕೆಯಲ್ಲಿ ಕೊರತೆಯ ಸಮಸ್ಯೆ ಎಂದಿಗೂ ಕಾಡುವುದಿಲ್ಲ. ಏಕೆಂದರೆ, ಅಂತಹ ಯಾವುದೇ ಸಾಧ್ಯತೆಯನ್ನು ಸರಿದೂಗಿಸುವ ರೀತಿಯಲ್ಲಿ ವೇತನದ ಪಾಲನ್ನು ಹೊಂದಿಕೆ ಮಾಡಲಾಗುತ್ತದೆ. ಆದ್ದರಿಂದ, ಉತ್ಪತ್ತಿಗೆ ಹೂಡಿಕೆಯ ಅನುಪಾತವು ಲೌಕಿಕವಾಗಿ ಏರಿದಾಗ, ಉತ್ಪಾದನೆಯಲ್ಲಿ ಆರ್ಥಿಕ ಮಿಗುತಾಯದ ಪಾಲು ಲೌಕಿಕವಾಗಿ ಏರಬಹುದು, ಮತ್ತು ಅದಕ್ಕೆ ಅನುಗುಣವಾಗಿ ಉತ್ಪಾದನೆಯಲ್ಲಿ ವೇತನದ ಪಾಲು ಲೌಕಿಕವಾಗಿ ಕುಸಿಯಬಹುದು. ಆದರೆ, ಅಂತಹ ಸಂದರ್ಭದಲ್ಲಿಯೂ ಸಹ, ಉತ್ಪಾದನಾ ಸಾಧನಗಳ ಒಡೆತನದ ಖಾಸಗಿ ಬಂಡವಾಳಶಾಹಿಗಳು ಅಲ್ಲಿಲ್ಲದ ಕಾರಣ, ಆರ್ಥಿಕ ಮಿಗುತಾಯದ ಈ ಸಂಪೂರ್ಣ ಏರಿಕೆಯು ಪ್ರಭುತ್ವದ ಪಾಲಿಗೆ ಹೋಗುತ್ತದೆ. ಹಾಗಾಗಿ, ವ್ಯಕ್ತಿ ವ್ಯಕ್ತಿಗಳ ನಡುವೆ ಆದಾಯದ ಅಥವಾ ಸಂಪತ್ತಿನ ಅಸಮಾನತೆ ಹೆಚ್ಚುವುದೇ ಇಲ್ಲ.

ಹೀಗೆ ಸಮಾಜವಾದಿ ವ್ಯವಸ್ಥೆಯ ಕಾರ್ಯನಿರ್ವಹಣೆಯ ತರ್ಕವೇನೆಂದರೆ, ಅದು ಯಾವುದೇ ಅತಿಯಾದ ಉತ್ಪಾದನಾ ಬಿಕ್ಕಟ್ಟುಗಳು ಉಂಟಾಗದಂತೆ, ನಿರುದ್ಯೋಗ ಸೃಷ್ಟಿಯಾಗದಂತೆ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವೆ ಆದಾಯ ಅಥವಾ ಸಂಪತ್ತಿನ ಅಸಮಾನತೆ ಉಂಟಾಗದಂತೆ ನೋಡಿಕೊಳ್ಳುತ್ತದೆ, ಅಂದರೆ, ಅಂತಹ ಪ್ರವೃತ್ತಿಗಳನ್ನು ಚಿವುಟಿ ಹಾಕುತ್ತದೆ. ಅಷ್ಟೇ ಅಲ್ಲದೆ, ಅಗಾಧ ಅಸಮಾನತೆಯಿಂದ ಕೂಡಿದ್ದ ಹಿಂದಿನ ವ್ಯವಸ್ಥೆಯಿಂದ ಸಮಾನತಾವಾದಿ ವ್ಯವಸ್ಥೆಗೆ ಹೊಂದಿದ ಪರಿವರ್ತನೆಯು ಒಂದು ಸಣ್ಣ ಅವಧಿಯಲ್ಲಿ ಸಂಭವಿಸಿತು. ಈ ಬಗ್ಗೆ, ಆಕ್ಸ್‌ಫಾಮ್ ಸಂಸ್ಥೆಯ ಮ್ಯಾಕ್ಸ್ ಲಾಸನ್ ಅವರ ಜೊತೆಯಲ್ಲಿ ಸಂವಾದದಲ್ಲಿ ತೊಡಗಿದವರೊಬ್ಬರು ಹೇಳುತ್ತಾರೆ: "ಹೆತ್ತವರು ಅನಕ್ಷರಸ್ಥರಾಗಿದ್ದರು ಮತ್ತು ಅವರ ಮಕ್ಕಳು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದರು".

ಸಮಾನತೆಯ ಸಮಾಜದಲ್ಲಿ ಸೃಜನಶೀಲತೆ ಪ್ರಕಟಗೊಳ್ಳುವುದು ಸಾಧ್ಯವಿಲ್ಲ ಎಂದೇ ಕೆಲವರು ನಂಬುತ್ತಾರೆ ಮತ್ತು ಅಂತಹ ಸಮಾಜವು ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದಿಲ್ಲ ಎಂದೂ ಹೇಳುತ್ತಾರೆ. ಈ ಅಭಿಪ್ರಾಯವು ಎರಡು ಸ್ಪಷ್ಟ ಕಾರಣಗಳಿಂದಾಗಿ ದೋಷಪೂರಿತವಾಗಿದೆ. ಮೊದಲನೆಯದು, ಹಣವೇ ಸೃಜನಶೀಲ ಪ್ರಯತ್ನಗಳ ಚಿಲುಮೆ ಎಂದು ನಂಬುವುದು ದೃಷ್ಟಿ ದೋಷವಾಗುತ್ತದೆ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ವಾದವು, ಮನುಷ್ಯ ಸ್ವಭಾವವನ್ನು ಬೂರ್ಜ್ವಾ ವ್ಯವಸ್ಥೆಯಲ್ಲಿ ಅದು ಪ್ರಕಟಗೊಂಡ ಮಟ್ಟವೇ ಅದರ ಮಿತಿ ಎಂದು ಊಹಿಸಿಕೊಳ್ಳುವ ಮೂಲಕ ಬೂರ್ಜ್ವಾ ವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಎರಡನೆಯ ಕಾರಣವೆಂದರೆ, ಬಹಳ ಮಂದಿ ಶಿಕ್ಷಣದಿಂದ ಮತ್ತು ಉದ್ಯೋಗಾವಕಾಶಗಳಿಂದ ವಂಚಿತರಾಗುವ ಮತ್ತು ರೋಗ ರುಜಿನಗಳಿಂದ ನರಳುವ ಪರಿಸ್ಥಿತಿಯಿಂದಾಗಿ ಅದೆಷ್ಟು ಅಗಾಧ ಪ್ರಮಾಣದ ಸೃಜನಶೀಲತೆ ನಾಶಗೊಳ್ಳುತ್ತದೆ ಎಂಬುದರ ಲೆಕ್ಕಾಚಾರವನ್ನೇ ಮಾಡುವುದಿಲ್ಲ.

## ತಮಿಳುನಾಡು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಡಿಎಂಕೆ ನೇತೃತ್ವದ ಜಾತ್ಯತೀತ ರಂಗಕ್ಕೆ ಭಾರೀ ಗೆಲುವು

**ತಮಿಳುನಾಡಿನಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟ ಜಾತ್ಯತೀತ ಪ್ರತಿಪರ ರಂಗ(ಎಸ್‌ಪಿಎಫ್) ಭಾರೀ ವಿಜಯ ಸಾಧಿಸಿದೆ, ಎಲ್ಲಾ 21 ಪಾಲಿಕೆಗಳಲ್ಲಿ ಬಹುಮತವನ್ನು ಪಡೆದುಕೊಂಡಿದೆ.**

ಫೆಬ್ರವರಿ 19 ರಂದು ಹತ್ತು ವರ್ಷಗಳ ಅಂತರಾಳದ ನಂತರ ಚುನಾವಣೆ ನಡೆದಿತ್ತು. 138 ಪುರಸಭೆಗಳು, 489 ಪಟ್ಟಣ ಪಂಚಾಯಿತಿಗಳು, 21 ಪಾಲಿಕೆಗಳಿಗೆ ಚುನಾವಣೆ ನಡೆದಿತ್ತು. ರಾಜಧಾನಿ ಚೆನ್ನೈ ಸೇರಿದಂತೆ 21 ನಗರ ಪಾಲಿಕೆಗಳು, ಪುರಸಭೆಗಳು, ಪಟ್ಟಣ ಪಂಚಾಯತ್‌ಗಳು 12,000 ಕ್ಕೂ ಹೆಚ್ಚು ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

21 ಪಾಲಿಕೆಗಳ 1,373 ವಾರ್ಡ್‌ಗಳ ಪೈಕಿ ಡಿಎಂಕೆ ಮೈತ್ರಿಕೂಟ 1,100 ವಾರ್ಡ್‌ಗಳಲ್ಲಿ ಜಯಗಳಿಸಿದರೆ, ಎಐಎಡಿಎಂಕೆ 164 ರಲ್ಲಿ ಗೆದ್ದಿದೆ. 138 ಪುರಸಭೆಗಳಾದ್ಯಂತ 3824 ವಾರ್ಡ್‌ಗಳಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟವು 2,666 ಅಥವಾ ಶೇಕಡಾ 70ರಷ್ಟು ವಾರ್ಡ್‌ಗಳನ್ನು ಪಡೆದುಕೊಂಡಿದೆ. 110 ರಿಂದ 120 ಅಧ್ಯಕ್ಷ ಸ್ಥಾನಗಳನ್ನು ಪಡೆಯುವ ನಿರೀಕ್ಷೆಯಿದೆ.

ಡಿಎಂಕೆ ವರಿಷ್ಠ ಎಂ.ಕೆ.ಸ್ಟಾಲಿನ್ ಮುಖ್ಯಮಂತ್ರಿಯಾದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಡಿಎಂಕೆ ಸತತ ನಾಲ್ಕನೇ ಬಾರಿ ನಗರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆಲುವು ಕಾಣುತ್ತಿದೆ. ಸತತ ಮೂರು ಚುನಾವಣಾ ಸೋಲಿನ ನಂತರ ಎಐಎಡಿಎಂಕೆ ಈ ಬಾರಿಯೂ ಭಾರೀ ಹಿನ್ನಡೆಯನ್ನು ಅನುಭವಿಸಿದೆ.

ಎಸ್‌ಪಿಎಫ್ ತೂತುಕುಡಿಯಲ್ಲಿ 60 ವಾರ್ಡ್‌ಗಳ ಪೈಕಿ 50 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದೆ. ತೇಣಿ ಜಿಲ್ಲೆಯ ಆರು ಪುರಸಭೆಗಳನ್ನು ವಶಪಡಿಸಿಕೊಂಡಿದ್ದು, ಎಐಎಡಿಎಂಕೆ ಭದ್ರಕೋಟೆ ಕೊಯಮತ್ತೂರಿನಲ್ಲಿಯೂ ಡಿಎಂಕೆ ಗೆಲುವು ಸಾಧಿಸಿದೆ.

ಡಿಎಂಕೆ ನೇತೃತ್ವದ ಜಾತ್ಯತೀತ ರಂಗ , ಇದುವರೆಗೆ ಎಐಎಡಿಎಂಕೆ ಹಿಡಿತದಲ್ಲಿದ್ದ ಕೊಂಗು ಪ್ರದೇಶದಲ್ಲಿ ಗಮನಾರ್ಹ ಜಯ ಗಳಿಸಿರುವುದು. ಈ ಚುನಾವಣೆಗಳ ಇನ್ನೊಂದು ವಿಶಿಷ್ಟತೆ.

ಗೆದ್ದ ಎಸ್‌ಪಿಎಫ್ ಅಭ್ಯರ್ಥಿಗಳಲ್ಲಿಯೂ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿದೆ. ಅಲ್ಲದೆ ಚುನಾವಣಾ ಪ್ರಚಾರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು, ಅದರಲ್ಲೂ ಯುವತಿಯರು ಭಾಗವಹಿಸಿದ್ದರು. ಈ ಚುನಾವಣೆಗಳಲ್ಲಿ 50% ಸಿಟುಗಳು ಮಹಿಳೆಯರಿಗೆ ಮೀಸಲಾಗಿದ್ದವು.

**166 ಸ್ಥಾನಗಳಲ್ಲಿ ಸಿಪಿಐ(ಎಂ) ಗೆಲುವು**

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಒಟ್ಟು 166 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. 66 ಕಾರ್ಪೊರೇಷನ್ ವಾರ್ಡುಗಳಲ್ಲಿ ಸ್ಪರ್ಧಿಸಿ 24 ರಲ್ಲಿ, 169ಮುನಿಸಿಪಾಲಿಟಿ ವಾರ್ಡುಗಳಲ್ಲಿ ಸ್ಪರ್ಧಿಸಿ 41 ವಾರ್ಡುಗಳಲ್ಲಿ, 374 ಪಟ್ಟಣ ಪಂಚಾಯತಿ ವಾರ್ಡುಗಳಲ್ಲಿ ಸ್ಪರ್ಧಿಸಿ 101ರಲ್ಲಿ ಗೆಲುವು ಸಾಧಿಸಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ ಒಟ್ಟು 57 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. 12 ಕಾರ್ಪೊರೇಷನ್ ವಾರ್ಡುಗಳಲ್ಲಿ, 19 ಮುನಿಸಿಪಾಲಿಟಿ ವಾರ್ಡುಗಳಲ್ಲಿ, 26 ಪಟ್ಟಣ ಪಂಚಾಯತಿ ವಾರ್ಡುಗಳಲ್ಲಿ ಗೆಲುವು ಸಾಧಿಸಿದೆ.

ಇವರಲ್ಲಿ ಅರ್ಧದಷ್ಟು ಮಹಿಳೆಯರು ಎಂಬುದು ಗಮನಾರ್ಹ.

ಈ ಚುನಾವಣೆಗಳ ನಂತರ ಸಿಪಿಐ(ಎಂ) 21 ರಲ್ಲಿ 12 ಕಾರ್ಪೊರೇಷನ್‌ಗಳಲ್ಲಿ ಮತ್ತು 21 ಜಿಲ್ಲೆಗಳಲ್ಲಿ ಪ್ರಾತಿನಿಧ್ಯ ಹೊಂದಿರುತ್ತದೆ. ಕೊವಿಲ್‌ಪಟ್ಟಿ ಮುನಿಸಿಪಾಲಿಟಿಯಲ್ಲಿ ಅದು ಸ್ಪರ್ಧಿಸಿದ್ದ ಎಲ್ಲ ಸ್ಥಾನಗಳಲ್ಲಿ ಗೆದ್ದಿದೆ.

ಸಿಪಿಐ(ಎಂ) ಅತಿ ದೊಡ್ಡ ವಿಜಯ ಪಡೆದಿರುವುದು ಕನ್ಯಾಕುಮಾರಿ ಜಿಲ್ಲೆಯಲ್ಲಿ. ಅಲ್ಲಿ 15 ಮುನಿಸಿಪ್ ಸ್ಥಾನಗಳನ್ನು ಪಡೆದಿದೆ. ಇದರಲ್ಲಿ ಮಹಿಳೆಯರು 10 ಹಾಗೂ ಟೌನ್ ಪಂಚಾಯತುಗಳಲ್ಲಿ 42 ಸ್ಥಾನಗಳನ್ನು ಪಡೆದಿದೆ, ಇದರಲ್ಲಿ 22 ಮಹಿಳೆಯರು.

ಎಐಎಡಿಎಂಕೆ ರಂಗದಿಂದ ಪ್ರತ್ಯೇಕವಾಗಿ ಸ್ಪರ್ಧಿಸಿದ ಬಿಜೆಪಿ ತನ್ನ ಅಗಾಧ ಹಣಬಲ ಮತ್ತು ಮೋದಿ ನಾಮಬಲದ ಹೊರತಾಗಿಯೂ ಚೆನ್ನೈ ಕಾರ್ಪೊರೇಷನ್‌ನಲ್ಲಿ ಕೇವಲ ಒಂದು ಸ್ಥಾನವನ್ನು, ಮತ್ತು ಟೌನ್ ಪಂಚಾಯತುಗಳಲ್ಲಿ 308 ಸ್ಥಾನಗಳನ್ನು ಮಾತ್ರ ಗೆಲ್ಲುವದು ಸಾ.ಧ್ಯವಾಗಿದೆ, ಅದರ ಮತಗಳಿಕೆ 1.76%ದಿಂದ 2.4%ಕ್ಕೆ ತುಸು ಏರಿಕೆ ಕಂಡಿದೆ.

ಕೋಮುವಾದಿ ಶಕ್ತಿಗಳು ರಾಜಕೀಯ ವಾತಾವರಣವನ್ನು ಕೆಡಿಸದಂತೆ ತಡೆಯಲು ಸಾಧ್ಯವಿದೆ ಎಂದು ಡಿಎಂಕೆ ನೇತೃತ್ವದ ಮೈತ್ರಿಕೂಟದ ಈ ಭಾರೀ ವಿಜಯ ತೋರಿಸಿಕೊಟ್ಟಿದೆ ಎಂದು ಸಿಪಿಐ(ಎಂ) ಹೇಳಿದೆ.





**ಫೆಬ್ರುವರಿ 18ರ ಮಧ್ಯರಾತ್ರಿಯಲ್ಲಿ ಪೋಲಿಸ್ ವೇಷದಲ್ಲಿ ಬಂದ ನಾಲ್ವರು ಕೊಲ್ಕತಾದ ಪ್ರಮುಖ ವಿದ್ಯಾರ್ಥಿ ಮುಖಂಡ ಅನಿಷ್ ಖಾನ್‌ರವರ ಕಗ್ಗೊಲೆ ನಡೆಸಿದರು. ಇದಕ್ಕೆ ರಾಜ್ಯಾದ್ಯಂತ ಭಾರೀ ಆಕ್ರೋಶ ವ್ಯಕ್ತವಾಗಿದೆ.**

ಆನಿಷ್ ಖಾನ್ ಅಲಿಯಾ ವಿಶ್ವವಿದ್ಯಾಲಯದ ಪ್ರತಿಭಾನ್ವಿತ ಎಂಬಿಎ ವಿದ್ಯಾರ್ಥಿಯಾಗಿದ್ದು, ಅಲ್ಲಿ ಒಬ್ಬ ಪ್ರೀತಿಪಾತ್ರ ವಿದ್ಯಾರ್ಥಿ ಮುಖಂಡರಾಗಿ ಹೊಮ್ಮಿದ ವ್ಯಕ್ತಿ. ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ದ ಕೊಲ್ಕತಾದಲ್ಲಿ ನಡೆದ ಪ್ರತಿಭಟನೆಯ ಒಬ್ಬ ಪ್ರಮುಖ ಮುಖಂಡರೂ ಆಗಿದ್ದರು. ಅಲ್ಲದೆ ತೃಣಮೂಲ ಕಾಂಗ್ರೆಸ್ ಸರಕಾರದ ಪ್ರಖರ ಟೀಕಾಕಾರರೂ ಆಗಿದ್ದರು.

ಸಿಪಿಐ(ಎಂ) ಕೊಲೆಗಡುಕರನ್ನು ಕ್ಷಣವೇ ಗುರುತಿಸಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದೆ.

ಇವರ ಕಗ್ಗೋಲೆ ವಿರುದ್ಧ ಈಗ ಪ್ರತಿದಿನವೆಂಬಂತೆ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದು, ಇದರಲ್ಲಿ ಎಡ ನೇತೃತ್ವದ ವಿದ್ಯಾರ್ಥಿ ಸಂಘಟನೆಗಳು ಮಾತ್ರವಲ್ಲದೆ, ಅಧ್ಯಾಪಕರು, ಕವಿಗಳು, ಸಾಹಿತಿಗಳು, ಸಂಗೀತಗಾರರು, ರಂಗ ಕಲಾವಿದರು,, ಡಾಕ್ಟರುಗಳು, ವಕೀಲರು ಭಾಗವಹಿಸುತ್ತಿದ್ದಾರೆ.

ಇಂತಹ ಒಂದು ಬೃಹತ್ ಪ್ರತಿಭಟನೆಯಲ್ಲಿ ಎಸ್‌ಎಫ್‌ಐನ ಮುಖಂಡರಾದ ಮಯೂಖ್ ಬಿಸ್ವಾಸ್, ದೀಪ್ಸಿತಾ ಧರ್, ಶ್ರೀಜಿಬ್ ಭಟ್ಟಾಚಾರ್ಯ ಮತ್ತಿತರರು ಭಾಗವಹಿಸಿದರು.

**ಕಾಂ. ಬಚ್ಚೀರಾಂ ಕೌಶ್ವಲ್,** ಉತ್ತರಾಖಂಡದ ಹಿರಿಯ ಸಿಪಿಐ(ಎಂ) ಮುಖಂಡರೂ, ಈ ಹಿಂದೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆಗಿದ್ದವರು, ಫೆಬ್ರುವರಿ 23 ರಂದು ನಿಧನರಾಗಿದ್ದಾರೆ.



**ಕಾಂ. ನಾರಾಯಣ ರೂಪಿಣಿ,** ತ್ರಿಪುರಾದ ಹಿರಿಯ ಸಿಪಿಐ(ಎಂ) ಮುಖಂಡರು, ಬುಡಕಟ್ಟು ಸಮುದಾಯಗಳ ಹಕ್ಕುಗಳ ಹೋರಾಟಗಾರ, ಫೆಬ್ರುವರಿ 25 ರಂದು ನಿಧನರಾಗಿದ್ದಾರೆ.



## ಉಕ್ರೇನಿನಲ್ಲಿ ಶಾಂತಿ ಸ್ಥಾಪಿಸಲು ಆದ್ಯತೆ ನೀಡಬೇಕು: ಸಿಪಿಐ(ಎಂ) ಪೊಲಿಟ್ ಬ್ಯುರೊ

ರಷ್ಯಾ ಮತ್ತು ಉಕ್ರೇನ್ ನಡುವಿನ ಸಶಸ್ತ್ರ ಘರ್ಷಣೆಯ ಬಗ್ಗೆ ಸಿಪಿಐ(ಎಂ) ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ. ಉಕ್ರೇನ್ ವಿರುದ್ಧ ರಷ್ಯಾ ಮಿಲಿಟರಿ ಕಾರ್ಯಾಚರಣೆ ಕೈಗೊಂಡಿರುವುದು ದುರದೃಷ್ಟಕರ. ಸಶಸ್ತ್ರ ವೈಷಮ್ಯಗಳು ತಕ್ಷಣವೇ ನಿಲ್ಲಬೇಕು ಮತ್ತು ಶಾಂತಿ ಸ್ಥಾಪನೆಯಾಗಬೇಕು ಎಂದು ಅದು ಹೇಳಿದೆ.

ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರ, ಅಮೆರಿಕ ಸಂಯುಕ್ತ ಸಂಸ್ಥಾನ ನೇತೃತ್ವದ ನಾಟೋ ರಷ್ಯಾಕ್ಕೆ ನೀಡಿದ ಭರವಸೆಗೆ ವ್ಯತಿರಿಕ್ತವಾಗಿ ಪೂರ್ವದತ್ತ ವಿಸ್ತರಿಸುತ್ತಿದೆ. ಉಕ್ರೇನ್ ನಾಟೋ ಸೇರುವಂತೆ ಮಾಡುವ ಪ್ರಯತ್ನಗಳು ರಷ್ಯಾದ ಭದ್ರತೆಗೆ ನೇರ ಬೆದರಿಕೆಯನ್ನುಂಟುಮಾಡುತ್ತವೆ. ಪೂರ್ವ ಯುರೋಪಿನ ತನ್ನ ಗಡಿಗಳಲ್ಲಿ ನಾಟೋ ಪಡೆಗಳು ಮತ್ತು ಕ್ಷಿಪಣಿಗಳ ಉಪಸ್ಥಿತಿಯಿಂದ ಉಂಟಾಗುವ ಬೆದರಿಕೆಯಿಂದಾಗಿಯೂ ರಷ್ಯಾ ತನ್ನ ಭದ್ರತೆಯ ಬಗ್ಗೆ ಕಳವಳಗೊಂಡಿದೆ. ಆದ್ದರಿಂದ ಉಕ್ರೇನ್ ನಾಟೋಗೆ ಸೇರದಿರುವುದು ಸೇರಿದಂತೆ ಭದ್ರತಾ ಖಾತರಿಗಳನ್ನು ರಷ್ಯಾ ಆಗ್ರಹಿಸುತ್ತಿರುವುದು ನ್ಯಾಯಸಮ್ಮತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ.

ರಷ್ಯಾದ ಭದ್ರತಾ ಅಗತ್ಯಗಳನ್ನು ಪೂರೈಸಲು ಅಮೆರಿಕ ಮತ್ತು ನಾಟೋದ ನಿರಾಕರಣೆ ಮತ್ತು ಈ ಪ್ರದೇಶಕ್ಕೆ ಸೈನ್ಯವನ್ನು ಕಳುಹಿಸುವ ಅಮೆರಿಕದ ಯುದ್ಧಕೋರತನ ಉದ್ವಿಗ್ನತೆಯನ್ನು ಹೆಚ್ಚಿಸಿದೆ. ಶಾಂತಿಯನ್ನು ಸ್ಥಾಪಿಸಬೇಕಾದರೆ, ಪೂರ್ವ ಉಕ್ರೇನ್ನಲ್ಲಿರುವ ಡಾನ್ಬಾಸ್ ಪ್ರದೇಶ ಸೇರಿದಂತೆ ಎಲ್ಲಾ ಜನಗಳ ನೈಜ ಆತಂಕಗಳನ್ನು ಪರಿಗಣಿಸಬೇಕಾಗುತ್ತದೆ. ಮಾತುಕತೆಗಳ ಪ್ರಕ್ರಿಯೆಯನ್ನು ಪುನರಾರಂಭಿಸಬೇಕು ಮತ್ತು ಎರಡೂ ಪಕ್ಷಗಳು ಮಾಡಿಕೊಂಡಿರುವ ಹಿಂದಿನ ಒಪ್ಪಂದಗಳಿಗೆ ಬದ್ಧವಾಗಿರಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಉಕ್ರೇನಿನಲ್ಲಿ ಸಿಲುಕಿಕೊಂಡಿರುವ ಸಾವಿರಾರು ಭಾರತೀಯ ನಾಗರಿಕರ, ಮುಖ್ಯವಾಗಿ ವಿದ್ಯಾರ್ಥಿಗಳ ಸುರಕ್ಷತೆಯನ್ನು ಖಚಿತಪಡಿಸಲು ತಕ್ಷಣವೇ ಕ್ರಮಗಳನ್ನು ಮತ್ತು ಎಲ್ಲಾ ಭಾರತೀಯ ನಾಗರಿಕರನ್ನು ಸ್ಥಳಾಂತರಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಭಾರತ ಸರಕಾರವನ್ನು ಆಗ್ರಹಿಸಿದೆ.

# ಉಕ್ರೇನ್ ಯುದ್ಧದ ಕುರಿತ ಪ್ರಶ್ನೆಗಳು

**ಉಕ್ರೇನಿನಲ್ಲಿ ರಷ್ಯಾ–ಅನಿರೀಕ್ಷಿತ ಮಿಲಿಟರಿ ದಾಳಿಯ ನಂತರ ಹಲವು ಪ್ರಶ್ನೆಗಳು ಎದ್ದಿವೆ. ದಾಳಿಯ ನಂತರ ಉಕ್ರೇನಿನಲ್ಲಿ ಸ್ಥಿತಿ ಏನಿದೆ? ಉಕ್ರೇನ್ ಬಿಕ್ಕಟ್ಟಿನ ಚಾರಿತ್ರಿಕ, ರಾಜಕೀಯ ಹಿನ್ನೆಲೆ ಏನು? ಈ ಬಿಕ್ಕಟ್ಟು ಯುದ್ಧಕ್ಕೆ ಎಡೆ ಮಾಡಿಕೊಟ್ಟ ತಕ್ಷಣದ ಕಾರಣಗಳೇನು? ಈ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರಗಳು ಇರಲಿಲ್ಲವೇ? ಈ ಕೆಲವು ಪ್ರಶ್ನೆಗಳಿಗೆ ಉತ್ತರ.**

ಜಗದ ಸುತ್ತ

**ವಸಂತರಾಜ ಎನ್.ಕೆ.**




**ಉಕ್ರೇನಿನಲ್ಲಿ ರಷ್ಯಾ ಮಿಲಿಟರಿ ದಾಳಿಯ ನಂತರ ಸ್ಥಿತಿ ಏನಿದೆ?**

ಫೆ.25 ರಂದು ರಾತ್ರಿ 9ರ ಹೊತ್ತಿನ ವರದಿ ಪ್ರಕಾರ ರಷ್ಯಾ ಮಿಲಿಟರಿ ಪಡೆಗಳು ಬಂಡುಕೋರರ ನಿಯಂತ್ರದಲ್ಲಿದ್ದ ಡೊನ್ ಬಾಸ್ ಪ್ರದೇಶದ ಪೂರ್ವದ ಪ್ರಾಂತಗಳ ಒಳಗೆ ಪ್ರವೇಶಿಸಿದೆ. ಅಲ್ಲಿ ಆಗಲೇ ಉಕ್ರೇನಿನ ಮಿಲಿಟರಿ ದಾಳಿಗೆ ಒಳಗಾಗಿದ್ದ ಬಂಡುಕೋರರಿಗೆ ಬೆಂಬಲಕ್ಕೆ ನಿಂತಿದೆ. ದಕ್ಷಿಣದ ಒಡೆಸ್ಸಾ ನಗರ ಸೇರಿದಂತೆ ಹಲವು ಕಡೆ ಮಿಲಿಟರಿ ಪಡೆಗಳನ್ನು ಇಳಿಸಲಾಗಿದೆ. ಇದಲ್ಲದೆ ರಾಜಧಾನಿ ಕಿಯಾವ್, ಖಾರ್ಕಿವ್ ಸೇರಿದಂತೆ ಉಕ್ರೇನಿನ ವಿವಿಧ ಪ್ರದೇಶಗಳಲ್ಲಿರುವ 100ಕ್ಕೂ ಹೆಚ್ಚು ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ, ಶೆಲ್ ದಾಳಿಗಳನ್ನು ನಡೆಸಲಾಗಿದೆ. 12ಕ್ಕೂ ಹೆಚ್ಚು ವಿಮಾನ ನೆಲೆಗಳನ್ನು ನಾಶ ಮಾಡಲಾಗಿದೆ. ಆದರೆ ಯಾವುದೇ ನಾಗರಿಕ ವಾಸಪ್ರದೇಶಗಳ ಮೇಲೆ ದಾಳಿ ನಡೆದಿಲ್ಲ ಎಂದು ರಶ್ಯ ತಿಳಿಸಿದೆ. ರಶ್ಯದ 6 ವಿಮಾನಗಳನ್ನು ಹೊಡೆದುರಳಿಸಲಾಗಿದೆ ಮತ್ತು 40ಕ್ಕೂ ಹೆಚ್ಚು ರಶ್ಯನರು ಸತ್ತಿದ್ದಾರೆ. 130ಕ್ಕೂ ಹೆಚ್ಚು ಉಕ್ರೇನಿಯನ್ನರು ರಶ್ಯನ್ ದಾಳಿಯಲ್ಲಿ ಸತ್ತಿದ್ದಾರೆ. ಸ್ಥಗಿತಗೊಳಿಸಿರುವ ಚೆರ್ನೊಬಿಲ್ ಅಣುಶಕ್ತಿ ಸ್ಥಾವರವನ್ನು ರಶ್ಯನ್ ಪಡೆಗಳು ವಶಪಡಿಸಿಕೊಂಡಿವೆ. ಹಲವು ಕಡೆ ರಶ್ಯನ್ ಮತ್ತು ಉಕ್ರೇನಿ ಸೈನ್ಯಗಳ ನಡುವೆ ಘರ್ಷಣೆ ನಡೆದಿದೆ. ಬೈಲೋರಶ್ಯನ್ ಯುದ್ಧವಿಮಾನಗಳು ಉತ್ತರದಿಂದ ದಾಳಿ ಮಾಡಿವೆ. ಉತ್ತರದಲ್ಲಿ ಬೈಲೋರಶ್ಯದಿಂದ ಬಂದ ರಶ್ಯನ್ ಪಡೆಗಳು ರಾಜಧಾನಿ ಕಿಯಾವ್ ಹತ್ತಿರ ಬಂದಿವೆ ಎಂದು ಉಕ್ರೇನಿ ವರದಿಗಳು ತಿಳಿಸಿವೆ.

ರಾಜಧಾನಿ ಕಿಯಾವ್ ಸೇರಿದಂತೆ ದಾಳಿಗೆ ಒಳಗಾದ ಉಕ್ರೇನಿ ನಗರಗಳಲ್ಲಿ ಆತಂಕ ಮೂಡಿದ್ದು ಹಲವು ಬಾರಿ ವಿಮಾನದಾಳಿಯ ಸೈರನ್ ಬಾರಿಸಲಾಗುತ್ತಿದ್ದು, ಜನ ಮೆಟ್ರೋ ಸ್ಟೇಶನ್ ಮತ್ತಿತರ ಬಾಂಬ್ ಶೆಲ್ಟರ್ ಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಜನ ಸಿಕ್ಕಿದ ವಾಹನಗಳಲ್ಲಿ ಪಶ್ಚಿಮದ ಗಡಿಗಳತ್ತ ಚಲಿಸುತ್ತಿದ್ದು ಪೋಲೆಂಡ್, ರೊಮೇನಿಯಾ, ಮೊಲ್ಡೊವಾ, ಸ್ಲೋವಾಕಿಯ ಮುಂತಾದ ನೆರೆಯ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಉಕ್ರೇನ್ ಪ್ರಧಾನಿ ಪಶ್ಚಿಮದ ದೇಶಗಳಿಗೆ ಮಿಲಿಟರಿ ನೆರವಿಗೆ ಬರಲು ಕೋರಿಕೊಳ್ಳುತ್ತಿದ್ದಾರೆ. ನಾಟೋ ದೇಶಗಳ ಸಭೆ ನಡೆದಿದ್ದು ಯು.ಎಸ್, ಯು.ಕೆ, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳು ತೀಕ್ಷ್ಣವಾದ ಆರ್ಥಿಕ ದಿಗ್ಬಂಧನದ ಕ್ರಮಗಳನ್ನು ಘೋಷಿಸಿವೆ. ಹಲವಾರು ರಶ್ಯನ್ ಬ್ಯಾಂಕುಗಳು, ಕಂಪನಿಗಳು, ಉದ್ಯಮಿಗಳು, ಸರಕಾರಿ ಮಿಲಿಟರಿ ಅಧಿಕಾರಿಗಳ ಪಶ್ಚಿಮದಲ್ಲಿರುವ ಆಸ್ತಿಯನ್ನು ದಿಗ್ಬಂಧನಕ್ಕೆ ಒಳಪಡಿಸಲಾಗಿದೆ. ಇವುಗಳ ರಫ್ತು–ಆಮದು, ತಂತ್ರಜ್ಞಾನ ವರ್ಗಾವಣೆ, ಹಣಕಾಸು ವ್ಯವಹಾರಗಳ ಮೇಲೆ ದಿಗ್ಬಂಧನ ಹಾಕಲಾಗಿದೆ. ರಶ್ಯ ಉಕ್ರೇನಿನ ಮೇಲೆ ಪೂರ್ಣ ಪ್ರಮಾಣದ ಮಿಲಿಟರಿ ಯುದ್ಧ ತೊಡಗಿದ್ದರೆ, ನಾಟೋ ದೇಶಗಳು ಪೂರ್ಣ ಪ್ರಮಾಣದ ಆರ್ಥಿಕ ಯುದ್ಧ ಘೋಷಿಸಿವೆ.

ಪೂರ್ವ ಯುರೋಪಿನ ನಾಟೋ ದೇಶಗಳಿಗೆ ಮಿಲಿಟರಿ ನೆರವು ಕಳಿಸುತ್ತಿದ್ದು, ಉಕ್ರೇನಿಗೆ ನಾಟೋ ಪಡೆಗಳು ಕಳಿಸುವುದಿಲ್ಲವೆಂದು ಯು.ಎಸ್ ಅಧ್ಯಕ್ಷ ಬಿಡೆನ್ ಸೇರಿದಂತೆ ಎಲ್ಲ ಪಶ್ಚಿಮದ ನಾಯಕರು ಸ್ಪಷ್ಟಪಡಿಸಿದ್ದಾರೆ. ಉಕ್ರೇನಿನ ಮಿಲಿಟರಿ ಬಲವನ್ನು ಕುಗ್ಗಿಸಲಾಗಿದೆ. ಉಕ್ರೇನನ್ನು ವಶಪಡಿಸಿಕೊಳ್ಳುವುದು ರಶ್ಯದ ಉದ್ದೇಶವಲ್ಲ. ರಶ್ಯನ್ ಮೂಲದ ಜನರ ದಮನ ನಿಲ್ಲಿಸುವುದು, ಅವರ ನಾಗರಿಕ ಹಕ್ಕುಗಳನ್ನು ಮರಳಿ ಕೊಡಿಸುವುದು, ಉಕ್ರೇನನ್ನು ಮಿಲಿಟರಿ–ಮುಕ್ತಗೊಳಿಸುವುದು, ಸರಕಾರವನ್ನು ನಾಜಿ–ಮುಕ್ತಗೊಳಿಸುವುದಷ್ಟೆ ರಶ್ಯದ ಉದ್ದೇಶ. ಸರಕಾರವನ್ನು ಕೆಳಗಿಳಿಸಿ ಉಕ್ರೇನ್ ಮಿಲಿಟರಿ ಶರಣಾದರೆ ಯುದ್ಧ ನಿಲ್ಲಿಸುತ್ತೇವೆ ಎಂದು ರಶ್ಯದ ವಿದೇಶ ಮಂತ್ರಿ ಹೇಳಿದ್ದಾರೆ. ಈ ವರೆಗೆ ಎರಡೂ ಕಡೆಯಿಂದ ಕದನವಿರಾಮ ಅಥವಾ ಮಾತುಕತೆ ನಡೆಸುವ ಯಾವ ಪ್ರಸ್ತಾವವೂ ಬಂದಿಲ್ಲ.

**ಉಕ್ರೇನ್ ಬಿಕ್ಕಟ್ಟಿನ ಚಾರಿತ್ರಿಕ, ರಾಜಕೀಯ ಹಿನ್ನೆಲೆ ಏನು?**

ಉಕ್ರೇನ್ ಚಾರಿತ್ರಿಕವಾಗಿ ಕೆಲವು ಅವಧಿಗಳನ್ನು ಬಿಟ್ಟರೆ ಒಂದು ದೇಶವಾಗಿ ಅಥವಾ ರಾಜಕೀಯ ಘಟಕವಾಗಿರಲಿಲ್ಲ. ಅದರ ವಿವಿಧ ಪ್ರದೇಶಗಳು ವಿವಿಧ ಕಾಲ ಘಟ್ಟಗಳಲ್ಲಿ ಆಸ್ಟ್ರೋ–ಹಂಗೇರಿಯನ್, ರಶ್ಯನ್ ಸಾಮ್ರಾಜ್ಯದ ಭಾಗಗಳಾಗಿದ್ದವು. ಇತರ ಹಲವು ಪೂರ್ವ ಯುರೋಪಿನ ದೇಶಗಳಂತೆ ಉಕ್ರೇನ್ ಸಹ ಹಲವು ಬುಡಕಟ್ಟು, ಭಾಷೆ, ಮತಗಳ ಜನರಿರುವ ಬಹುತ್ವ ಪ್ರಧಾನವಾಗಿರುವ ದೇಶವಾಗಿತ್ತು. ಉಕ್ರೇನಿಯನ್ ಅಲ್ಲದೆ ರಶ್ಯನ್, ಪೋಲಿಷ್, ರೊಮೇನಿಯನ್, ಮೊಲ್ಡೊವಿಯನ್ ಮುಂತಾದ ಭಾಷಿಕ ಜನರ ದೊಡ್ಡ ಅಲ್ಪಸಂಖ್ಯಾತ ಅಕ್ಟೋಬರ್ ಕ್ರಾಂತಿಯ ನಂತರವೇ ಉಕ್ರೇನ್ ಸೋವಿಯೆಟ್ ಒಕ್ಕೂಟದ ಭಾಗವಾಗಿದ್ದ ಸ್ವತಂತ್ರ ಗಣರಾಜ್ಯವಾಗಿತ್ತು. ಅದೇ ಸಮಯದಲ್ಲಿ ಅತ್ಯಂತ ಹೆಚ್ಚಿನ ಬೆಳವಣಿಗೆ ಕಂಡಿದ್ದು, ಸೋವಿಯೆಟ್ ಒಕ್ಕೂಟದ ಎರಡನೆಯ ಅತಿ ದೊಡ್ಡ ಮತ್ತು ಅತಿ ಪ್ರಬಲ ಗಣರಾಜ್ಯವಾಗಿತ್ತು.

ಮೊದಲು ಯುರೋಪಿಯನ್ ಮತ್ತು ಆ ಮೇಲೆ ಯುರೋಪಿಯನ್–ಅಮೆರಿಕನ್ ಸಾಮ್ರಾಜ್ಯಶಾಹಿಯ ಕೂಟವು, ಸೋವಿಯೆಟ್ ಯೂನಿಯನಿನ ಜನ್ಮದಿಂದ ಆರಂಭಿಸಿ ಅದರ ವಿಘಟನೆಗೆ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದವು. ಇದು ಉಕ್ರೇನ್ ಕುರಿತೂ ನಿಜವಾಗಿತ್ತು. ಉಕ್ರೇನಿಯನ್–ರಶ್ಯನ್ ಭಾಷಿಕರ ನಡುವೆ ಸಂಘರ್ಷದ ವಾತಾವರಣ ಸೃಷ್ಟಿಸಲು ಪ್ರಯತ್ನಿಸುವುದು, ನಾಜಿ–ಬೆಂಬಲಿಗರು ಸೇರಿದಂತೆ ಸೋವಿಯೆಟ್–ವಿರೋಧಿ ರಾಜಕೀಯ ವಿರೋಧಿಗಳ ಮೇಲೆ ಸೋವಿಯೆಟ್ ಸರಕಾರದ ಕ್ರಮಗಳನ್ನು ಉಕ್ರೇನಿಯನ್ ರಾಷ್ಟ್ರೀಯತೆಯನ್ನು ರಶ್ಯನರು ದಮನಿಸುತ್ತಿದ್ದಾರೆಂದು ಬಿಂಬಿಸುವುದು, ಇಂತಹ ಕೆಲವು ರಾಜಕೀಯ ವಿರೋಧಿಗಳನ್ನು ಬಳಸಿ ಬುಡಮೇಲು ಕೃತ್ಯಗಳನ್ನು ನಡೆಸುವುದು–ಇತ್ಯಾದಿ ಅದರ ತಂತ್ರವಾಗಿತ್ತು. 1980ರ ದಶಕದ ಕೊನೆಯಲ್ಲಿ ಸೋವಿಯೆಟ್ ಒಕ್ಕೂಟದೊಳಗೆ ಎದ್ದ ತುಮುಲವನ್ನು ಪೂರ್ಣವಾಗಿ ಬಳಸಿಕೊಂಡು ಈ ಬುಡಮೇಲು ಕೃತ್ಯಗಳು ಮುಂದುವರೆದವು. ಸೋವಿಯೆಟ್ ವಿಘಟನೆಯ ನಂತರವೂ ಈ ಚಟುವಟಿಕೆಗಳೂ ಇನ್ನಷ್ಟು ರಭಸದಿಂದ ನಡೆದವು.

ಗೋರ್ಬಚೆವ್ 1980ರ ದಶಕದ ಕೊನೆಯಲ್ಲಿ ತಮ್ಮ "ಶಾಂತಿ ಅಭಿಯಾನ"ದ ಏಕಪಕ್ಷೀಯ ಕ್ರಮಗಳ ಭರದಲ್ಲೋ, ಸಾಮ್ರಾಜ್ಯಶಾಹಿಯ ಒತ್ತಡದಲ್ಲೋ ಘೋಷಿಸಿದ ಒಂದು ಕ್ರಮ ಉಕ್ರೇನಿನ ಇಂದಿನ ಸಮಸ್ಯೆಗಳ ಮೂಲ. ಪೂರ್ವ ಯುರೋಪಿನ ಮತ್ತು ಸೋವಿಯೆಟ್ ಒಕ್ಕೂಟದ ಸಮಾಜವಾದಿ ದೇಶಗಳ ಜಂಟಿ ಶಾಂತಿ–ಭದ್ರತೆಗಳಿಗೆ ಬದ್ಧವಾಗಿದ್ದ "ವಾರ್ಸಾ ಒಪ್ಪಂದ" ಮಿಲಿಟರಿ ಕೂಟವನ್ನು ಏಕಪಕ್ಷೀಯವಾಗಿ ಬರ್ಖಾಸ್ತು ಮಾಡಿದ್ದು, ಆ ಕ್ರಮ. ಅಮೆರಿಕನ್ ವಿದೇಶಾಂಗ ಸಚಿವ ಬೇಕರ್ ನಾಟೋ ಕೂಟ ಮತ್ತು ಅದರ ಪಡೆಗಳು ಈಗಿನ 'ಗಡಿ ದಾಟಿ ಒಂದು ಇಂಚು' ಸಹ ಮುಂದೆ ಬರುವುದಿಲ್ಲವೆಂದು ಭರವಸೆ ಮತ್ತು ಪಶ್ಚಿಮ ಯುರೋಪಿನ ಜನರ ಒತ್ತಡದ ಫಲವಾಗಿ ನಾಟೋ ಮಿಲಿಟರಿ ಕೂಟ ಸಹ ಬರ್ಖಾಸ್ತಾಗುತ್ತದೆ ಎಂಬುದು ಗೋರ್ಬಚೆವ್ ನಿರೀಕ್ಷೆಯಾಗಿತ್ತು.

ಈ ಭರವಸೆಗಳಿಗೆ ವಿರುದ್ಧವಾಗಿ ಯು.ಎಸ್ ಮತ್ತು ನಾಟೋ ಸೋವಿಯೆಟ್ ಒಕ್ಕೂಟದ ವಿಘಟನೆಯ ನಂತರ, ಕಳೆದ ಮೂರು ದಶಕಗಳಲ್ಲಿ 14 ದೇಶಗಳನ್ನು (ಸರ್ಬಿಯಾ ಬಿಟ್ಟು ಎಲ್ಲ ಪೂರ್ವ ಯುರೋಪಿನ ಮಾಜಿ ಸಮಾಜವಾದಿ ಬಣದ ದೇಶಗಳು ಮತ್ತು ಮೂರು ಮಾಜಿ ಸೋವಿಯೆಟ್ ದೇಶಗಳು) ನಾಟೋ ಗೆ ಸೇರಿಸಿಕೊಳ್ಳಲಾಗಿದೆ. ಈ ದೇಶಗಳಲ್ಲಿ ನಾಟೋ ಪಡೆಗಳು ಅಣ್ವಸ್ತ್ರ ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸ್ಥಾಪಿಸಲಾಗಿದೆ. ಇವೆಲ್ಲವೂ ರಶ್ಯಾದ ಪಶ್ಚಿಮ ಗಡಿಯಲ್ಲಿದ್ದು ರಶ್ಯಾವನ್ನು ಸುತ್ತುವರೆಯುವ ಯು.ಎಸ್. ಯೋಜನೆಯ ಭಾಗವಾಗಿದೆ ಎಂಬುದು ರಶ್ಯಾದ ವಾಸ್ತವಿಕ ಆತಂಕ.

**ಈ ಬಿಕ್ಕಟ್ಟು ಯುದ್ಧಕ್ಕೆ ಎಡೆ ಮಾಡಿಕೊಟ್ಟ ತಕ್ಷಣದ ಕಾರಣಗಳೇನು?**

ಉಕ್ರೇನಿನಲ್ಲಿ ಯು.ಎಸ್ ಕೈಗೊಂಬೆ ಸರಕಾರ ಸ್ಥಾಪಿಸಿ ರಶ್ಯಾವನ್ನು ಈ ಸುತ್ತುವರೆಯುವಿಕೆಯನ್ನು ಪೂರ್ಣಗೊಳಿಸುವ ಹುನ್ನಾರವನ್ನು ಮೊದಲಿನಿಂದಲೂ ಮಾಡಿದೆ. ಇದಕ್ಕಾಗಿ ಹಿಂದೆ ಸೂಚಿಸಿದ ಹಾಗೆ ಹಲವು ಪ್ರಯತ್ನಗಳನ್ನು ನಡೆಸಿತ್ತು. ಉಕ್ರೇನ್ ಮತ್ತು ರಶ್ಯಾ ನಡುವೆ ಘನಿಷ್ಟ ಸಂಬಂಧವಿದ್ದು 2014 ರ ವರೆಗೆ ಅವರಿಗೆ ಕೈಗೊಂಬೆ ಸರಕಾರ ಸ್ಥಾಪಿಸುವುದು ಸಾಧ್ಯವಾಗಲಿಲ್ಲ. ಕೊನೆಗೂ ಆಗ ಉಕ್ರೇನಿನ ಚುನಾಯಿತ ಅಧ್ಯಕ್ಷನಾಗಿದ್ದ ಯಾಕುನೆವಿಚ್ ಅವರ ಸರಕಾರವನ್ನು ಕ್ಷಿಪ್ರಕ್ರಾಂತಿ ಮೂಲಕ ಉರುಳಿಸಿ ಬಲಪಂಥೀಯ ಉಗ್ರರಾಷ್ಟ್ರವಾದಿಗಳು ಮತ್ತು ನವ–ನಾಜಿ ಗುಂಪುಗಳನ್ನು ಅಧಿಕಾರಕ್ಕೆ ತರಲಾಯಿತು. ಆ ಅವಧಿಯಲ್ಲಿ ರಶ್ಯನ್ ಅಲ್ಪಸಂಖ್ಯಾತರ, ಅವರ ಹಕ್ಕುಗಳ ಮೇಲೆ ತೀವ್ರ ದಾಳಿಗಳು ನಡೆದವು. ಅಲ್ಪಸಂಖ್ಯಾತರ ಭಾಷೆಯ ಶಿಕ್ಷಣ ಸಂಸ್ಥೆಗಳು, ಮಾಧ್ಯಮಗಳನ್ನು ಮುಚ್ಚಲಾಯಿತು. ಕಮ್ಯುನಿಸ್ಟ್ ಮತ್ತಿತರ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳನ್ನು ದಮನ ಮಾಡಲಾಯಿತು. ರಶ್ಯನ್ ಅಲ್ಪಸಂಖ್ಯಾತರು ದಾಳಿ ತಡೆಯಲಾರದೆ ರಶ್ಯ ಕಡೆ ನಿರಾಶ್ರಿತರಾಗಿ ಓಡಲು ಆರಂಭಿಸಿದರು. ಈ ಕಾರಣ ಮುಂದಿಟ್ಟು ರಶ್ಯನ್ ಪಡೆಗಳು ಕ್ರಿಮಿಯ ವನ್ನು 'ವಿಮೋಚನೆ'ಗೊಳಿಸಿದವು. ದೊಂಬಾಸ್ ಪ್ರದೇಶದಲ್ಲಿ ಸ್ಥಳೀಯ ರಶ್ಯನ್ ಗೆರಿಲ್ಲಾ ಪಡೆಗಳ ಉಕ್ರೇನ್ ಸೈನ್ಯದ ವಿರುದ್ಧದ ಹೋರಾಟದಲ್ಲಿ ನೆರವು ನೀಡಿದವು.

ಆ ನಂತರ ಫ್ರಾನ್ಸ್, ಜರ್ಮನಿ, ರಶ್ಯಾ, ಉಕ್ರೇನ್ ಗಳ ಮಿನ್ಸ್ಕ ನಲ್ಲಿ ಶೃಂಗಸಭೆ ನಡೆದು ಕದನ ನಿಲುಗಡೆಯಾಯಿತು. ಇದನ್ನು ಮಿನ್ಸ್ಕ ಒಪ್ಪಂದ ಎಂದು ಕರೆಯಲಾಗುತ್ತದೆ. ಆದರೆ ಈ ಒಪ್ಪಂದವನ್ನು ಜಾರಿ ಮಾಡಲು ಉಕ್ರೇನ್ ಸರಕಾರ ಯಾವುದೇ ಆಸಕ್ತಿ ತೋರಿಸಲಿಲ್ಲ. ಇದರ ಜಾರಿಗೆ ಒತ್ತಡ ಹಾಕಬೇಕಿದ್ದ ಫ್ರಾನ್ಸ್, ಜರ್ಮನಿ, ಕಿರುಬೆರಳನ್ನೂ ಎತ್ತಲಿಲ್ಲ. ಪೂರ್ವ ಪ್ರಾಂತಗಳಲ್ಲಿರುವ ರಶ್ಯನ್ ಅಲ್ಪಸಂಖ್ಯಾತರ ಮೇಲೆ ಮಿಲಿಟರಿ ಮತ್ತು ನವನಾಜಿ ಪಡೆಗಳ ದಾಳಿಗಳು ಮುಂದುವರೆದವು. ಮಿಲಿಟರಿ ಸೇರಿದಂತೆ ಎಲ್ಲ ವಿಷಯಗಳಲ್ಲಿ ಸಲಹೆಗಾರರ ರೂಪದಲ್ಲಿ ಯು.ಎಸ್, ಮೂಗು ತೂರಿಸುತ್ತಿದೆ. ಉಕ್ರೇನ್ ನಾಟೋದ ಭಾಗವಾಗಿ ಅತ್ಯಾಧುನಿಕ ಕ್ಷಿಪಣಿಗಳನ್ನು ರಶ್ಯಾ ಗಡಿಗಳಲ್ಲಿ ಸ್ಥಾಪಿಸಿದರೆ, ಮಾಸ್ಕೋ ವನ್ನು ಕ್ಷಿಪಣಿಗಳು ಕೇವಲ 5 ನಿಮಿಷದಲ್ಲಿ ಮುಟ್ಟಬಹುದು. ಇಷ್ಟು ಕಡಿಮೆ ಸಮಯದಲ್ಲಿ ಯಾವುದೇ ಪ್ರತಿದಾಳಿ ಅಥವಾ ರಕ್ಷಣೆ ಸಾಧ್ಯವಿಲ್ಲ. ಹಾಗಾಗಿ ಇದು ದೇಶದ ಭದ್ರತೆಯ ಪ್ರಶ್ನೆ. ಇದನ್ನು ಆಗಗೊಡುವುದಿಲ್ಲವೆಂಬುದು ರಶ್ಯಾದ ದೃಢ ನಿರ್ಧಾರ. ಇದನ್ನು ರಶ್ಯಾ ಪುನರುಚ್ಚರಿಸುತ್ತಾ ಬಂದಿದೆ, ನಾಟೋ ಅದನ್ನು ನಿರ್ಲಕ್ಷದಿಂದ ಕಾಣುತ್ತಾ ಬಂದಿದೆ.

**ಈ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರಗಳು ಇರಲಿಲ್ಲವೇ?**

ಖಂಡಿತ ಇತ್ತು. ಉಕ್ರೇನ್ ಸರಕಾರ ಮಿನ್ಸ್ಕ ಒಪ್ಪಂದದ ಜಾರಿಗೆ ಬದ್ಧತೆಯ ಕುರಿತು ಪ್ರಾಮಾಣಿಕತೆ ಪ್ರದರ್ಶಿಸಿ ಆ ನಿಟ್ಟಿನಲ್ಲಿ ಭರವಸೆ ಮೂಡಿಸುವುದು, ಮತ್ತು ಆ ನಿಟ್ಟಿನಲ್ಲಿ ಫ್ರಾನ್ಸ್, ಜರ್ಮನಿಗಳು ಒತ್ತಡ ಹಾಕುವುದು ಸಾಧ್ಯವಿತ್ತು. ರಶ್ಯದ ಒತ್ತಾಯದಂತೆ, ಉಕ್ರೇನ್ ಮತ್ತು ಜಾರ್ಜಿಯ ನಾಟೋ ಕೂಟ ಸೇರುವುದಿಲ್ಲ ಮತ್ತು ರಶ್ಯದ ವಿರುದ್ಧ ಅಣ್ವಸ್ತ್ರ ಸಜ್ಜುಗೊಳಿಸುವುದಿಲ್ಲ ಎಂಬ ಲಿಖಿತ ಗ್ಯಾರಂಟಿ ಕೊಡುವುದು ಸಹ ಸಾಧ್ಯವಿತ್ತು. ಫ್ರಾನ್ಸ್ ಮತ್ತು ಜರ್ಮನಿಗಳು ರಶ್ಯಾದ ಭದ್ರತಾ ಆತಂಕ ನಿವಾರಿಸಲು ಮತ್ತು ಇಂತಹ ಖಾತ್ರಿ ಕೊಡಲು ಸಿದ್ಧವಿದ್ದವು. ಆದರೆ ಯು.ಎಸ್ ಇದಕ್ಕೆ ತಯಾರಿರಲಿಲ್ಲ. ನಾಟೋ ಇಂತಹ ಖಾತ್ರಿ ಕೊಡಲು ಸಾಧ್ಯವಿಲ್ಲ ಎಂದಿತು ಯು.ಎಸ್, ಉಕ್ರೇನ್ ಸಹ ಇಂತಹ ಖಾತ್ರಿ ಕೊಡಲೂ ಬಿಡಲಿಲ್ಲ.

ಉಕ್ರೇನಿನ ಗಡಿಗಳಲ್ಲಿ ಮಿಲಿಟರಿ ಕವಾಯಿತು ನಡೆಸಿದ್ದ ರಶ್ಯ, ಅದರ ಒತ್ತಡದಿಂದ ಕಳೆದ ಮೂರು ತಿಂಗಳುಗಳಿಂದ ಹಲವು ಸುತ್ತಿನ ಮಾತುಕತೆಗಳಲ್ಲಿ ರಶ್ಯ ಭಾಗವಹಿಸಿತು. ಅಧ್ಯಕ್ಷರ ಶೃಂಗಸಭೆ, ವಿದೇಶ ಮಂತ್ರಿಗಳ ಮಾತುಕತೆ, ಫ್ರಾನ್ಸ್, ಜರ್ಮನಿ ಪ್ರಧಾನಿಗಳ ಜತೆ ಮಾತುಕತೆಗಳಲ್ಲಿ ತಾಳ್ಮೆಯಿಂದ ಭಾಗವಹಿಸಿತು. ಆದರೆ ಒಂದು ಕಡೆ ಮಾತುಕತೆ ನಡೆಯುತ್ತಿದ್ದರೆ, ಇನ್ನೊಂದು ಕಡೆ ಯು.ಎಸ್/ಯು.ಕೆ ಸರಕಾರ ಮತ್ತು ಮಾಧ್ಯಮಗಳು ರಶ್ಯ ಮಿಲಿಟರಿ ದಾಳಿ ಈಗ ನಡೆಸಲಿದೆ ಆಗ ನಡೆಸಲಿದೆ ಎಂಬ ಭಾರೀ ಅಪಪ್ರಚಾರವನ್ನೂ ಹಾಗೂ ದಾಳಿ ಮಾಡಿದರೆ ಆ ದಿಗ್ಬಂಧನ ಹಾಕುತ್ತೇವೇ ಈ ಕ್ರಮ ಕೈಗೊಳ್ಳುತ್ತೇವೆ ಎಂಬ ಬೆದರಿಕೆಗಳ ಮಹಾಪೂರವನ್ನೂ ಹರಿಸಿದ್ದವು. ಮಾತುಕತೆಗಳು ವಿಫಲವಾಗವಂತೆ ಮಾಡಿದ್ದವು. ಇದರಿಂದ ತಾಳ್ಮೆಗೆಟ್ಟ ಅಧ್ಯಕ್ಷ ಪುಟಿನ್ ಮೊದಲು ಪೂರ್ವ ಉಕ್ರೇನ್ ಪ್ರಾಂತ್ಯಗಳು ಸ್ವತಂತ್ರ ದೇಶಗಳು ಎಂದು ಮನ್ನಣೆ ಕೊಡುವ ಮತ್ತು ಕೂಡಲೇ ಆ ಮೇಲೆ ಉಕ್ರೇನಿನ ಮೇಲೆ ಮಿಲಿಟರಿ ದಾಳಿಯ ಘೋಷಣೆ ಮಾಡಿದ್ದಾರೆ.

JANASHAKTHI KANNADA VARA PATRIKE FEBRUARY 28-MARCH 6, 2022 Price: Rs. 10/- Date of Publication: 25 FEBRUARY 2022 RNI No. KARKAN /2006/17926 Posted on 28-02-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2





# ದಲಿತರ ಪರ ಬಜೆಟ್ ಮಂಡಿಸಿ–ದಲಿತ ಹಕ್ಕುಗಳ ಸಮಿತಿ ಆಗ್ರಹ



ರಾಜ್ಯದ ಬಜೆಟ್ ನಲ್ಲಿ ದಲಿತರ ಜನಸಂಖ್ಯೆ ಆಧಾರದಲ್ಲಿ ಅನುಧಾನ ನೀಡಬೇಕು, ಎಸ್.ಸಿ.ಎಸ್ಪಿ ಮತ್ತು ಟಿ.ಎಸ್.ಪಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು, ಭೂ ವಂಚಿತ ದಲಿತರಿಗೆ ಭೂಮಿ ನೀಡುವಂತೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿಯಿಂದ ವಿಧಾನಸೌಧ ಚಲೋ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡುತ್ತಾ, ಸರ್ಕಾರ ದಲಿತರ ಪರ ಬಜೆಟ್ ಮಂಡಿಸಬೇಕು. ರಾಜ್ಯದ ಬಜೆಟ್‌ನಲ್ಲಿ ಪ್ರತಿ ವರ್ಷ ಸಕಾರ ದಲಿತರ ಅಭಿವೃದ್ಧಿಗೆ ಅನುಧಾನ ಒದಗಿಸುತ್ತದೆ.

2019–20 ರಲ್ಲಿ 27,558.60 ಕೋಟಿ ರೂ, 2020–21 ರಲ್ಲಿ 27,699.52 ಕೋಟಿ ರೂ, 2021–22 ರಲ್ಲಿ 26, 005.01 ಕೋಟಿ ಹಣ ಒದಗಿಸಿದೆ ಎಂದು ತಿಳಿಸಿದೆ. ಆದರೆ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಇತರೆ ನಿಗಮಗಳಿಗೆ ನೀಡಬೇಕಾದ ಹಣನ್ನೇ ನೀಡಿಲ್ಲ ಹಾಗಾಗಿ ನಿಗಮಗಳು ಸೊರಗುತ್ತಿವೆ ಎಂದರು.

12 ಸಾವಿರಕ್ಕೂ ಹೆಚ್ಚು ದಲಿತರು ಭೂಮಿಗಾಗಿ ಅರ್ಜಿ ಹಾಕಿಕೊಂಡು ಬಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ದಲಿತರಿಗೆ 2 ಎಕರೆ ಭೂಮಿ ನೀಡುವ ಭೂ ಒಡೆತನ ಯೋಜನೆಯಲ್ಲಿ ಎಷ್ಟು ಸಾವಿರ ಜನರಿಗೆ ಭೂಮಿ ನೀಡಿದ್ದಿರಿ. ಎಷ್ಟು ಸಾವಿರ ಜನರಿಗೆ ಬೋರ್ ವಲ್ ಒದಗಿಸಿದ್ದೀರಿ. ಕೊಳವೆ ಬಾವಿಗಾಗಿ 50 ಸಾವಿರ ಜನ ಅರ್ಜಿ ಹಾಕಿದ್ದಾರೆ. ಕಳೆದ ಮೂರು ವರ್ಷ ಹಿಂದೆ ಹಾಕಿದ ಬೊರ್‌ವೆಲ್‌ಗೆ ಕರೆಂಟ್ ಒದಗಿಸಿಲ್ಲ. ಅದರಲ್ಲಿ 94% ಪ್ರಗತಿ ಸಾಧಿಸಿದ್ದೇವೆಂದು ಮುಖ್ಯಮಂತ್ರಿ ಬೊಮ್ಮಾಯಿಯವರು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಶ್ವೇತ ಪತ್ರ ಹೊರಡಿಸಲಿ ಎಂದರು.

ಮತ್ತೋರ್ವ ಹಿರಿಯ ಮುಖಂಡ ನಿತ್ಯಾನಂದ ಸ್ವಾಮಿ ಮಾತನಾಡಿ, ಸಣ್ಣ ಮತ್ತು ಮಧ್ಯಮ ಸಣ್ಣ ಪ್ರಮಾಣದ ವ್ಯಾಪಾರಕ್ಕೆ ಕೋವಿಡ್‌ನಿಂದ ಸಂಪಾದನೆ ಇಲ್ಲವಾಗಿದೆ. ಸಣ್ಣ ಪ್ರಮಾಣದ ಸಾಲವು ಸಿಗಲಿಲ. ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿ ವೇತನ ಸಿಗಬೇಕು, ಹಾಸ್ಟಲ್‌ಗಳಲ್ಲಿ ಮೂಲ ಭೂತ ಸೌಕರ್ಯಕ್ಕೆ ಆದ್ಯತೆ ನೀಡಬೇಕು. ಈ ಬಜೆಟ್‌ನಲ್ಲಾದರು ಜನರ ಬೇಡಿಕೆಗಳನ್ನು ಆದ್ಯತೆ ಮೇಲೆ ಅನುಧಾನ ಒದಗಿಸಿ ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಹಾಸನ ಜಿಲ್ಲಾ ಮುಖಂಡ ಪೃಥ್ವಿ ಎಂ.ಜಿ ಮಾತನಾಡಿ, ಅರಕಲಗೂಡು ತಾಲ್ಲೂಕಿನ 'ಗಂಗೂರು ಜೀತವಿಮುಕ್ತ ದಲಿತರಿಗೆ ಉಳುಮೆ ಭೂಮಿ ಮಂಜೂರು ಮಾಡವಂತೆ ರಾಜ್ಯ ಸರಕಾರ ಕೂಡಲೇ ಕ್ರಮವಹಿಸಬೇಕು ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ಡಾ.ಕೆ ಪ್ರಕಾಶ್, ಡಿಹೆಚ್‌ಎಸ್ ಮುಖಂಡರಾದ ಸುಧಾಮ್ ದಿನ್ನಿ, ಪಾಂಡುರಂಗ್, ರಾಜಣ್ಣ, ಕೃಷ್ಣ, ಎನ್. ನಾಗರಾಜ್ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಕಾರರು ಆಗಮಿಸಿದ್ದರು.

# ಸೌಹಾರ್ದಕ್ಕೆ ಧಕ್ಕೆ ತಂದರೆ ನರಕ ಸೃಷ್ಟಿ



"ಸೌಹಾರ್ದತೆಗಾಗಿ ಬೆಂಗಳೂರು" ಏರ್ಪಡಿಸಿದ್ದ ಸೌಹಾರ್ದತೆಗಾಗಿ ನಾವು ನೀವು ಕಾರ್ಯಕ್ರಮವು ಬೆಂಗಳೂರಿನ "ಸೌಹಾರ್ದ" ಭವನದಲ್ಲಿ ನಡೆಯಿತು.

"ಚರಿತ್ರೆಯಿಂದ ಸೌಹಾರ್ದದ ಪಾಠಗಳನ್ನು ಕಲಿಯದಿದ್ದರೆ ನರಕ ಸೃಷ್ಟಿಯಾಗುತ್ತದೆ' ಎಂದು ಲೇಖಕ ಡಾ. ರಾಜಪ್ಪ ದಳವಾಯಿ ಎಚ್ಚರಿಕೆ ನೀಡಿದರು.

'ಸೌಹಾರ್ದಕ್ಕಾಗಿ ಬೆಂಗಳೂರು' ವೇದಿಕೆ ಬುಧವಾರ ಆಯೋಜಿಸಿದ್ದ 'ಸೌಹಾರ್ದಕ್ಕಾಗಿ ನಾವು–ನೀವು' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ಕಾರಗಳು ಉತ್ತಮ ಆಡಳಿತ ನೀಡದಿದ್ದಾಗ ಮತ್ತು ಪ್ರಜಾಸತ್ತಾತ್ಮಕವಾಗಿ ಮೌಲ್ಯಗಳು ನಶಿಸಿದಾಗ ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತವೆ' ಎಂದರು.

'ಎಲ್ಲ ಕಾಲದಲ್ಲೂ ಸೌಹಾರ್ದವನ್ನು ಜತನ ಮಾಡುವ ಪ್ರಯತ್ನಗಳು ಸಹ ನಡೆದಿವೆ. ಒಡೆಯುವವರಿಗಿಂತ ಕಟ್ಟು ವವರು ಬಹಳ ಜನ ಇದ್ದಾರೆ' ಎಂದರು.

'ಚರಿತ್ರೆಯ ಪಾಠಗಳನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ, ಇಂದು ಇತಿಹಾಸವನ್ನು ತಿರುಚುವ ಪ್ರಯತ್ನ ಗಳು ನಡೆದಿವೆ. ವದಂತಿಗಳನ್ನೇ ಇತಿಹಾಸ ಎಂದು ಹೇಳಲಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಕರ್ನಾಟಕದಲ್ಲೇ 1,50,350 ಹೆಚ್ಚು ಜಾತಿಗಳನ್ನು ಗುರುತಿಸಲಾಗಿದೆ. ಈ ಎಲ್ಲ ಜಾತಿಗಳನ್ನು ಸಮಾನವಾಗಿ ಕಾಣಲಾಗುತ್ತಿದೆಯೇ? ಈ ಜಾತಿಗಳ ನಡುವೆಯೇ ಸಾಕಷ್ಟು ಅಸಹನೆ ಇದೆ. ಹೀಗಾಗಿ, ಜಾತಿಗಳ ನಡುವೆ ಮೊದಲು ಸೌಹಾರ್ದ ಮೂಡಬೇಕಾಗಿದೆ' ಎಂದು ತಿಳಿಸಿದರು.

'ಸೌಹಾರ್ದ ಎನ್ನುವುದು ನಮ್ಮ ಜಪವಾಗಬೇಕು. ರಾಜಕೀಯ, ಸಾಮಾಜಿಕ, ಜಾತಿ ಮತ್ತು ಧರ್ಮದ ಜತೆ ಶಾಂತಿ ಮತ್ತು ಸೌಹಾರ್ದವೂ ತಳಕು ಹಾಕಿಕೊಂಡಿದೆ. ಎಷ್ಟೇ ಧಕ್ಕೆ ತರುವ ಪ್ರಯತ್ನಗಳು ನಡೆದರೂ ಶಾಂತಿಯ ಪ್ರತಿಪಾದಕರಾಗಿಬೇಕು' ಎಂದು ಕರೆ ನೀಡಿದರು.

ಅಖಿಲ ಕರ್ನಾಟಕ ಸೂಫಿ ಸಂತರ ಸಂಘದ ಅಧ್ಯಕ್ಷ ಸೂಫಿ ವಲಿಬಾ ಮಾತನಾಡಿ, 'ರಾಷ್ಟ್ರಧ್ವಜದ ಮತ್ತು ಮಹಾತ್ಮ ಗಾಂಧೀಜಿಯ ಹಾಗೂ ಟಿಪ್ಪು ಸುಲ್ತಾನ್ ವಿರೋಧಿಗಳು ಸೌಹಾರ್ದದ ವಿರೋಧಿಗಳು' ಎಂದು ಟೀಕಿಸಿದರು.

'ದೇಶದಲ್ಲಿ ಒಂದೇ ಸಂಸ್ಕೃತಿ ಇಲ್ಲ. ಬಹುತ್ವ ಸಂಸ್ಕೃತಿ ನಮ್ಮದು. ಜಾತಿ, ಧರ್ಮಗಳನ್ನು ಮನೆಗೆ ಸೀಮಿತ ಮಾಡಿ ಕೊಳ್ಳ ಬೇಕು. ಸಾರ್ವಜನಿಕ ಜೀವನದಲ್ಲಿ ಪ್ರಜಾಸತ್ತಾತ್ಮಕವಾಗಿರ ಬೇಕು' ಎಂದು ಅಭಿಪ್ರಾಯಪಟ್ಟರು.

'ಮಹಿಳೆಯರು ಮಾನ ರಕ್ಷಣೆಗಾಗಿ ಹಿಜಾಬ್ ಧರಿಸುತ್ತಾರೆ. ಈ ವಿಷಯದಲ್ಲಿ ಯಾವುದೇ ರೀತಿಯ ರಾಜಕೀಯ ಸಲ್ಲದು. ಸಮಾಜದಲ್ಲಿ ಸೌಹಾರ್ದದ ವಾತಾವರಣಕ್ಕೆ ಧಕ್ಕೆ ತರುವ ಕೀಳುಮಟ್ಟಕ್ಕೆ ಕೆಲವರು ಇಳಿದಿದ್ದಾರೆ. ಮಾಧ್ಯಮಗಳು ಸಹ ಸೌಹಾರ್ದಕ್ಕೆ ಶ್ರಮಿಸಬೇಕು' ಎಂದು ಸಲಹೆ ನೀಡಿದರು.

ನಾದ ಮಣಿನಾಲ್ಕೂರು ಸೌಹಾರ್ದತೆಯ ಹಾಡುಗಳನ್ನಾಡಿದರು., ಡಾ. ಶಾಖಿರಾ ಖಾನಮ್ ಹಾಗೂ ಶಿವಣ್ಣ ರವರು ಕವನ ವಾಚಿಸಿದರು. ಎಸ್.ವೈ, ಗುರುಶಾಂತ್, ಹಂದಲಗೆರೆ ಗಿರೀಶ್ ಸೌಹಾರ್ಧತೆಯ ಕತೆ ಓದಿದರು, ರಾಹುಲ್ ಜಾರ್ಜ್ ಹಾಗೂ ಸೂಫಿ ವಲಿಬಾ ಮಾತನಾಡಿದರು.

ಕಾರ್ಯಕ್ರಮದಲ್ಲಿ 'ಸೌಹಾರ್ದಕ್ಕಾಗಿ ಬೆಂಗಳೂರು' ಪೋಸ್ಟರ್ ಬಿಡುಗಡೆ ಮಾಡಿದರು.

ಸೌಹಾರ್ದ ಕರ್ನಾಟಕ ವೇದಿಕೆಯ ಸಂಚಾಲಕರಾದ ಎಸ್.ವೈ, ಗುರುಶಾಂತ್ ರವರು ಅಧ್ಯಕ್ಷತೆ ವಹಿಸಿದ್ದರು.

ಜನವಾದಿ ಮಹಿಳಾ ಸಂಘಟನೆ ಸಂಚಾಲಕಿ ಕೆ.ಎಸ್. ವಿಮಲಾ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಹುಳ್ಳಿ ಉಮೇಶ್ ಸ್ವಾಗತಿಸಿದರು. ಗೌರಮ್ಮ ರವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ನಾಡಿನ ಚಿಂತಕರಾದ ಡಾ. ವಿಜಯಾ ಸೇರಿದಂತೆ ಜನಚಳುವಳಿಗಳ ಮುಖಂಡರು ಭಾಗವಹಿಸಿದ್ದರು.





**JANASHAKTHI KANNADA VARA PATRIKE:** Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
**Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **NITYANANDASWAMI**